ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೦ ಮೇ-೨೦೧೦ ಸಂಚಿಕೆ-೧೦



ಬೆಳೆಯುತ್ತಿರುವ ಹಿಂಸೆ,
ಹೆಚ್ಚುತ್ತಿರುವ ಪ್ರತಿಹಿಂಸೆ,
ಸಮಾಜದ ಉದಾಸೀನತೆ !

ಜನಪದ ವಿಚಾರದಲ್ಲಿ

ಮೇ-೨೦೧೦

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮೇ- ೨೦೧೦
ಸಂಪುಟ - ೧೦
ಸಂಚಿಕೆ - ೧೦

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ಮಾತುಗಳ ಸುಟ್ಟವರು

ಮಾತುಗಳ ತೂರಿ
ಜೊಳ್ಳುಗಳ ಗುಡಿಸಿ
ಅಲ್ಲಿಗೆ ಒಯ್ಯಬೇಕೆಂದು
ಗಟ್ಟಿ ಬೀಜಗಳ ಕಲೆಹಾಕಿದ್ದೆ!

ಅವು ಅಕಸ್ಮಾತ್
ನೀರಿಗೆ ಬಿದ್ದು ಒದ್ದೆಯಾದವು!
ಅಂಗಳದಲ್ಲಿ ಒಣಗು ಹಾಕಿದೆ
ಕಟಿ ಕಟಿ ಒಣಗಿದ ಅವುಗಳು
ಎದುರಾಳಿಯ ಸೊಕ್ಕು ಮುರಿದೇವೆಂದು
ಠಣಗುಡುತ್ತಿದ್ದವು!

ನನ್ನ ಕಣ್ತಪ್ಪಿಸಿ
ಒಣಗಿದ ಮಾತುಗಳಿಗೆ
ಅವರು ಬೆಂಕಿ ಇಟ್ಟರು
ಅವು ಬೂದಿಯಾದವು!

ನಾನು ಸುಟ್ಟವರಿಗೆ ನಮಿಸಿದೆ
ಅಷ್ಟು ತೂಕದ ಮಾತುಗಳ ಹೊತ್ತು
ಅಲ್ಲಿಯವರೆಗೆ ಸಾಗುವುದು ಹೋಗೆಂದು
ಯೋಚಿಸಿ ನಿತ್ರಾಣವಾಗಿದ್ದೆ
ಈಗ ನಿರಾಳ, ಇಷ್ಟೇಇಷ್ಟು
ಬೂದಿಯನ್ನು ಆರಾಮಾಗಿ ಒಯ್ಯಬಲ್ಲೆ!

ಅವರ ಕ್ರೌರ್ಯವನ್ನು ನೋಡುತ್ತಿದ್ದರೆ
ಈ ಬೂದಿಯೊಳಗಿನ ಮಾತುಗಳು
ದಿಗ್ಗನೆ ಎದ್ದು ಕ್ರಾಂತಿಯ
ಬೀಜಗಳಾಗುವುದಿಲ್ಲ
ಎಂದು ಹೇಗೆ ಹೇಳಲಿ?

— ಅರುಣ್, ಜೋಳದ ಕೂಡ್ಲಿಗಿ

ವಿಚಾರ ದೀಪ್ತಿ

ನಮ್ಮಲ್ಲೊಂದು ಯೋಜನೆಯಿದೆ. ಒಬ್ಬ ವ್ಯಕ್ತಿ ಒಂದಿಷ್ಟು ಸಣ್ಣ ನಿವೇಶನವನ್ನು ಖರೀದಿಸಿದರೆ, ಅಲ್ಲಿರುವ ಅಂತರ್ಜಲವೆಲ್ಲ ಖರೀದಿಸಿದ ವ್ಯಕ್ತಿಗೆ ಉಚಿತವಾಗಿ ಬಂದುಬಿಡುತ್ತದೆ. ಇದು ಎಲ್ಲರಿಗೂ ಉಚಿತ ಯೋಜನೆಯಾಗಿಬಿಟ್ಟಿದೆ. ಈ ಯೋಜನೆಯ ಸದುಪಯೋಗವನ್ನು ಅನೇಕ ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ಪಡೆದುಕೊಂಡವು. ಜಮೀನಿನ ಒಂದು ಭಾಗವನ್ನು ಖರೀದಿಸಿದರೆ, ಅದರೊಂದಿಗೆ ಅಪಾರ ಅಂತರ್ಜಲ ಕೂಡ ಉಚಿತವಾಗಿ ಸಿಗುತ್ತದೆ. ಸಬ್ಸಿಡಿಯಲ್ಲಿ ವಿದ್ಯುತ್ ನೀಡುತ್ತಿರುವುದರಿಂದ ರೈತರು ವಿವೇಚನಾರಹಿತರಾಗಿ ಪಂಪ್‌ಸೆಟ್‌ಗಳ ಮೂಲಕ ನೀರು ಮೊಗೆದುಕೊಳ್ಳುತ್ತಿದ್ದಾರೆ. ಈ ವಿಚಾರದಲ್ಲಿ ನಿಯಮಾವಳಿಗಳಲ್ಲಿ ದೋಷವಿದೆ. ಆ ನಿಯಮಗಳನ್ನು ಕಠಿಣವಾಗಿ ಅನುಷ್ಠಾನ ಮಾಡದಿರುವುದರಿಂದ 'ಕಂಪನಿ'ಗಳೂ ಕೂಡ ಅಂತರ್ಜಲವನ್ನು ಅವ್ಯಾಹತವಾಗಿ ಬಳಸಲು ಸಾಧ್ಯವಾಗುತ್ತಿದೆ. ಹೀಗೆ ಅವ್ಯಾಹತವಾಗಿ ನೀರು ಬಳಸುವ ವಿಷಯದಲ್ಲಿ ನಗರ ಸಭೆ, ಪಾಲಿಕೆಗಳೂ ಸೇರುತ್ತವೆ. ಇವು ಅಗಾಧ ಪ್ರಮಾಣದ ನೀರನ್ನು ಬಳಸುವ ಜೊತೆಗೆ ಪೋಲು ಮಾಡುವುದರಲ್ಲೂ ಮುಂದಾಗಿವೆ. ನೀರು ಸೋರಿಕೆಯನ್ನು ತಡೆಗಟ್ಟುವ ಯಾವ ಕಾಳಜಿಯೂ ಆ ಸಂಸ್ಥೆಗಳಿಗಿಲ್ಲ. ಭಾರತದ ಅಂತರ್ಜಲ ಪರಿಸ್ಥಿತಿಯಂತೂ ತೀರಾ ಕಳವಳಕಾರಿ ಸ್ಥಿತಿಯಲ್ಲಿದೆ. ನೀರಿನ ಬೇಡಿಕೆ ಪೂರೈಸಲು ನೀತಿ ರೂಪಕರು ಸುಲಭದ ದಾರಿ ಮಾಡಿಕೊಳ್ಳುತ್ತಿದ್ದಾರೆ. ಅಂತರ್ಜಲದ ದುಃಸ್ಥಿತಿಗೆ ಪ್ರಮುಖ ಕಾರಣವೇನೆಂದರೆ, ನೀರನ್ನು ಎಲ್ಲಿಂದ ಬೇಕಾದರೂ ಎಳೆದುಕೊಳ್ಳುವ, ಆದರೆ ಕೆಲವೇ ನಿರ್ದಿಷ್ಟ ವಲಯಗಳಲ್ಲಿ ಅದನ್ನು ತುಂಬಲು ಮಾತ್ರ ಸಾಧ್ಯವಿದೆ. ಅಂತರ್ಜಲ ಮರುಪೂರಣ ಮಾಡುವ ಬಹುತೇಕ ವಲಯಗಳನ್ನು ಅತಿಕ್ರಮಿಸಲಾಗಿದೆ ಅಥವಾಅಂಥ ಕಡೆ ಸಿ. ಜಿ. ಡಬ್ಲ್ಯೂ. ಎ. ನಿಯಂತ್ರಣ ಹೊಂದಿಲ್ಲ. ಸಂಪನ್ಮೂಲ ಅಭಿವೃದ್ಧಿ ಮಾಡುವವರು ಸಂಪನ್ಮೂಲ ನಿರ್ವಹಣೆಗಾರರಾಗುವಂಥ ಸಾರ್ವಜನಿಕ ಸಹಾಗಿತ್ವದ ಕಾರ್ಯಕ್ರಮ ರೂಪಿಸುವ ಅಗತ್ಯವಿದೆ. ಆದರೆ, ಭೂಕಬಳಿಕೆಯ ರಾಜಕೀಯ ಎಲ್ಲಿಯವರೆಗೆ ಇರುತ್ತದೆಯೋ, ಅಲ್ಲಿಯವರೆಗೆ 'ಜೀವರಕ್ಷಕ ದ್ರವ'ಕ್ಕೆ ಆಪತ್ತು ಇದ್ದೇಇದೆ. ಇದು ನೆಲದ ಮೇಲೆ ಹಾಗೂ ಕೆಳಗೂ ಅನ್ವಯವಾಗಬೇಕಿದೆ.

– *ಸುಧೀರೇಂದರ್ ಶರ್ಮ*

ಬೆಳೆಯುತ್ತಿರುವ ಹಿಂಸೆ, ಹೆಚ್ಚುತ್ತಿರುವ ಪ್ರತಿಹಿಂಸೆ, ಸಮಾಜದ ಉದಾಸೀನತೆ!

- ಸುರೇಂದ್ರ ಕೌಲಗಿ

(ಯಾರಿಗೆ ಯಾವ ನೆಲ ಸಿಗಬೇಕೋ ಅದನ್ನವರಿಗೆ ಕೊಡಬೇಕು, ಇಲ್ಲವಾದರೆ ಸರ್ವನಾಶ ಖಂಡಿತ –ಮಹಾಭಾರತ)

ಭಾರತವನ್ನು ಹಿಂಸಾ ಶಕ್ತಿಗಳು ಕಿತ್ತುತಿನ್ನುತ್ತಿವೆ. ಹಿಂಸೆ ದೇಶದ ಜನಜೀವನದ ಅವಿಭಾಜ್ಯ ಅಂಗವೆಂಬಂತೆ ಅದು ದೇಶದ ಉದ್ದಗಲಕ್ಕೂ ವ್ಯಾಪಿಸಿಕೊಳ್ಳುತ್ತಿದೆ. ದುರಂತವೆಂದರೆ ಹಿಂಸಾಶಕ್ತಿಗಳು ರಾಜಕೀಯ ಶಕ್ತಿಗಳಾಗಿ ಪರಿವರ್ತನೆಗೊಳ್ಳುತ್ತಿವೆ. ಆದರೆ ಭಾರತೀಯ ಸಮಾಜ ಮಾತ್ರ ಉದಾಸೀನತೆಯಿಂದ ಮೂಕ ಪ್ರೇಕ್ಷಕನಾಗಿ ಕುಳಿತಿದೆ. ಹಿಂಸಾ ಶಕ್ತಿಗಳು ತಮ್ಮದೇ ಆದ ಅಜೆಂಡಾ ಹೊಂದಿವೆ. ಒಂದೊಂದು ಹಿಂಸಾಪ್ರಕರಣ ಸ್ಫೋಟಿಸಿದಾಗಲೂ ಅವು ರಾಜಕೀಯವಾಗಿ ಬಲಗೊಳ್ಳುತ್ತಿವೆ. ಅವು ಎಷ್ಟೊಂದು ಚಾಣಾಕ್ಷವಾಗಿವೆಯೆಂದರೆ ತಾವು ಎಸಗುವ ಹಿಂಸಾಕೃತ್ಯಗಳ ದಮನಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಅರೆಸೈನಿಕ ಪಡೆ, ಪೋಲಿಸ್ ಪಡೆ, ಕ್ಷಿಪ್ರ ಕಾರ್ಯಾಚರಣಾ ದಳ ಇತ್ಯಾದಿ ಪಡೆಗಳನ್ನು ಉಪಯೋಗಿಸಬೇಕಾಗಿಬರುವಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತವೆ. ಹಾಗೆ ಮಾಡುವುದರ ಮೂಲಕ ದೇಶದ ಸಂವಿಧಾನಬದ್ಧ ಸರ್ಕಾರಗಳನ್ನು ಹಿಂಸಾಚಾರಕ್ಕೆ ಎಳೆಯುತ್ತವೆ. ಯಾವಾಗ ಸರ್ಕಾರವನ್ನು ರಣಾಂಗಣಕ್ಕೆ ಎಳೆಯುವಂತೆ ಮಾಡುವಲ್ಲಿ ಅವು ಯಶಸ್ವಿಯಾಗುತ್ತವೆಯೋ ಆಗ ಹಿಂಸಾಚಾರಕ್ಕೂ ರಾಜಕೀಯ ಸ್ವರೂಪ ಬರುತ್ತದೆ. ಯಾವಾಗ ಹಿಂಸಾಚಾರ ರಾಜಕೀಯ ಸ್ವರೂಪವನ್ನು ಪಡೆಯುತ್ತದೋ ಅದೊಂದು ಆತಂಕಕಾರಿ ಸಾಮಾಜಿಕ, ಆರ್ಥಿಕ, ರಾಜಕೀಯ ಬೆಳವಣಿಗೆಯ ರೂಪ ಪಡೆದು ಅಂತಾರಾಷ್ಟ್ರೀಯ ಸಮಸ್ಯೆಯಾಗುವತ್ತ ದಾಪುಗಾಲು ಹಾಕುತ್ತದೆ. ಭಾರತದೊಂದಿಗೆ ಮೈತ್ರಿ ಭಾವನೆಯನ್ನು ಹೊಂದದೇ ಇರುವ ನೆರೆಯ ರಾಷ್ಟ್ರಗಳು ದೇಶದ ಕದಡಿದ ರಾಜಕೀಯ ನೀರಿನಲ್ಲಿ ಮೀನು ಹಿಡಿಯುವ ಪ್ರಯತ್ನ ಮಾಡುತ್ತವೆ. ಇಂಥ ಪರಿಸ್ಥಿತಿ ಈಗಾಗಲೇ ಉಂಟಾಗಿದೆ. ತಾಲಿಬಾನ್ ಮತ್ತು ಅದರಂಥ ಇತರೆ ಸಂಘಟನೆಗಳು ಪಾಕಿಸ್ತಾನದಿಂದ ಹಣಬಲ, ಶಸ್ತ್ರಾಸ್ತ್ರಬಲ, ಮಾನವಬಲ, ಪ್ರಶಿಕ್ಷಣಬಲ ಇತ್ಯಾದಿಗಳನ್ನು ಪಡೆಯುತ್ತಿವೆ. ನಕ್ಸಲೀಯರು, ಮಾವೊವಾದಿಗಳು ಚೀನಾ ದೇಶದಿಂದ ಎಲ್ಲವನ್ನೂ ಪಡೆಯುತ್ತಿದ್ದಾರೆ. ಗಡಿಯಾಚೆಯಿಂದ ಸಹಾಯ ಮತ್ತು ಪ್ರೋತ್ಸಾಹವನ್ನು ಪಡೆದೇ ಮಾವೋವಾದಿಗಳು ನೇಪಾಳವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಈಗ ಭಾರತವನ್ನು ತಮ್ಮ ತೆಕ್ಕೆಯೊಳಗೆ ತೆಗೆದುಕೊಳ್ಳಲು ತೀವ್ರ ಪ್ರಯತ್ನವನ್ನು ನಡೆಸಿದ್ದಾರೆ. ಈಗಾಗಲೇ ದೇಶದ ಇಪ್ಪತ್ತೈದು ರಾಜ್ಯಗಳ ಪೈಕಿ ಹತ್ತು

ರಾಜ್ಯಗಳಲ್ಲಿ ತಮ್ಮ ಪ್ರಭಾವ ಮತ್ತು ಶಕ್ತಿಯನ್ನು ಹೆಚ್ಚಿಸಿಕೊಂಡಿದ್ದಾರೆ. ನಕ್ಸಲೀಯರು, ಮಾವೋವಾದಿಗಳು ಮತ್ತು ತಾಲಿಬಾನಿಗಳು ಪರೋಕ್ಷದಲ್ಲಿ ರಾಜಕೀಯವಾಗಿ ಸಂಘಟಿತರಾಗಿ ಭಾರತದ ಕೇಂದ್ರ ಸರ್ಕಾರದ ವಿರುದ್ಧ ಅಂತರ್ಯುದ್ಧವನ್ನು ಸಾರಿವೆ. ಅತಿಯಾದ ಹಿಂಸಾಚಾರಕ್ಕೆ ಇಳಿಯುವುದರ ಮೂಲಕ ಕೇಂದ್ರಸರ್ಕಾರ ತನ್ನ ಸೈನ್ಯ ಬಲವನ್ನು ಉಪಯೋಗಿಸುವಂತೆ ಮಾಡುವ ಪರಿಸ್ಥಿತಿಯ ಒತ್ತಡವನ್ನು ಆ ಸಂಘಟನೆಗಳು ತರುತ್ತಿವೆ. ಸೈನ್ಯಾಚರಣೆ ಕೈಗೊಂಡರೆ ಎಲ್ಲಿ ಅದನ್ನು ಸಮರವೆಂದೇ ಕರೆಯಲಾಗುವುದೋ ಎಂಬ ಭೀತಿಯಿಂದ ಸರ್ಕಾರ ಸೈನ್ಯಾಚರಣೆಯಲ್ಲಿ ತೊಡಗಲು ಮೀನ ಮೇಷ ಎಣಿಸುತ್ತಿದೆ. ಆದರೆ ಕಳೆದ ಏಪ್ರಿಲ್ ೬ರಂದು ಛತ್ತೀಸಗಢ ರಾಜ್ಯದ ದಾಂತೆವಾಡಾದಲ್ಲಿ ನಕ್ಸಲೀಯರು ಕೇಂದ್ರ ಮೀಸಲು ಪಡೆಯ ೭೬ಸೈನಿಕರನ್ನು ಹತ್ಯೆ ಮಾಡಿದ ಮೇಲೆ ಮತ್ತು ಅಂಥ ದಾಳಿಗಳ ಸಾಧ್ಯತೆ ಹೆಚ್ಚಾಗುವ ಸಂಭವವಿರುವಾಗ ಕೇಂದ್ರ ಸಕಾರ ಸೈನ್ಯಾಚರಣೆ ಕೈಗೊಳ್ಳಲೇಬೇಕಾದ ಪರಿಸ್ಥಿತಿ ಉಂಟಾದರೆ ಅದೇನೂ ಸಲ್ಲದ ಕ್ರಮವಾಗಲಿಕ್ಕಿಲ್ಲ. ಹೀಗೆ ನಕ್ಸಲೀಯರು ಹೇಗಾದರೂ ಮಾಡಿ ತಮ್ಮ ಹೋರಾಟಕ್ಕೆ ಸಮರರೂಪ ಬರುವಂತೆ ಮಾಡುವುದರ ಮೂಲಕ ಅದಕ್ಕೆ ರಾಜಕೀಯ ಬಣ್ಣ ಬರಬೇಕೆಂಬ ತವಕದಲ್ಲಿದ್ದರೆ, ತಾಲಿಬಾನ್ ಸಂಘಟನೆಗಳೂ ಕೂಡ ದೇಶದಲ್ಲಿ ರಾಜಕೀಯ ಅಸ್ಥಿರತೆಯನ್ನು ಉಂಟುಮಾಡಲು ನಿರಂತರವಾಗಿ ಪ್ರಯತ್ನಿಸುತ್ತಿವೆ. ತಮ್ಮ ಹೋರಾಟಕ್ಕೆ ಕೋಮುವಾದದ ರಾಜಕಾರಣವೂ ಸೇರುವಂತೆ ಮಾಡಿ ದೇಶದಲ್ಲಿ ಸಾಮಾಜಿಕ ಕ್ಷೋಭೆಯುಂಟಾಗುವ ಗುರಿಯತ್ತ ಅವು ಧಾವಿಸುತ್ತಿವೆ.

ದೇಶಕ್ಕೆ ಸ್ವಾತಂತ್ರ್ಯ ಬಂದ ಅರವತ್ತೈದು ವರ್ಷಗಳಲ್ಲಿಯೇ ಹಿಂಸಾಚಾರ ಇಷ್ಟೊಂದು ಬೆಳೆಯುವುದಕ್ಕೆ ಯಾರು ಕಾರಣರು, ಏನು ಕಾರಣಗಳೆಂಬ ಬಗ್ಗೆ ಗಂಭೀರ ಚರ್ಚೆ ನಡೆಯದೇ ಇರುವುದು ಅತ್ಯಂತ ದುರ್ದೈವದ ಸಂಗತಿ. ನಮ್ಮ ದೇಶದ ಸಾಮಾಜಿಕ ಪ್ರಜ್ಞೆ, ದೇಶದ ಆತ್ಮ ಸಾಕ್ಷಿ, ಸನಾತನ ಮೌಲ್ಯಗಳೆಲ್ಲ ಇಷ್ಟುಬೇಗ ನಿರುಪಯುಕ್ತವಾದುವೆ? ಈ ಪ್ರಶ್ನೆಗಳನ್ನು ಕುರಿತು ಸಮಸ್ತ ಭಾರತೀಯರು ಚಿಂತಿಸಬೇಕಿದೆ, ಪರಿಹಾರ ಕಂಡುಹಿಡಿಯಬೇಕಿದೆ.

ನಕ್ಸಲೀಯರಾಗಲೀ, ತಾಲಿಬಾನಿಗಳಾಗಲೀ ತಮ್ಮ ಹಿಂಸಾಚಾರದ ಹಿಂದಿರುವ ಉದ್ದೇಶವೇನು, ಗುರಿಯೇನು, ಏನನ್ನು ಸಾಧಿಸಬಯಸಿದ್ದಾರೆ ಮುಂತಾದ ಮೂಲಭೂತ ವಿಷಯಗಳನ್ನು ತಿಳಿಸುವ ಪ್ರಣಾಲಿಕೆಯನ್ನು ಪ್ರಕಟಪಡಿಸಿಲ್ಲ. ಅಂಥ ಪ್ರಣಾಲಿಕೆ ಅಥವಾ ಅಜೆಂಡಾ ಪ್ರಕಟಿಸಿದ್ದರೆ ಅವುಗಳನ್ನು ಪರಿಹರಿಸುವುದು ನಮ್ಮ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಕಷ್ಟವಾಗುತ್ತಿರಲಿಲ್ಲ. ಆದರೆ ಏನು ಕಾರಣವೋ ಆ ಸಂಘಟನೆಗಳು ತಮ್ಮ ಪ್ರಣಾಲಿಕೆಯನ್ನು ಪ್ರಕಟಿಸುವಲ್ಲಿ ತಮ್ಮ ನೈತಿಕ ಸ್ಥೈರ್ಯವನ್ನು ಕಳೆದುಕೊಂಡಿವೆ. ಆ ಸಂಘಟನೆಗಳು ಚರ್ಚೆಗೆ ಬರುವಂತೆ ಮಾಡುವ ಅನುಕೂಲಕರವಾದ ವಾತಾವರಣವನ್ನು, ಪರಿಸ್ಥಿತಿಯನ್ನು, ಪರಿಸರವನ್ನು ನಿರ್ಮಾಣಮಾಡುವ ಹೊಣೆ ನೇರವಾಗಿ ಭಾರತೀಯ ಸಮುದಾಯದ್ದಾಗಿದೆ. ಈ ಅರವತ್ತೈದು ವರ್ಷಗಳ ಘಟನಾವಳಿಗಳನ್ನು ಅವಲೋಕಿಸಿದರೆ ನಮ್ಮ ದೇಶದ ರಾಜಕೀಯ ನೇತೃತ್ವ ಹಿಂಸಾಪರ ಸಂಘಟನೆಗಳ ಉಗಮಕ್ಕೆ ಕಾರಣವಾಗುವ ಸನ್ನಿವೇಶಗಳನ್ನು ತಪ್ಪಿಸುವಲ್ಲಿ ವಿಫಲವಾಗಿದೆ. ಆಳವಾಗಿ ಆಲೋಚಿಸಿದರೆ,

ಅದಕ್ಷ, ದೂರದರ್ಶಿತ್ವರಹಿತ, ಭ್ರಷ್ಟ ನೇತೃತ್ವವೇ ಇಂದಿನ ಎಲ್ಲ ದುರಂತಗಳಿಗೆ ಕಾರಣವಾಗಿದೆಯೆಂದು ಗೊತ್ತಾಗುತ್ತದೆ. ಆದರೆ ದುರ್ಬಲವಾದ, ದಿಶಾಹೀನವಾದ, ನೀತಿಹೀನವಾದ ರಾಜಕೀಯ ನೇತೃತ್ವದ ಸುಧಾರಣೆಗೆ ಭಾರತೀಯ ಸಮಾಜ ಏನೂ ಮಾಡದೇ ಇರುವುದು, ಕ್ರಿಯಾಶೂನ್ಯವಾಗಿರುವುದು, ಚಿಂತನಾರಹಿತವಾಗಿರುವುದು ಎಲ್ಲ ದುರಂತಗಳಿಗಿಂತ ದೊಡ್ಡ ದುರಂತವಾಗಿದೆ.

ಇಂದಿನ ನಕ್ಸಲೀಯರ ಹೋರಾಟಕ್ಕೆ, ತಾಲಿಬಾನಿಗಳ ಹೋರಾಟಕ್ಕೆ ವಿರುದ್ಧವಾಗಿ ಸರ್ಕಾರವೊಂದೇ ಕೆಲಸ ಮಾಡುತ್ತಿದೆಯೇ ವಿನಃ ಭಾರತೀಯ ಸಮಾಜ ತನ್ನ ಕರ್ತವ್ಯವನ್ನು ಪಾಲಿಸುತ್ತಿದೆಯೇ? ಈ ವಿಷಯದಲ್ಲಿ ತನ್ನದೇನೂ ಕರ್ತವ್ಯವಿಲ್ಲವೆನ್ನುವಂತೆ ಅದು ಸುಮ್ಮನೆ ಕೈಕಟ್ಟಿ ಕುಳಿತಿದೆ, ಮೂಕ ಪ್ರೇಕ್ಷಕನಾಗಿ ಕುಳಿತಿದೆ, ಉದಾಸೀನವಾಗಿ ಕುಳಿತಿದೆ, ತಟಸ್ಥವಾಗಿ ಕುಳಿತಿದೆ. ಇಂಥ ಸಾಮಾಜಿಕ ಪರಿಸ್ಥಿತಿ ಯಾವುದೇ ಜೀವಂತ, ಪ್ರಬುದ್ಧ, ಪ್ರಜ್ಞಾವಂತ ದೇಶಕ್ಕೆ ಗೌರವ ತರುವಂಥದಲ್ಲ. ಆದ್ದರಿಂದ ಹಿಂಸೆಯ ಜ್ವಾಲೆ ದೇಶವನ್ನು ನಾಶಪಡಿಸುವ ಮೊದಲೇ, ದೇಶವಾಸಿಗಳ ಆತ್ಮ ವಿಶ್ವಾಸ ಕಳೆದು ಹೋಗುವ ಮೊದಲೇ ಭಾರತೀಯರೆಲ್ಲ ಒಂದುಗೂಡಿ ಹಿಂಸೆಯ ವಿರುದ್ಧವೇ ಸಮರವನ್ನು ಸಾರಬೇಕಿದೆ. ಈ ಸಮರದಲ್ಲಿ ಹಿಂದೂ ಸಂಘಟನೆಗಳು, ಮುಸ್ಲಿಂ ಸಂಘಟನೆಗಳು, ಕ್ರಿಶ್ಚಿಯನ್ ಸಂಘಟನೆಗಳಲ್ಲದೆ ಇತರ ಎಲ್ಲ ಧರ್ಮೀಯ ಸಂಘಟನೆಗಳು ಒಗ್ಗೂಡಬೇಕು. ಏಕೆಂದರೆ ಭಾರತವುಳಿದರೇನೇ ದೇಶದಲ್ಲಿರುವ ಎಲ್ಲ ಧರ್ಮಗಳು ಮತ್ತು ಆ ಧರ್ಮಗಳ ಅನುಯಾಯಿಗಳು ಉಳಿಯಲು ಸಾಧ್ಯ.

ಇಂದಿನ ವಿಜ್ಞಾನ ಯುಗದಲ್ಲಿ ಧರ್ಮಗಳ ವ್ಯಾಖ್ಯೆ ಬದಲಾಗಿದೆ; ಅವುಗಳ ವಿಚಾರದ ಹರವು ವಿಸ್ತಾರವಾಗಿದೆ. ಕೂಪಮಂಡೂಕ ಭಾವನೆ ಅಪಮೌಲ್ಯಗೊಂಡಿದೆ. ಹಿಂಸಾಚಾರ ಇಂದು ವಿಶ್ವವ್ಯಾಪಿ ಸಮಸ್ಯೆಯಾಗಿದೆ. ಆದ್ದರಿಂದ ವಿಶ್ವವ್ಯಾಪಿ ಕಾರ್ಯಾಚರಣೆಯೇ ಬೇಕಿದೆ.

ಅದರ ನಿವಾರಣೆಗೆ ಇಂದಿನ ಹಿಂಸಾಮಯ ಅಂಧಕಾರದಲ್ಲಿ ಆಸೆಯ ಬೆಳಕಿನ ತುಣುಕು ಏನೆಂದರೆ, ಹಿಂಸೆಗೆ ಪ್ರೋತ್ಸಾಹ ಕೊಡುತ್ತಿರುವವರೇ ಹಿಂಸೆಯ ಭರ್ತ್ಸಕರಾಗುತ್ತಿದ್ದಾರೆ. ಅಮೇರಿಕಾ, ರಷ್ಯಾ ಮುಂತಾದ ದೇಶಗಳು ಅಣ್ವಸ್ತ್ರಗಳನ್ನು ನಾಶಪಡಿಸಬೇಕೆಂದು ಆಲೋಚಿಸುತ್ತಿವೆ. ಅಣುಶಕ್ತಿಯ ನಿರ್ಮಾಣದ ಮೇಲೆಯೇ ನಿಯಂತ್ರಣಬೇಕೆಂದು ವಾದಿಸುತ್ತಿವೆ. ಶ್ರೀಲಂಕಾದಲ್ಲಿ ಮೂವತ್ತು ವರ್ಷ ಹಿಂಸಾಚಾರ ನಡೆಸಿದ ಪ್ರಭಾಕರನ್ ಕೊನೆಗೆ ಪ್ರತಿಹಿಂಸೆಗೆ ತುತ್ತಾಗಬೇಕಾಯಿತು; ಹಿಂಸೆಯನ್ನೇ ತನ್ನ ಆರಾಧ್ಯ ದೈವವನ್ನಾಗಿರಿಸಿಕೊಂಡಿದ್ದ ಸದ್ದಾಂ ಹುಸೇನ್ ಸ್ವತಃ ನೇಣುಗಂಬವನ್ನೇರಬೇಕಾಯಿತು; ಸದಾ ಕೋವಿಯನ್ನೇ ಇಟ್ಟುಕೊಂಡು ಕಾಡಿನಲ್ಲಿ ಓಡಾಡಿಕೊಂಡಿದ್ದ ವೀರಪ್ಪನ್ ಏನನ್ನೂ ಸಾಧಿಸಲಾರದೆ ತಾನೇ ಬಂದೂಕಿನ ಗುಂಡಿಗೆ ಬಲಿಯಾಗಬೇಕಾಯಿತು. ಇಂದು ಯಾವ ನಕ್ಸಲ್‌ವಾದಿಗಳು – ಮಾವೋವಾದಿಗಳು ದೇಶವನ್ನು ತಮ್ಮ ಕನಸಿನ ಆದರ್ಶ ಸಮಾಜಕ್ಕಾಗಿ ಅಥವಾ ಸಾಮಾಜಿಕ ಮೌಲ್ಯಕ್ಕಾಗಿ ಹಿಂಸೆಗೆ ಒತ್ತೆ ಇಡುತ್ತಿದ್ದಾರೋ ಆ ವಿಚಾರಗಳ ಸ್ಥಾಪಕರೂ, ಮಾರ್ಗದರ್ಶಕರೂ ಆಗಿದ್ದ ಕನು ಸನ್ಯಾಲ್ ಕೊನೆಗೆ ತಮ್ಮ ಹಿಂಸಾಮಾರ್ಗದ ಬಗ್ಗೆ ಭ್ರಮನಿರಸನಗೊಂಡು, ತಾತ್ವಿಕವಾಗಿ ಶೂನ್ಯಮನಸ್ಕರಾಗಿ, ತಾವು ಪ್ರಾರಂಭಿಸಿದ ಹೋರಾಟದ ನಿರರ್ಥಕತೆಯ

ಬಗ್ಗೆ ಆಘಾತಗೊಂಡವರಾಗಿ ತಮ್ಮ ೭೮ನೇ ವಯಸ್ಸಿನಲ್ಲಿ ತಾವೇ ಕೈಯಾರೆ ನೇಣುಹಾಕಿಕೊಳ್ಳಬೇಕಾಯಿತು. ತಾಲಿಬಾನ್ ಸಂಘಟನೆಯ ಮುಖಂಡ ಒಸಾಮ ಬಿನ್ ಲಾಡೆನ್ ತಲೆಮರೆಸಿಕೊಂಡು ಇರಬೇಕಾಗಿದೆ. ಈ ಎಲ್ಲ ಹತಭಾಗ್ಯರ ಉದ್ದೇಶವೆಷ್ಟೇ ಘನವಾಗಿರಲಿ, ಆ ಉದ್ದೇಶದ ಸಾಧನೆಯ ಮಾರ್ಗ ಅಶುದ್ಧವಾಗಿದ್ದರೆ, ಅಮಾನವೀಯವಾಗಿದ್ದರೆ ಆ ಉದ್ದೇಶ ಈಡೇರಲಾರದೆಂಬ ಗಾಂಧೀಜಿಯವರ ಮಾತು ಪುನಃ ಪುನಃ ಪುಷ್ಟಿಗೊಳ್ಳುತ್ತಿದೆ. ಮುಸ್ಲಿಮರು ತಮ್ಮ ಧರ್ಮ ಇಸ್ಲಾಮ್ ಅಂದರೆ ಶಾಂತಿಪ್ರಿಯ ಧರ್ಮವೆಂದು ಹೇಳಿಕೊಳ್ಳುತ್ತಾರೆ, ಹಿಂದುಗಳು ಸರ್ವೇಜನಾಃ ಸುಖಿನೋಭವಂತು ಎಂದು ಹೇಳುತ್ತಾರೆ, ನಿನ್ನಂತೆಯೇ ನಿನ್ನ ನೆರೆಯವರನ್ನು ಪ್ರೀತಿಸು ಎಂದು ಈಸಾಯಿಗಳು ಹೇಳುತ್ತಾರೆ. ಹಾಗಿರುವಾಗ ಪರಸ್ಪರರ ವಿರುದ್ಧ ಕಾದಾಟವೇಕೆ?

ಈ ಕಾದಾಟಕ್ಕೆ ಮುಖ್ಯ ಕಾರಣ ಇಂದು ನಮ್ಮ ಸರ್ಕಾರಗಳು ಅನುಸರಿಸುತ್ತಿರುವ ತಪ್ಪು ಅಭಿವೃದ್ಧಿಯ ನೀತಿ ಮತ್ತು ಎಲ್ಲ ವಿಷಯಗಳಲ್ಲಿಯೂ ಪಾಶ್ಚಿಮಾತ್ಯರ ಅಂಧಾನುಕರಣೆ. ನಕ್ಸಲ್‌ವಾದದ ಹಿಂದೆ ಆರ್ಥಿಕ ವಿಚಾರ, ಸಾಮಾಜಿಕ ನ್ಯಾಯ, ಭೂಮಿಮೇಲಿನ ಹಕ್ಕುಗಳ ಸ್ಥಾಪನೆ ಇತ್ಯಾದಿ ವಿಚಾರಗಳು ಪ್ರೇರಕ ಶಕ್ತಿಯಾಗಿದ್ದರೆ, ತಾಲಿಬಾನ್‌ನಂಥ ಸಂಘಟನೆಗಳಿಗೆ ಕೇವಲ ಕೋಮುವಾದ ಪ್ರೇರಕ ಶಕ್ತಿಯಾಗಿದೆ.

ನಕ್ಸಲ್‌ವಾದ ಮತ್ತು ತಾಲಿಬಾನ್‌ವಾದಗಳನ್ನು ಕೇವಲ ರಾಜ್ಯಶಕ್ತಿಯಿಂದ, ದಂಡಶಕ್ತಿಯಿಂದ ದಮನಗೊಳಿಸಲು ಸಾಧ್ಯವಿಲ್ಲ. ರಾಜ್ಯಶಕ್ತಿ ಮತ್ತು ದಂಡಶಕ್ತಿಗಳ ಜೊತೆಗೆ ಮೈತ್ರಿಶಕ್ತಿ, ಅಹಿಂಸಾಶಕ್ತಿಗಳೂ ಪೂರಕವಾಗಿ ಕೆಲಸ ಮಾಡಬೇಕಾಗುತ್ತದೆ. ಈ ವಿಷಯದಲ್ಲಿ ಎಲ್ಲ ಧರ್ಮಗಳ ಮುಖ್ಯಸ್ಥರ ಮೆಲೆ ಬಹುದೊಡ್ಡ ಹೊಣೆಗಾರಿಕೆಯಿದೆ. ಅವರೆಲ್ಲರ ಮೊದಲ ಆದ್ಯತೆ ಭಾರತವಾಗಿದ್ದರೆ ಗಡಿಯಾಚೆಗಿನ ತಮ್ಮ ಸಂಬಂಧಗಳನ್ನು ಕಳಚಿ ಭಾರತೀಯರಾಗಿ ಆಲೋಚಿಸಬೇಕು, ಭಾರತೀಯರಾಗಿ ತಮ್ಮ ಜೀವನ ಪದ್ಧತಿಯನ್ನು ಮಾರ್ಪಡಿಸಿಕೊಳ್ಳಬೇಕು.

ದೇಶದಲ್ಲಿ ಅಹಿಂಸೆಯಲ್ಲಿ ನಂಬಿಕೆಯಿಡುವವರ ಬಹುದೊಡ್ಡ ಸಂಖ್ಯೆಯಿದೆ. ಗಾಂಧೀಜಿ, ವಿನೋಬಾ, ಜೆ.ಪಿ.ಯವರ ಅನುಯಾಯಿಗಳು ದೊಡ್ಡ ಸಂಖ್ಯೆಯಲ್ಲಿಯೂ ಇದ್ದಾರೆ ಮತ್ತು ತಕ್ಕಮಟ್ಟಿಗೆ ಕ್ರಿಯಾಶೀಲರಾಗಿಯೂ ಇದ್ದಾರೆ. ಗಾಂಧೀವಿಚಾರದ ಈ ಗಣಸಮೂಹ ಈಗ ಹೆಚ್ಚು ಕ್ರಿಯಾಶೀಲರಾಗಬೇಕಿದೆ. ಹಿಂಸೆಯ ಮೂಲಗಳ ಬಳಿಗೇ ಅವರು ಹೋಗಬೇಕಿದೆ. ಸಂಧಾನದ ಸಂವಿಧಾನದ, ಮೈತ್ರಿಯ, ವಿಶ್ವಾಸದ, ಸಾಂತ್ವನದ ಮಾತುಗಳನ್ನು ಸಂಬಂಧಪಟ್ಟವರೊಂದಿಗೆ ಆಡಬೇಕಿದೆ. ದಂಡಶಕ್ತಿಯ ಬದಲಾಗಿ ಲೋಕಶಕ್ತಿಯ ಉಪಯೋಗಕ್ಕೆ ಬರುವಂತೆ ಮಾಡಬೇಕಿದೆ. ಸತ್ಯಾಗ್ರಹದ ಬಳಕೆಯನ್ನು ಮಾಡಬೇಕಿದೆ. ಇಂದು ಗಾಂಧೀ, ವಿನೋಬಾ, ಜೆ.ಪಿ. ನಮ್ಮ ಮಧ್ಯೆ ಇದ್ದಿದ್ದರೆ ಅವರು ಖಂಡಿತಾ ಅಹಿಂಸೆಯ ದಾರಿಯನ್ನು ನಕ್ಸಲರಿಗೂ, ತಾಲಿಬಾನಿಗಳಿಗೂ ತೋರಿಸುತ್ತಿದ್ದರು ಮತ್ತು ಅವರೆಲ್ಲರೂ ರಾಷ್ಟ್ರದ ಮುಖ್ಯವಾಹಿನಿಯೊಂದಿಗೆ ಸೇರುವಂತೆ ಮಾಡುತ್ತಿದ್ದರು. ಅಂಥ ಅಹಿಂಸಾತ್ಮಕ ಕೆಲಸ ಈಗ ಆಗಬೇಕಿದೆ. ಅಹಿಂಸೆಯಲ್ಲಿಯ ಅಗಾಧ ಶಕ್ತಿಯನ್ನು ತೋರಿಸಲು ಇದು ಸಕಾಲ.

ಯಾವ ಭೂಸಮಸ್ಯೆಯನ್ನು ಪ್ರಧಾನವಾಗಿಟ್ಟುಕೊಂಡು ನಕ್ಸಲ್‌ವಾದದ ಜನಕರಾದ ಚಾರು ಮಜುಮ್ದಾರ್ ಮತ್ತು ಕನು ಸನ್ಯಾಲ್ ೪೦ ವರ್ಷಗಳಹಿಂದೆ ಕೋವಿಯನ್ನಿಟ್ಟುಕೊಂಡು ಭೂಮಿಹೀನರ ಮತ್ತು ಬುಡಕಟ್ಟು ಜನಾಂಗದವರ ಭೂಮಿಮೇಲಿನ ಒಡೆತನವನ್ನು ಸ್ಥಾಪಿಸುವುದಕ್ಕಾಗಿ ಹೋರಾಟ ಪ್ರಾರಂಭಿಸಿದರೋ ಮತ್ತು ಆ ಹೋರಾಟವನ್ನು ಪಶ್ಚಿಮ ಬಂಗಾಲ ರಾಜ್ಯದಿಂದ ದಕ್ಷಿಣದ ಆಂಧ್ರಪ್ರದೇಶದ ತೆಲಂಗಾಣದವರೆಗೆ ವಿಸ್ತರಿಸಿದರೋ ಅದೇ ಭೂಸಮಸ್ಯೆಯನ್ನು ಅಹಿಂಸೆಯ ಮೂಲಕ ಪರಿಹರಿಸಲು ಆಚಾರ್ಯ ವಿನೋಬಾ ಭಾವೆಯವರು ೧೯೫೦ನೇ ಇಸವಿ ಏಪ್ರಿಲ್ ೧೮ಕ್ಕೆ ಆಂಧ್ರ ಪ್ರದೇಶದಲ್ಲಿಯೇ ತಮ್ಮ ಭೂದಾನ ಆಂದೋಲನವನ್ನು ಪ್ರಾರಂಭಿಸಿದರು. ಯಾವ ಭೂಮಿಯ ಮೇಲಿನ ಒಡೆತನಕ್ಕಾಗಿ ಕಮ್ಯೂನಿಸ್ಟರು ಹಿಂಸ್ರಾ ಹೋರಾಟ ನಡೆಸುತ್ತಿದ್ದರೋ ಅದೇ ಉದ್ದೇಶಕ್ಕಾಗಿ ವಿನೋಬಾ ತಮ್ಮ ಅಹಿಂಸಾತ್ಮಕ ಹೋರಾಟ ನಡೆಸಿದರು. ಇದನ್ನು ಅವರು ಭೂದಾನ ಯಜ್ಞ ಎಂದು ಕರೆದರು. ಹೃದಯ ಪರಿವರ್ತನೆಯೇ ಆ ಆಂದೋಲನದ ಪ್ರಧಾನ ತತ್ವವಾಗಿತ್ತು. ಈ ಭೂದಾನ ಯಜ್ಞ ಆಂದೋಲನವನ್ನು ವಿನೋಬಾ ದೇಶದಾದ್ಯಂತ ಪ್ರಚುರಪಡಿಸಿದರು. ಪಾದ ಯಾತ್ರೆಯ ಮೂಲಕ ದೇಶದ ಲಕ್ಷಾಂತರ ಹಳ್ಳಿಗಳನ್ನು ತಲುಪಿದರು. ನಲವತ್ತು ಲಕ್ಷ ಎಕರೆ ಭೂಮಿಯನ್ನು ಭೂಮಾಲೀಕರಿಂದ ಸಂಗ್ರಹಿಸಿ ಸುಮಾರು ಇಪ್ಪತ್ತು ಲಕ್ಷ ಭೂಹೀನರಿಗೆ ವಿತರಣೆಮಾಡಿದರು. ಇಂಥ ಒಂದು ಅಹಿಂಸಾತ್ಮಕ ಕ್ರಾಂತಿಯ ಜ್ವಲಂತ ಉದಾಹರಣೆ ನಮ್ಮ ಮುಂದೆ ಇದೆ. ಇದೇ ಜಾಡನ್ನು ಹಿಡಿದು ಇಂದಿನ ಭಾರತೀಯ ಸಮುದಾಯ ಮುಂದುವರೆದದ್ದೇ ಆದಲ್ಲಿ ನಕ್ಸಲೀಯರ ಮತ್ತು ಮಾವೋವಾದಿಗಳ ಉದ್ದೇಶವನ್ನು ಅಹಿಂಸಾತ್ಮಕವಾಗಿ ನೆರವೇರಿಸಿ ದೇಶದಲ್ಲಿ ಶಾಂತಿ ನೆಲಸುವಂತೆ ಮಾಡಬಹುದು. ಇಂಥ ಎರಡನೇ ಅಹಿಂಸಾತ್ಮಕ ಹೋರಾಟಕ್ಕೆ ಜನಮಾನಸವನ್ನು ಸಿದ್ಧಪಡಿಸುವ ಹೊಣೆ ಈಗಿನ ಅಹಿಂಸಾಪರ ಜನರ ಮೇಲೆ ಇದೆ. ಶಾಂತಿ-ಪ್ರೇಮಗಳ ದಾರಿಯಲ್ಲಿ ನೆಲದ ಹಸಿವನ್ನು ಇಂಗಿಸಲು ಇಡೀ ಭಾರತದಲ್ಲಿ ಮಾಡಿದ ಪ್ರಯತ್ನ ಭೂದಾನ ಯಜ್ಞ, ಇಂಥ ಇನ್ನೊಂದು ಯಜ್ಞದ ಪ್ರಯತ್ನವನ್ನು ಅಹಿಂಸಾ ಪ್ರೇಮಿಗಳು ಮಾಡಿ ನಕ್ಸಲೀಯರ ಮತ್ತು ಮಾವೋವಾದಿಗಳ ಮನಸ್ಸಿಗೆ ಶಾಂತಿಯನ್ನು ತಂಬೇಕಿದೆ.

* * *

ವಿಜ್ಞಾನಶಕ್ತಿಗೆ ಸಮನಾಗಿ ಮನಸ್ಸಿನ ನಿರ್ಮಾಣವಾಗಬೇಕಿದೆ

– ವಿನೋಬಾ

ಸಹಚಿತ್ತಮೇಷಾಂ

ಇಂದುಜಗತ್ತಿನಲ್ಲಿ ಚಿತ್ತ ನಿರ್ಮಾಣದ ಅಗತ್ಯವಿದೆ. ಏಕೆಂದರೆ ವಿಜ್ಞಾನ-ಶಕ್ತಿ ತುಂಬಾ ಭರದಿಂದ ಬೆಳೆಯುತ್ತಿದೆ. ಬಾಹ್ಯ ನಿರ್ಮಾಣವಾಗುವ ವೇಗದಷ್ಟೇ ವೇಗದಿಂದ ಚಿತ್ತ ನಿರ್ಮಾಣವಾಗುವುದು ಅವಶ್ಯಕವಾಗಿದೆ. ಋಗ್ವೇದದ ಕೊನೆಯಲ್ಲಿ ಒಂದು ಶಬ್ದ ಬರುತ್ತದೆ.- **ಸಹ ಚಿತ್ತಂ** ಇದು ಋಗ್ವೇದದ ಸ್ವಂತಿಕೆಯ ಶಬ್ದ. 'ಸಮಾನೋ ಮಂತ್ರಃ ಸಮಿತಿಃ ಸಮಾನೀ ಸಮಾನಂ ಮನಃ ಸಹ ಚಿತ್ತಮೇಷಾಂ'- ನಮ್ಮೆಲ್ಲರ ಉಪಸ್ಥಿತಿ, ನಮ್ಮೆಲ್ಲರ ಮನಸ್ಸು ಸಮಾನವಾಗಿರಲಿ. ಇಲ್ಲಿ ವೇದವು 'ಸಮಾನ' ಶಬ್ದದ ಉಪಯೋಗ ಮಾಡಿದೆ. ಆದರೆ ವೇದವು ಸಹಚಿತ್ತ ಎಂಬ ಹೊಸ ಶಬ್ದ ರಚಿಸಿತು.

ಒಂದು ಮನಸ್ಸು, ಸಮಾನ ಮನಸ್ಸು ಮತ್ತು ಸಹಚಿತ್ತ ಈ ಮೂರೂ ಪಾರಿಭಾಷಿಕ ಶಬ್ದಗಳು. 'ಏಕಚಿತ್' ಪ್ರಳಯದ ಲಕ್ಷಣ. ಪ್ರಳಯ ಸಂಭವವಾಗಲೂಬಹುದು. ಸಮಾನ ಕಾರ್ಯಕ್ರಮ ರೂಪಿಸುವುದರಲ್ಲಿ 'ಸಮಾನಚಿತ್' ಸಹಾಯಕವಾಗಬಹುದು. 'ಸಹಚಿತ್' ಎಂಬ ಶಬ್ದದಲ್ಲಿ ಒಬ್ಬರ ಮನಸ್ಸು ಇನ್ನೊಬ್ಬರ ಮನಸ್ಸಿನ ಮುಂದೆತೆರೆದಿಡುವುದು ಎಂಬರ್ಥವಿದೆ. ಸಾಧನಾಮಾರ್ಗದಲ್ಲಿ ಏಕಚಿತ್ ವ್ಯಕ್ತಿಗತವಾಗಿದೆ. ಪ್ರತಿಯೊಬ್ಬ ಮನುಷ್ಯನೂ ಸ್ವಲ್ಪ ಸಮಯವಾದರೂ ಪ್ರಳಯಾವಸ್ಥೆಯಲ್ಲಿ ಹೋಗಬೇಕು. ತನ್ನಲ್ಲಿ ಲೀನವಾಗಿಬಿಡಬೇಕು. ಅದ-ರಿಂದ ಎಲ್ಲ ಪ್ರಕಾರದ ವಿಕಾರಗಳ ಮೂಲದಲ್ಲಿರುವ ಯಾವ ಸ್ರೋತದಿಂದ ಆ ವಿಕಾರಗಳು ಹುಟ್ಟುತ್ತವೆಯೋ ಅಲ್ಲಿಗೇ ತಲುಪುವ ಅವಕಾಶ ಸಿಗುತ್ತದೆ. ಏಕಚಿತ್ ಆಯಿತೆಂದರೆ ವಿವಿಧತೆಯ ಲಾಭ ಸಿಗುವುದಿಲ್ಲ. ಏಕತಾನತೆ ಬರುತ್ತದೆ. ವಿಚಾರದಲ್ಲಿ ವೃದ್ಧಿಯಾಗುವುದಿಲ್ಲ. ವಿಚಾರದ ಸಂಶೋಧನೆಯಾಗುವುದಿಲ್ಲ. ಯಾವ ವಿಚಾರ ನನ್ನದಾಗಿದೆಯೋ ಅದೇ ವಿಚಾರ ನಿಮ್ಮದೂ ಆಗಿದ್ದರೆ ನಾವೇಕೆ ಒಟ್ಟಿಗೆ ಸೇರುತ್ತೇವೆ? ವಿಚಾರ ಮತ್ತು ಚಿಂತನಕ್ಕಾಗಿ ಒಟ್ಟಿಗೆ ಸೇರುವ ಅಗತ್ಯತೆಯಿಲ್ಲ. ಬೇರೆ ಕೆಲಸಕ್ಕಾಗಿ ನಾವು ಒಂದಾಗಬಹುದೇನೋ. ಏಕಚಿತ್ ಆಗಿದೆ ಎಂದರೆ ಪ್ರಳಯವಾಯಿತೆಂದು ತಿಳಿಯತಕ್ಕದ್ದು. ಚಿತ್ತ ಲಯವಾಗುವುದು ಮತ್ತು ಚಿತ್ತ ಲೀನವಾದಮೇಲೆ ಜಗತ್ತಿನ ಲೋಪವಾಗುವುದು, ಲಯವಾಗುವುದು. ಸಾಮ್ಯಾವಸ್ಥೆಯಲ್ಲಿ ಗುಣಕ್ರಿಯೆ ಸಮಾಪ್ತವಾಗುವುದು. ಎಲ್ಲಿ ಎಲ್ಲರದ್ದೂ ಏಕಚಿತ್ ಆಗುತ್ತದೋ ಅಲ್ಲಿ ಸಾಮಾಜಿಕ ಪ್ರಳಯವಾಗುತ್ತದೆಂಬುದೇನೂ ಕೆಟ್ಟ ಮಾತಲ್ಲ. ಆದರೆ ವಿಶ್ವದ ಪ್ರಳಯವಾದರೆ ಪ್ರಕೃತಿಯ ಲಯವಾಗುತ್ತದೆ. ಅಂದರೆ ನಮ್ಮ ಜೀವನ ಚರ್ಯೆ ಇರುವುದಿಲ್ಲ. ಇದು ಏಕಚಿತ್. ಒಂದು ವೇಳೆ ಯಾವುದೋ ಒಂದು ಒಳ್ಳೆಯ ಕೆಲಸದಲ್ಲಿ ಎಲ್ಲರದ್ದೂ ಏಕಚಿತ್ ಆದರೆ ಎಲ್ಲರಿಗೂ ಮುಕ್ತಿ ದೊರೆಯುವುದು.

ಒಂದುವೇಳೆ ಯಾವುದೋ ಸಾಮಾನ್ಯ ಕೆಲಸದಲ್ಲಿ ಭೌತಿಕ ದೃಷ್ಟಿಯಿಂದ ಏಕಚಿತ್ ಆದರೆ ಪ್ರಳಯವಾಗುವುದು. ವ್ಯಕ್ತಿಗತವಾಗಿ ನಾವು ಏಕಚಿತ್ ಮಾಡಬಹುದು. ಅದನ್ನೇ ಏಕಾಗ್ರ ಚಿತ್ತ ಎಂದೆನ್ನುತ್ತಾರೆ. ಚಿತ್ತಕ್ಕೆ ಅನೇಕ ಹಂತ ಮತ್ತು ಕಲ್ಪನೆಗಳಿವೆ. ಒಂದು ಕಲ್ಪನೆಯನ್ನು ಹಿಡಿಯುವುದು ಶಾಂತಿ ಮತ್ತು ಶಕ್ತಿಯಿಂದ ದೊರೆಯುವುದು. ಅದರಿಂದ ಸಮಾನಚಿತ್ತ ಆಗುವುದು. ಆದರೆ ಇದು ಸಾಮಾಜಿಕ ಕಾರ್ಯಕ್ಕಾಗಿ ಹೆಚ್ಚು ಉಪಯೋಗವಾಗುವುದಿಲ್ಲ.

'ಸಮಾನಚಿತ್ತ'ವೆಂದರೆ ಯಾವುದೋ ಒಂದು ಪ್ರಸಂಗದಲ್ಲಿ ಎಲ್ಲರೂ ಒಂದಾಗುವುದು. ಒಂದು ಸಾಮಾನ್ಯ ಕಾರ್ಯಕ್ರಮ ಗೊತ್ತಾದಾಗ ಸಮಾನಚಿತ್ತವಾಗುತ್ತದೆ. ಸಮಾನಚಿತ್ತವೆಂದರೇನೇ ಸರ್ವಸಾಮಾನ್ಯ ಕಾರ್ಯಕ್ರಮ. ಅದರಲ್ಲಿ ಸರ್ವಸಾಧಾರಣ ಅಂಶವೊಂದು ಸಮಾನವಾಗಿರುವುದು. ಆದರೆ, ಅದು ಚಿಕ್ಕ ವಿಷಯ. ಸಮಾನಚಿತ್ತವು ಸಮಾನ ಕಾರ್ಯಕ್ರಮವನ್ನು ರಚಿಸುವುದರಲ್ಲಿ ಸಹಾಯಕವಾಗಬಹುದು.

ಸಮಾನಚಿತ್ತದಲ್ಲಿ ಒಂದು 'ಕಾಮನ್ ಪ್ರೋಗ್ರಾಂ'ನ ವಿಷಯವಿದೆ. ಆದರೆ ಸಹಚಿತ್ತವಿಲ್ಲದಿದ್ದರೆ ಕೆಲಸದಲ್ಲಿ ಹುಮ್ಮಸ್ಸಿರುವುದಿಲ್ಲ. ಏಕಚಿತ್ತ ಮತ್ತು ಸಮಾನಚಿತ್ತದಿಂದ ಭಿನ್ನವಾಗಿರುವ ಸಹಚಿತ್ತವೆಂಬ ಶಬ್ದವು ತುಂಬ ಶಕ್ತಿಯುತವಾಗಿದೆ. ಒಳ್ಳೆಯದೂ ಆಗಿದೆ. ಆಗಾಗ್ಗೆ ಒಂದುಗೂಡುವುದು ಸಹಚಿಂತನೆಯ ಪ್ರಕ್ರಿಯೆಗೆ ಅಗತ್ಯವೆಂದು ಅನ್ನಿಸಿಕೊಳ್ಳುವುದು. ಒಬ್ಬರು ಇನ್ನೊಬ್ಬರಿಗೆ ಸಲಹೆ ಕೊಡುವುದು ಚರ್ಚೆ ಮಾಡುವುದು ಬಹು ದೊಡ್ಡ ಭಕ್ತಲಕ್ಷಣವಾಗಿದೆ. ಗೀತೆ ಇದಕ್ಕೆ **ಬೋಧಯತಃ ಪರಸ್ಪರಂ** ಎಂಬ ಹೆಸರುಕೊಟ್ಟಿದೆ. ಅನ್ಯೋನ್ಯತೆ ಬೋಧದಾನದ ಕ್ರಿಯೆಯಾಗಬೇಕು. ನೀವು ನನಗೆ ಬೋಧಿಸುತ್ತೀರಿ, ನಾನು ನಿಮಗೆ ಬೋಧಿಸುತ್ತೇನೆ. ಇದು ಭಕ್ತಿ ಮಾರ್ಗ. **ಅಮ್ ರೂಹಂ ಶೂರಾಭೈನಹುಮ್** ಎಂದು ಖುರಾನ್‌ನಲ್ಲಿ ಬರುತ್ತದೆ. ಅಂದರೆ ಪರಸ್ಪರ ಸಲಹೆಕೊಟ್ಟು ಚರ್ಚೆಮಾಡಿ ಕೆಲಸವನ್ನು ಮಾಡಬೇಕು. ಆಗ ಎಲ್ಲರದೂ ಸಹಚಿತ್ತವಾಗುವುದು. ಇದರ ಅರ್ಥ ನನ್ನ ಚಿತ್ತವನ್ನು ನೀವು ಪೂರ್ಣವಾಗಿ ತಿಳಿದಿದ್ದೀರಿ ಮತ್ತು ನಾನು ನಿಮ್ಮ ಚಿತ್ತವನ್ನು ತಿಳಿದಿದ್ದೇನೆ ಆದ್ದರಿಂದ ಪರಸ್ಪರ ವಿಶ್ವಾಸವಿದೆ.

ಇಂದು ಜಗತ್ತಿನಲ್ಲಿ ಅನ್ಯೋನ್ಯ ವಿಶ್ವಾಸದ ಬಹುಕೊರತೆಯಿದೆ. ಗಂಭೀರವಾಗಿ ಕುಳಿತುಕೊಂಡು ಒಬ್ಬರಿನ್ನೊಬ್ಬರನ್ನು ತಿಳಿಯುವ ಪ್ರಯತ್ನವನ್ನು ಮಾಡಲಾಗುವುದಿಲ್ಲ. ನನ್ನ ಚಿತ್ತವನ್ನು ಅವನು ತಿಳಿಯುವುದಿಲ್ಲ; ಅವನದ್ದನ್ನು ನಾನು ತಿಳಿದಿರುವುದಿಲ್ಲ. ಒಂದು ಅಂಶವನ್ನು ತಿಳಿದು ಇನ್ನುಳಿದುದರ ಬಗ್ಗೆ ತಪ್ಪು ಕಲ್ಪನೆ ಮಾಡಿಕೊಂಡು ಸ್ವಲ್ಪ ತಿಳಿಯಿತು, ಅದರಿಂದಾಗಿ ಹೆಚ್ಚು ಅನುಮಾನಪಟ್ಟೆ, ಆ ಅನುಮಾನದಿಂದ ತಪ್ಪು ಕಲ್ಪನೆ ಬೆಳೆಯಿತು, ಮುಂದೆ ಒಬ್ಬರೊಬ್ಬರ ಮೇಲೆ ತಪ್ಪು ಉದ್ದೇಶದ ಆರೋಪಣೆಯಾಗುತ್ತದೆ. ಪರಸ್ಪರರಲ್ಲಿ ಅವಿಶ್ವಾಸ ಬೆಳೆಯುತ್ತದೆ.

ಈಸಾಯಿಗಳಲ್ಲಿ ಭಾನುವಾರ ಸಾಮೂಹಿಕ ಪ್ರಾರ್ಥನೆಯ ಪದ್ಧತಿಯಿದೆ. ನೀವು ಸಾಮೂಹಿಕ ಪ್ರಾರ್ಥನೆಗೆ ಹೋದರೆ, ನಿಮ್ಮ ಬುದ್ಧಿಯನ್ನು ಸ್ವಚ್ಛಮಾಡಿಕೊಳ್ಳಿ ಎಂದು ಏಸು ಬೋಧಿಸಿದ್ದಾನೆ. ಯಾರ ಜೊತೆಯಲ್ಲಿ ನೀವು ಪ್ರಾರ್ಥನೆಗೆ ಕುಳಿತುಕೊಳ್ಳುತ್ತೀರೋ ಅವನ ಬಗ್ಗೆ ಮನಸ್ಸಿನಲ್ಲಿ ದೂಷಣಾಭಾವ ಇರದಿರಲಿ, ಆಗಲೇ ಪ್ರಭು ನಿಮ್ಮ ಪ್ರಾರ್ಥನೆ ಕೇಳುವನು. ಸ್ವಚ್ಛ, ಒಳ್ಳೆಯ ರೀತಿಯಲ್ಲಿ ತೊಳೆದ ಚಿತ್ತವನ್ನು

ತೆಗೆದುಕೊಂಡು ಪ್ರಾರ್ಥನೆಗೆ ಹೋಗಬೇಕು. ಹೊಲಸಾದ ಚಿತ್ತವನ್ನು ತೊಳೆಯುವ ಕೆಲಸವನ್ನು ನಾವು ಪರಮೇಶ್ವರನಿಗೆ ಕೊಡಕೂಡದು. ಚಿತ್ತ ತೊಳೆಯುವ ಕೆಲಸ ನಮ್ಮದೇ ಆಗಿರಬೇಕು. ಆದ್ದರಿಂದ ಭಾನುವಾರ ಪ್ರಾರ್ಥನೆಗೆ ಹೋಗುವುದಾದರೆ ಶನಿವಾರ ಒಟ್ಟಿಗೆ ಕುಳಿತುಕೊಳ್ಳಬೇಕು, ಪರಸ್ಪರರ ಮನಸ್ಸಿನಲ್ಲಿ ಇರುವ ಸಂಶಯವೆಲ್ಲವನ್ನೂ ಬಿಚ್ಚಿಡಬೇಕು. ನಂತರ ಸ್ವಚ್ಛ ಮನಸ್ಸಿನವರಾಗಿ ಪ್ರಾರ್ತನೆ ಮಾಡಬೇಕೆಂದು ಕೆಲವು ಮಿಷನರಿಗಳು ತೀರ್ಮಾನಿಸಿದರು.

ಆಧ್ಯಾತ್ಮಿಕ ಕೆಲಸಕ್ಕಾಗಿ ಮನುಷ್ಯನಿಗೆ ಸಹಚಿತ್ತದ ಅವಶ್ಯಕತೆಯಿದೆ. ಆಗ ಇಡೀ ಮನಸ್ಸು ಪರಸ್ಪರರ ಎದುರಿನಲ್ಲಿ ಬಿಚ್ಚಿಕೊಳ್ಳುತ್ತದೆ. ಯಾವ ರೀತಿ ಸೃಷ್ಟಿ ಬಿಚ್ಚಿಕೊಂಡಿದೆಯೋ, ನಗ್ನ ರೂಪವಾಗಿ ನಮ್ಮೆದುರಿಗಿದೆಯೋ ಹಾಗೆಯೇ ನಮ್ಮ ಮನಸ್ಸು ತೆರೆಯಿತೆಂದರೆ ನಾವು ಸಹಚಿತ್ತರಾಗುವುದರಲ್ಲಿ ನೆರವಾಗುವುದು.

ಸಹಚಿತ್ತದ ಆಧ್ಯಾತ್ಮಿಕ ಲಾಭಗಳೂ ಕೂಡ ಇವೆ. ಮನುಷ್ಯ ತನ್ನ ಗುಣದೋಷಗಳೊಂದಿಗೆ ಸೃಷ್ಟಿಯ ಎದುರಿನಲ್ಲಿ ತೆರೆದುಕೊಂಡಿದ್ದಾನೆ. ಇದು ಸಾಮಾನ್ಯ ವಿಷಯವಲ್ಲ. ಅದೇ ರೀತಿ ಸಾಧಕರು ಸಾಮಾನ್ಯ ನೆಲೆಯ ಮೇಲೆ ಬರಬೇಕು, ಸಹಚಿತ್ತರಾಗಬೇಕು. ಅದರಿಂದ ಗುಣಗಳ ಸಂಕಲನವಾಗುವುದು; ಗುಣಗಳು ಕೂಡಿಕೊಳ್ಳುವವು. ದೋಷದ ಉಪಶಮನಕ್ಕಾಗಿ ಸಹಾಯಕವಾಗುವುದು. ಚಿತ್ತದ ಅನೇಕ ಹಂತಗಳಿವೆ. ತುಂಬ ಮೇಲಿನ ಸ್ತರದಲ್ಲಿ ಅಭಿಪ್ರಾಯಗಳಿರುತ್ತವೆ; ಅಭಿಪ್ರಾಯಕ್ಕಾಗಿ ತರ್ಕಗಳನ್ನು ಮಂಡಿಸಲಾಗುತ್ತದೆ. ಕೆಲವೊಮ್ಮೆ ತರ್ಕಗಳು ಒಪ್ಪಿಗೆಯಾಗದಿದ್ದರೆ, ಸಾಮಾನ್ಯ ನೆಲೆ ಇರುವುದಿಲ್ಲ. ಆದ್ದರಿಂದ ಸಹಚಿತ್ತರಾಗುವುದಕ್ಕೆ ಸಹಾಯ ಸಿಗುವುದಿಲ್ಲ. ಆದರೆ ಈ ಎಲ್ಲ ಹೊಯ್ದಾಟ ಚಿತ್ತದ ಮೇಲಿನ ಸ್ತರದಲ್ಲಿರುತ್ತದೆ. ಗೂಢತಮ ಅಂತಃಸ್ಥಳದಲ್ಲಿ ಈ ಹೊಯ್ದಾಟ ಇರುವುದಿಲ್ಲ. ಸಹಚಿತ್ತದವಸ್ಥೆಯಲ್ಲಿ ಮನುಷ್ಯನ ಜೀವನದ ಗೂಢತಮ ಭಾವನೆ ಎರಡನೆಯವರ ಸಮ್ಮುಖದಲ್ಲಿ ತೆರೆಯುತ್ತದೆ. ಈ ವಿಷಯವೇ ಸಂಸಾರದಲ್ಲಿ ದುರ್ಲಭವಾಗಿದೆ. ಪರಮಾರ್ಥದಲ್ಲಿಯೂ ದುರ್ಲಭವಾಗಿದೆ. ಪರಿವಾರದಲ್ಲಿ ತಂದೆ, ತಾಯಿ, ಅಕ್ಕತಂಗಿಯರು ಎಷ್ಟೋ ವರ್ಷಗಳವರೆಗೆ ಒಟ್ಟಿಗೆ ಇರುತ್ತಾರೆ. ಆದರೆ ಅವರೆಲ್ಲರದೂ ಸಹಚಿತ್ತವಾಗುವುದು ಸಾಧ್ಯವಾಗಿರುವುದಿಲ್ಲ. ಒಲ್ಮೇಲಿನ ಸ್ತರದಲ್ಲಿ ಏಕತೆಯಾಗುತ್ತದೆ. ಆದರೆ ಒಳಗಿನ ಗೂಢಭಾವನೆಯಲ್ಲಿ ಏಕತೆ ಸಾಧ್ಯವಾಗುವುದಿಲ್ಲ.

ಪ್ರೇಮವಿರುವ ಕಾರಣಕ್ಕಾಗಿ ಒಂದು ವ್ಯವಸ್ಥೆ ಇರುತ್ತದೆ. ಆದರೆ ಸಹಚಿತ್ತವೇ ಇರುವುದಿಲ್ಲ. ಆದ್ದರಿಂದ ಸಂಸಾರದಲ್ಲಿ ಸಹಚಿತ್ತ ದುರ್ಲಭವೆಂದು ನಾನು ಹೇಳಿದೆ.

ಸಹಚಿತ್ತದಲ್ಲಿ ಮನಸ್ಸಿನ ಅಂತರ್ಭಾವಗಳು ಜೊತೆಗಾರರ ಎದುರಿನಲ್ಲಿ ತೆರೆಯಬಹುದು. ಆದರೆ ಜೊತೆಯವನ ಅಂತರ್ಭಾವ ತೆರೆದುಕೊಳ್ಳದೇ ಇರಬಹುದು. ಅವನ ಗೂಢಭಾವ ನನ್ನೆದುರಿನಲ್ಲಿ ತೆರೆದಾಗಲೇ ನನ್ನ ಭಾವ ಅವನೆದುರಿನಲ್ಲಿ ತೆರೆದುಕೊಳ್ಳುವಂತೆ ಆಗಕೂಡದು. ನಮ್ಮಿಂದಲೇ ಆರಂಭ ಮಾಡಬೇಕಾಗುವುದು. ಸಾಧು ಪುರುಷರು ತಮ್ಮಿಂದಲೇ ಆರಂಭಿಸುತ್ತಾರೆ. ಸೃಷ್ಟಿಯ ಎದುರಿನಲ್ಲಿ ಅವರ ಭಾವಗಳು ತೆರೆದಿರುತ್ತವೆ. ಇಡೀ ಸೃಷ್ಟು ಜೊತೆಗೆ ನಮ್ಮ ಭಾವ ತೆರೆದಿದ್ದರೆ, ಬಹುದೊಡ್ಡ ಸಂಗತಿಯಾಗುವುದು. ಯಾರ ಭಾವನೆ ಪೂರ್ಣತಃ ಪ್ರಕಾಶಿತವಾಗಿರುತ್ತದೋ ಅಂಥ

ಮನುಷ್ಯ ಜಗತ್ತಿನಲ್ಲಿದ್ದರೆ ಅವನು ಇಡೀ ಜಗತ್ತಿನ ಪ್ರಿಯ ವ್ಯಕ್ತಿಯಾಗುವನು. ಅವರು ಜನರೊಂದಿಗೆ ಏಕಾತ್ಮನಾಗುವನು.

ಸಮಾನೀವ ಆಕೂತಿಃ

ಋಗ್ವೇದದಲ್ಲಿ ಒಟ್ಟು ೧೦,೫೫೨ ಮಂತ್ರಗಳಿವೆ. ಅದರ ಕೊನೆಯ ಮಂತ್ರವನ್ನು ನಾವು ದಿನಾಲೂ ಸಂಜೆ ಪ್ರಾರ್ಥನೆಯಲ್ಲಿ ಹೇಳುತ್ತೇವೆ. ಸಮರಸತೆಯ ಮಂತ್ರವದು. ಸಮೂಹದಲ್ಲಿ ಸಮರಸತೆಯನ್ನು ತರಬೇಕಿದೆ.

ಸಮಾನೀವ ಆಕೂತಿಃ ಸಮಾನಃ ಹೃದಯಾನಿವಃ ।
ಸಮಾನಮಸ್ತು ವೋಮನೋ ಯಥಾವಃ ಸುಸ್ಸಹಾಸತೇ॥

ನಿನ್ನ ಭಾವನೆ ಸಮಾನವಾಗಿರಲಿ, ನಿನ್ನ ಹೃದಯ ಸಮಾನವಾಗಲಿ, ನಿಮ್ಮ ಚಿತ್ತ ಸಮಾನವಾಗಿರಲಿ, ಅದರಿಂದ ನಿನ್ನ ಸಂಘಟನೆ ಉತ್ತಮವಾಗುವುದು. ಆಕೂತಿಃ ಅಂದರೆ ಭಾವನೆ, ಸಂಕಲ್ಪ. ಸುಸ್ಸಹ ಅಂದರೆ ಸಂಘಟನೆ, ಸಂಘಶಕ್ತಿ.

ಕಾರ್ಯಕರ್ತರು ಆಗಾಗ್ಗೆ ಭೇಟಿಯಾಗುತ್ತಿರಬೇಕು. ಸ್ವಲ್ಪವಾದರೂ ಸಹಚಿಂತನೆ, ಸಹ ಜೀವನ,ಸಹ ಭೋಜನ, ಸಹಭಜನೆ ಮಾಡಬೇಕು. ಆಗ ಸಹ ದರ್ಶನ ಕೂಡ ಆಗಿಬಿಡುವುದು. ಆದ್ದರಿಂದ ಈ ಸಮಾಪ್ತಿ ಮಂತ್ರದಲ್ಲಿ ನಿನ್ನ ಸಂಕಲ್ಪ, ನಿನ್ನ ಹೃದಯ, ನಿನ್ನ ಮನಸ್ಸು ಸಮಾನವಾಗಿರಲಿ. ಅದರಿಂದ ನಿನ್ನ ಶಕ್ತಿ ವೃದ್ಧಿಯಾಗುವುದು ಎಂಬುದಾಗಿ ಋಷಿಗಳು ಹೇಳುತ್ತಾರೆ.

ಭಾವನೆ ಸಮಾನವಾಗುವುದೇ ಎಲ್ಲಕ್ಕಿಂತ ಮಹತ್ವದ ಮಾತಾಗಿದೆ. ಭಾವನೆ ಸಮಾನವಾಗಿರಬೇಕು. ಎಲ್ಲರ ಮೇಲೆ ವಿಶ್ವಾಸವಿರಬೇಕು. ಇದು ಎಲ್ಲಕ್ಕಿಂತ ದೊಡ್ಡ ಮಾತು. ವಿಶ್ವಾಸ ಅನೇಕ ಪ್ರಕಾರದ್ದಿದೆ. ಆದರೆ ಮುಖ್ಯ ವಸ್ತು ಹೃದಯದ ಮೇಲೆ ವಿಶ್ವಾಸವಿರುವುದು. ಆಶ್ರಮಕ್ಕಾಗಿ ನಾನು ಇದರಲ್ಲಿ ಬದಲಾಯಿಸಿದ್ದೇನೆ. ವಃ(ನಿನ್ನ)ದ ಸ್ಥಳದಲ್ಲಿ ನಃ(ನಮ್ಮ) ಮಾಡಿದ್ದೇನೆ. ಅರ್ಥಾತ್ ನಮ್ಮ ಭಾವನೆ ನಮ್ಮ ಹೃದಯ ನಮ್ಮ ಚಿತ್ತ ಸಮಾನವಾಗಲಿ.

* * *

ವಾಚಕರ ಗಮನಕ್ಕೆ ..

ವಿವಾಹ ಪೂರ್ವ ಮಹಿಳೆ ಮತ್ತು ಪುರುಷನ ಸಹವಾಸ ಕಾನೂನು ವಿರೋಧವಲ್ಲವೆಂಬ ದೇಶದ ಉಚ್ಚನ್ಯಾಯಾಲಯದ ತೀರ್ಪಿನ ಬಗ್ಗೆ ನಿಮ್ಮ ಅನಿಸಿಕೆಯನ್ನು ಇಪ್ಪತ್ತು ವಾಕ್ಯಗಳಿಗೆ ಮೀರದಂತೆ ಮೇ ಮಾಹೆಯ ಇಪ್ಪತ್ತನೇ ದಿನಾಂಕದೊಳಗಾಗಿ ಕಳುಹಿಸಿ ಕೊಡಬೇಕಾಗಿ ವಿನಂತಿ. ನಿಮ್ಮ ಅಭಿಪ್ರಾಯವನ್ನು ಜನಪದ ಧ್ವನಿಯಲ್ಲಿ ಪ್ರಕಟಿಸಲಾಗುವುದು.

– ಸಂಪಾದಕ

ಪರಿಸರ ವಿನಾಶ: ಬಹುಗುಣರ ಕ್ರಿಯಾಶೀಲ ಹೋರಾಟದ ತಾತ್ವಿಕ ವಿಚಾರ

– ಜಾರ್ಜ್ ಆಲ್ಫ್ರೆಡ್ ಜೇಮ್ಸ್– ಕನ್ನಡಕ್ಕೆ : ಸುರೇಂದ್ರ ಕೌಲಗಿ

ಶಿಮ್ಲಾದಲ್ಲಿ ಅದೊಂದು ತಂಪನೆಯ ಆದರೆ ಹಿತಕರವಾದ ಬಿಸಿಲಿನ ದಿನ. ಭಾರತದ ಹಿಮಾಚಲ ಪ್ರದೇಶದ ಗಡಿಯಲ್ಲಿಯ ಪರ್ವತದ ತಪ್ಪಲಲ್ಲಿರುವ ಸುಂದರವಾದ ಊರು ಶಿಮ್ಲಾ. ಏಳು ಸಾವಿರ ಅಡಿ ಎತ್ತರ. ಒಂದು ಕಾಲಕ್ಕೆ ಬ್ರಿಟಿಷರ ಬೇಸಿಗೆಯ ರಾಜಧಾನಿ. ೧೯೯೮ರ ಒಂದು ದಿನ, ಆಹ್ಲಾದಕರವಾದ ಮೆಲುಗಾಳಿ ಬೀಸುತ್ತಿತ್ತು. ದೆಹಲಿಯ ಉರಿಬಿಸಿಲಿನಿಂದ ತಪ್ಪಿಸಿಕೊಳ್ಳಲು ಸದವಕಾಶ. ಕಿರಿದಾದ ರಸ್ತೆಯಲ್ಲಿ ಸಂಚರಿಸುತ್ತಿದ್ದ ಡೀಸೆಲ್ ಎಂಜಿನ್ನಿನ ಭಾರೀ ಟ್ರಕ್‌ಗಳ ಸದ್ದಿನ ನಡುವೆ ಆಗಾಗ್ಗೆ ಕೇಳಿಬರುತ್ತಿದ್ದ ಪಕ್ಷಿಗಳ ಕಲರವ. ಬಹಳಷ್ಟು ಸಲ ಹಕ್ಕಿಗಳ ಹಾಡು ಟ್ರಕ್‌ಗಳ ಸದ್ದಿನಲ್ಲಿ ಅಡಗಿಹೋಗುತ್ತಿತ್ತು. ಟೆಲಿಫೋನ್ ಮಾಡಬೇಕಿದೆಯೆಂದು ಪಕ್ಕದ ಟೆಲಿಫೋನ್ ಬೂತ್‌ನಲ್ಲಿದ್ದ ಗಡ್ಡಧಾರಿ ವ್ಯಕ್ತಿಗೆ ಹೇಳಿದೆ. ತಲೆಯ ಬಹುಭಾಗವನ್ನು ಮುಚ್ಚಿದಂತೆ ಅವನು ಶಾಲು ಹೊದಿದ್ದ. ಪಕ್ಕದಲ್ಲಿ ಹಾದು ಹೋಗುತ್ತಿದ್ದ ಟ್ರಕ್ ಸದ್ದಿನಲ್ಲಿಯೇ "ನಿಮ್ಮ ಬಳಿ ನಂಬರ್ ಇದೆಯಾ?"ಎಂದು ಅವನು ಕೇಳಿದ.

'ಹೌದು' ಎಂದು ಹೇಳಿ ಅದನ್ನು ಆತನಿಗೆ ತೋರಿಸಿದೆ. "ಮೊದಲು ಸೊನ್ನೆ ತಿರುಗಿಸಿ, ನಂತರ ಕೋಡ್, ಆನಂತರ ನಂಬರ್."

ನಾನು ಕೊಟ್ಟಿದ್ದ ಕಾಗದದ ತುಂಡೊಂದರ ಮೇಲೆ ಆತ ಈ ಸಂಖ್ಯೆಗಳನ್ನು ಬರೆಯುತ್ತಿದ್ದ.

'ಕಿತ್ನಾ(ಎಷ್ಟು)?' ಎಂದು ಸ್ವತಃ ಕಲಿತುಕೊಂಡಿದ್ದ ಹಿಂದೀ ಭಾಷೆಯ ಪ್ರಯೋಗ ಮಾಡಿದೆ.

"ಏನು?" ಎಂದು ಆತ ಕೇಳಿದ. ಇನ್ನೊಂದು ಟ್ರಕ್ ಹೋಯಿತು. ನಾನು ನಿಟ್ಟುಸಿರುಬಿಟ್ಟೆ, ನಂತರ ಏರಿದ ಧ್ವನಿಯಲ್ಲಿ, ಒಂದು ಕರೆಗೆ ಎಷ್ಟು ಎಂದು ಕೇಳಿದೆ.

ಅಯ್ಯೋ, ಎಂದು ಆತ ಉದ್ಗಾರ ತೆಗೆದು 'ಮೊದಲು ಕರೆ ಮಾಡಪ್ಪಾ, ನಂತರ ದುಡ್ಡು ಕೊಡು.'

ಇದೊಂದು ತಾಂತ್ರಿಕ ಬೆಳವಣಿಗೆ. ದೂರ ಮತ್ತು ಕರೆಮಾಡಬೇಕಾದ ಊರನ್ನು ಲೆಕ್ಕ ಹಾಕಿ ಬೆಲೆಯನ್ನು ನಿಗದಿಗೊಳಿಸುತ್ತದೆ.

ನನ್ನ ಬೆನ್ನಿನ ಹಿಂದಿದ್ದ ಬಾಗಿಲನ್ನು ಹಾಕಿ ದೂರವಾಣಿಯನ್ನು ಎತ್ತಿಕೊಂಡೆ. ಸಂಖ್ಯೆಗಳನ್ನು ಒತ್ತಿದೆ. ಸ್ವಲ್ಪ ಹೊತ್ತು ಕಾದೆ. ನನಗೆ ಖುಷಿ ಕೊಡುವ ರೀತಿಯಲ್ಲಿ ಆ ಕಡೆ ದೂರವಾಣಿಯ ರಿಂಗಣ ಕೇಳಿಬಂತು. ಅಷ್ಟರಲ್ಲಿ ಇನ್ನೊಂದು ಟ್ರಕ್ ಹಾದು ಹೋಯಿತು. ಅದರ ಬೆನ್ನಲ್ಲೇ ಟ್ಯಾಕ್ಸಿಯೊಂದು ಹಾರ್ನ್ ಮಾಡುತ್ತಾ ಹೋಯಿತು.

'ಹೆಲೋ, ಹೆಲೋ' ನಾನೆಂದೆ, 'ನಿಮಗೆ ಕೇಳಿಸ್ತಾ ಇದೆಯಾ?' ದೂರದಲ್ಲಿಯ ಧ್ವನಿ "ಕೇಳಿಸ್ತಾ ಇದೆ" ಎಂದು ಉತ್ತರಿಸಿತು. 'ಸುಂದರಲಾಲ

ಬಹುಗುಣರೊಂದಿಗೆ ಮಾತನಾಡಬಯಸುತ್ತೇನೆ' ಎಂದು ನಾನು ಹೇಳಿದೆ.

"ಸುಂದರಲಾಲನೇ ಮಾತನಾಡುತ್ತಿರುವುದು" ಎಂದರವರು. ನಂಬಲಾರದವನಾದೆ. ನನಗೆ ಖುಷಿಯೋ ಖುಷಿ. ನನ್ನ ಪರಿಚಯ ಮಾಡಿಕೊಳ್ಳುವ ಬಗ್ಗೆ ಅಷ್ಟಾಗಿ ತಲೆ ಕೆಡಿಸಿಕೊಂಡಿರಲಿಲ್ಲ.

'ನನ್ನ ಹೆಸರು ಜಾರ್ಜ್ ಜೇಮ್ಸ್, ಅಮೇರಿಕಾದಿಂದ ಬಂದಿರುವ ತತ್ವಶಾಸ್ತ್ರದ ವಿದ್ಯಾರ್ಥಿ. ಪರಿಸರ ಕುರಿತಾದ ಆಂದೋಲನಗಳ ಅಧ್ಯಯನಕ್ಕಾಗಿ ಭಾರತಕ್ಕೆ ಬಂದಿದ್ದೇನೆ. ನಿಮ್ಮ ಕೆಲಸಗಳ ಬಗ್ಗೆ ತುಂಬ ಆಸಕ್ತಿ ಇದೆ. ನಿಮ್ಮ ಕೆಲಸದ ಬಗ್ಗೆ ಅಮೇರಿಕಾದಲ್ಲೇ ಕೇಳಿದ್ದೆ. ಅಂದರೆ ಮರಗಳನ್ನು ಉಳಿಸುವುದು, ಟೆಹರಿ ಅಣೆಕಟ್ಟನ್ನು ನಿಲ್ಲಿಸುವುದು...' ರಸ್ತೆಯ ಮೇಲೆ ಹೋಗುತ್ತಿದ್ದ ಕಾರು ಮತ್ತು ಜೀಪುಗಳ ಸದ್ದಿನಲ್ಲಿ ಅವರ ಉತ್ತರ ಅಡಗಿಹೋಗಿತ್ತು.

'ಹಲೋ' ಅವರೆಂದರು. 'ನಾನು ಮಾತನಾಡುವುದು ಕೇಳುತ್ತದಾ?'

ಹೌದೆಂದು ನಾನು ಹೇಳಿದೆ.

'ಹಾಗಾದರೆ ಮಾತನಾಡಿ' ಅವರೆಂದರು.

ನಾನು ಮಾತು ಮುಂದುವರಿಸಿದೆ, 'ನಾನು ನಿಮ್ಮನ್ನು ಸಂದರ್ಶಿಸಬೇಕೆಂದಿದ್ದೇನೆ'

"ಆಗಲಿ, ಆಗಲಿ. ಈಗ ನೀವೆಲ್ಲಿದ್ದೀರಾ?"

'ಶಿಮ್ಲಾದಲ್ಲಿ.' ಎಲ್ಲಿ? ಎಂದು ಮರು ಪ್ರಶ್ನಿಸಿದರು.

'ನಾನು ಶಿಮ್ಲಾದಲ್ಲಿದ್ದುಕೊಂಡು ಭಾರತದಲ್ಲಿನ ಪರಿಸರ ಚಳುವಳಿಗಳ ಬಗ್ಗೆ ಸಂಶೋಧನೆ ನಡೆಸಿದ್ದೇನೆ.'

"ಓ, ಶಿಮ್ಲಾ! ನೀವು ಡೆಹರಾಡೂನ್‌ಗೆ ಬರುವ ಬಸ್ ಹತ್ತಿ. ಅಲ್ಲಿ ನಿಮಗೆ ಟೆಹರಿಗೆ ವಾಹನ ಸಿಗುವುದು. ನೀವು ಬರುವುದು ಯಾವಾಗ?

ನಾನು ಭಾರತೀಯ ಉನ್ನತ ವ್ಯಾಸಂಗಗಳ ಸಂಸ್ಥೆಯ ಗ್ರಂಥಾಲಯದಲ್ಲಿ ಕಳೆದ ಎರಡು ವಾರಗಳಿಂದ ಅಧ್ಯಯನ ಮಾಡುತ್ತಿದ್ದೆ.ಸಂಸ್ಥೆಯ ನಿರ್ದೇಶಕರ ಸಹೃದಯತೆಯಿಂದ ಅಲ್ಲಿ ಕೆಲಸ ಮಾಡಲು ನನಗೆ ಅನುಮತಿ ದೊರೆತಿತ್ತು. ಅಲ್ಲಿ ಇನ್ನೂ ಮೂರುವಾರ ಕಳೆದು ನಂತರ ಕ್ಷೇತ್ರೀಯ ಕೆಲಸಕ್ಕೆ ಹೋಗುವುದೆಂದು ಯೋಚಿಸಿದ್ದೆ. ಅದೊಂದು ಗಂಭೀರ ಅಧ್ಯಯನದ ವಸ್ತು. ಪರಿಸರದ ವಿಷಯದಲ್ಲಿ ಪಾಶ್ಚಿಮಾತ್ಯರನ್ನು ಬಹು ತೀವ್ರವಾಗಿ ಆಸಕ್ತಿಯಿಂದ ತೊಡಗಿಸಿಕೊಂಡ ಚಳುವಳಿಯ ಹಿಂದೆ ಇದ್ದ ಹಿನ್ನೆಲೆ ಮತ್ತು ಪ್ರೇರಣೆಯನ್ನು ತಿಳಿಯುವುದರಲ್ಲಿ ನನ್ನ ಜ್ಞಾನ ಎಷ್ಟು ಸೀಮಿತವಾಗಿದೆಯೆಂಬುದನ್ನು ಅರಿತುಕೊಳ್ಳುವುದೇ ಆಗಿತ್ತು. ಇನ್ನು ಮೂರು ವಾರಗಳ ಅಧ್ಯಯನ ಗ್ರಂಥಾಲಯದಲ್ಲಿದ್ದ ತತ್ಸಂಬಂಧೀ ಮಾಹಿತಿಯನ್ನು ಜೀರ್ಣಿಸಿಕೊಂಡು ಆ ವಿಷಯದ ಬಗ್ಗೆ ತಕ್ಕಮಟ್ಟಿನ ತಿಳುವಳಿಕೆಯನ್ನು ಹೊಂದಬಹುದಾಗಿತ್ತು; ಸರಿಯಾದ ಪ್ರಶ್ನೆಗಳನ್ನು ಕೇಳುವಷ್ಟರಮಟ್ಟಿಗಾದರೂ ನನ್ನನ್ನು ಸಮರ್ಥನನ್ನಾಗಿ ಮಾಡಬಹುದಿತ್ತು. 'ಮುಂದಿನ ಮೂರು ವಾರ ನಾನಿಲ್ಲಿದ್ದುಕೊಂಡು, ನಂತರ ನಿಮ್ಮ ಭೇಟಿಗಾಗಿ ಬರುತ್ತೇನೆ. ಅದು ಆಗಬಹುದೆ?' "ಮೂರುವಾರವೆ?" ಎಂದು ಅವರು ಪುನರುಚ್ಚರಿಸುತ್ತಾ, " ಇನ್ನು ಮೂರು ವಾರಗಳಲ್ಲಿ ಮಳೆ ಪ್ರಾರಂಭವಾಗುವುದು. ರಸ್ತೆಗಳು ಕೆಟ್ಟು ಹೋಗುವವು. ಪ್ರಯಾಣಿಸಲುಯೋಗ್ಯವಾಗಿರಲಾರವು....."

ಮಾತುಗಳು ಸ್ಪಷ್ಟವಾಗಿ ಕೇಳುತ್ತಿದ್ದವು. "ಈಗಲೇ ಬನ್ನಿ." ಮಳೆಗಾಲದ ಬಗ್ಗೆ ಯೋಚನೆ ಬಂತು. ಮೇಲಿನ ನೀಲಿಯ ಆಕಾಶ ಮುಂದೆ ಬರಬಹುದಾದ ಹವಾಮಾನದ ಬಗ್ಗೆ ಯಾವ ಸೂಚನೆಯನ್ನೂ ಕೊಡುವಂತಿರಲಿಲ್ಲ. ರಸ್ತೆಗಳನ್ನೂ ಸೇತುವೆಗಳನ್ನೂ ಕೊಚ್ಚಿಕೊಂಡು ಹೋಗುವ, ಹಳ್ಳಿಗಳನ್ನು ಮುಳುಗಿಸಿಬಿಡುವ ಮಳೆಯ ಜ್ಞಾಪಕ ಬಂತು. ತಕ್ಷಣ ಡೆಹರಾಡೂನ್‌ಗೆ ಹೊರಟುಬಿಟ್ಟರೆ, ನನಗೆ ಇಲ್ಲಿ ಕೆಲಸ ಮಾಡಲು ಅನುಮತಿ ಕೊಟ್ಟಿರುವ ನಿರ್ದೇಶಕರಿಗೆ ಅವಮಾನ ಮಾಡಿದಂತಾಗುವುದಲ್ಲ ಎಂಬ ಯೋಚನೆಯೂ ಬಂತು.

ಈ ಮೊದಲಿನ ನನ್ನ ವ್ಯಾಸಂಗವನ್ನು ಭಾರತದಲ್ಲಿಯ ವಿವಿಧ ಪರಿಸರಾತ್ಮಕ ಸಮಸ್ಯೆಗಳ ಅಧ್ಯಯನದ ಬಗ್ಗೆ ಮೀಸಲಾಗಿಟ್ಟಿದ್ದೆ. ಈ ಗ ನನ್ನ ದಮನ ಭಾರತೀಯ ಪರಿಸರ ಚಳುವಳಿಗಳ ಬಗ್ಗೆ ಕೇಂದ್ರೀಕೃತವಾಗಬೇಕಿತ್ತು. ನನ್ನ ಪಾರಂಗತ್ವವೇನಿದ್ದರೂ ಇತಿಹಾಸ ಮತ್ತು ಧಾರ್ಮಿಕ ಅಧ್ಯಯನಗಳ ಬಗ್ಗೆ ಇತ್ತು. ಇತ್ತೀಚೆಗಷ್ಟೇ ಹವಾಮಾನ ಕುರಿತಾದ ನೀತಿಶಾಸ್ತ್ರ ಅಥವಾ ಹವಾಮನ ತತ್ವಶಾಸ್ತ್ರದ ಬಗ್ಗೆ ಗಮನ ಕೇಂದ್ರೀಕರಿಸಲು ಪ್ರಾರಂಭಿಸಿದ್ದೆ. ತತ್ವಶಾಸ್ತ್ರದ ವಿವಿಧ ಕ್ಷೇತ್ರಗಳಲ್ಲಿ ಪಾರಂಗತರಾದ ಹಲವರು ಪರಿಸರದ ವಿಷಯವನ್ನು ವಿವಿಧ ಆಯಾಮಗಳಿಂದ ಪರಿಶೋಧಿಸುತ್ತಿದ್ದಾರೆ. ಜಗತ್ತಿನ ಧರ್ಮಗಳ ವಿಸ್ತಾರವನ್ನು ಶೋಧಿಸಿದ ಮೇಲೆ, ಭಾರತದ ಧಾರ್ಮಿಕ ಸಾಹಿತ್ಯಗಳಲ್ಲಿ, ಅದರಲ್ಲಿಯೂ ಮುಖ್ಯವಾಗಿ ಹಿಂದೂ ಧರ್ಮದ ಸಾಹಿತ್ಯದಲ್ಲಿ ಮಾನವೀಯತೆ ಮತ್ತು ಪ್ರಕೃತಿಗಳ ಮಧ್ಯದಲ್ಲಿರುವ ಸಂಬಂಧದ ವಿಚಾರಗಳಿಂದ ನಾನು ಸಮ್ಮೋಹಿತನಾದೆ. ಆ ವಿಷಯಕ್ಕೆ ಸಂಬಂಧಿಸಿದಂತೆ ಬಹಳಷ್ಟು ಓದಿದ್ದೆ. ಅಲ್ಲದೆ ಭಾರತೀಯ ತತ್ವಶಾಸ್ತ್ರವು ಪರಿಸರಾತ್ಮಕ ನೀತಿಯನ್ನು ಹೊಂದಿದೆಯೇ ಅಥವ ಪರಿಸರಾತ್ಮಕ ಕ್ರಿಯಾಶೀಲತೆಯನ್ನು ಬೆಂಬಲಿಸಿದೆಯೇ ಅಥವಾ ಪ್ರಕೃತಿಯನ್ನೇನಾದರೂ ಉದಾಸೀನ ಮಾಡಿದೆಯೇ ಎಂಬಿತ್ಯಾದಿ ವಿಷಯಗಳ ಬಗ್ಗೆ ನಡೆದ ಚರ್ಚೆಯ ಬಗ್ಗೆಯೂ ಚಿಂತನೆ ನಡೆಸಿದ್ದೆ. ನಾನು ಹೆಚ್ಚಾಗಿ ಪಾಶ್ಚಿಮಾತ್ಯ ಪರಿಸರ ತಜ್ಞರ ಸಾಹಿತ್ಯವನ್ನು ಓದಿದ್ದೆ. ಆದರೆ ಆ ತಜ್ಞರು ಭಾರತೀಯ ಪರಂಪರೆಯ ಬಗ್ಗೆ ಬಹಳ ಅಲ್ಪ ತಿಳಿದವರಾಗಿದ್ದರು. ಆದಾಗ್ಯೂ ತಮ್ಮದೇ ಆದ ವದಗಲನ್ನು ಮಂಡಿಸಿದ್ದರು. ಹಿಂದೂ ಧಾರ್ಮಿಕ ಸಂಪ್ರದಾಯದ ಬಗ್ಗೆ ಪುಸ್ತಕಗಳ ಮೂಲಕ ಸ್ವಲ್ಪ ತಿಳುವಳಿಕೆ ಪಡೆದಿದ್ದೆ. ಅಲ್ಲದೆ, ಈ ಮೊದಲು ಭಾರತಕ್ಕೆ ಭೇಟಿ ಕೊಟ್ಟಿದ್ದ ಅನುಭವವಿತ್ತು. ಈ ಕಾರಣದಿಂದ ಮೂಲಭೂತ ಸಂಶೋಧನೆ ಮಾಡಬಹುದೆಂಬ ಅನಿಸಿಕೆ ನನ್ನದಾಯಿತು. ಪರಿಸರಾತ್ಮಕ ನೀತಿಗಾಗಿ ಹಿಂದೂ ಧರ್ಮವಾಗಲಿ ಅಥವಾ ಹಿಂದೂ ಧರ್ಮದ ಇನ್ನಾವುದೇ ರೂಪವಾಗಲಿ ಸಂಪನ್ಮೂಲವಾಗಬಹುದೆ ಎಂಬುದನ್ನು ಚರ್ಚಿಸುವುದರಲ್ಲಿ ಯಾವ ಅರ್ಥವೂ ಇರಲಿಲ್ಲ. ನಿಜವಾದ ಪ್ರಶ್ನೆ ಇದ್ದದ್ದು ಈಗ ಭಾರತದಲ್ಲಿ ನಡೆಯುತ್ತಿರುವ ಪರಿಸರಾತ್ಮಕ ಕ್ರಿಯಾಶೀಲತೆಗೆ ಭಾರತದ ಧಾರ್ಮಿಕ ಪರಂಪರೆಗಳೇನಾದರೂ ಬೆಂಬಲ ಕೊಡುತ್ತಿದೆಯೇ ಎಂಬುದಾಗಿತ್ತು. ಈ ಸಂದರ್ಭದಲ್ಲಿ ಈ ಮನುಷ್ಯನನ್ನು ಭೇಟಿಮಾಡಬೇಕಾಗಿತ್ತು.

(ಮುಂದುವರಿಯುವುದು...)

* * *

ಕನ್ನಡ ಕಣ್ಮರೆಯಾದರೆ ಕನ್ನಡಮಾತೆಯ ಶಾಪತಟ್ಟುತ್ತದೆ

– ಅ.ರಾ.ಮಿತ್ರ

(ಮಳವಳ್ಳಿಯಲ್ಲಿ ಮಾರ್ಚ್ ೨೫,೨೬ ದಿನಾಂಕಗಳಲ್ಲಿ ನಡೆದ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣದ ಸಾರಾಂಶ)

ನಾನು ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಅಕ್ಕಿಹೆಬ್ಬಾಳು ಗ್ರಾಮದವನು. ನೋಡಿ ಸ್ವಾಮಿ, ಅಪ್ಪಟ ಕನ್ನಡಿಗರ ಜಿಲ್ಲೆ ಎಂದರೆ ಮಂಡ್ಯ ಒಂದೇ. ಇಲ್ಲಿಯವರ ಭಾಷಾ ಪ್ರೇಮ ಪ್ರಶ್ನಾತೀತವಾದುದು. ಈ ಜಿಲ್ಲೆಯಲ್ಲಿ ನಗರದ ಕಂಪಿಗಿಂತ ಮಣ್ಣಿನ ವಾಸನೆ ಹೇರಳವಾಗಿದೆ. ಇಲ್ಲಿಯ ಜನ ಮೇಲುನೋಟಕ್ಕೆ ಒರಟರು. ನಾಗರಿಕತೆಯ ಥಳುಕಿಗೆ ಬಲಿಬೀಳದೆ, ಹೃದಯದ ಭಾಷೆಯಲ್ಲಿ ಮಾತಾಡುವವರು. ಶುದ್ಧ ವ್ಯವಸಾಯಗಾರರಾದುದರಿಂದ ತಮ್ಮ ಹೃದಯ ಭೂಮಿಯನ್ನು ಚೆನ್ನಾಗಿ ಹಸನು ಮಾಡಿಕೊಳ್ಳುವ ಸ್ವಭಾವದವರು. ಮನುಷ್ಯ ಮನುಷ್ಯನ ನಡುವೆ ಆಪ್ತ ಸಂಬಂಧದ ಸೇತುವೆಯನ್ನು ಕಟ್ಟುವ ಸಾಮಾಜಿಕ ಕಳಕಳಿಯುಳ್ಳವರು. ಮಂಡ್ಯ ಜಿಲ್ಲೆಯವರು ಮಹಾ ಹಠವಾದಿಗಳು. ಅಧ್ಭುತ ಸಂಕಲ್ಪ ಶಕ್ತಿಯುಳ್ಳವರು. ಗ್ರಾಮೀಣ ದೈವಾರಾಧನೆ, ಆಚಾರಗಳನ್ನು ಕೈಬಿಡದವರು. ಚಳುವಳಿ ಎಂದರೆ ಮುನ್ನುಗ್ಗುವರು ಎಂಬುದಕ್ಕೆ 'ಚಡ್ಡಿ ಮೆರವಣಿಗೆ' ದೊಡ್ಡ ಪ್ರತಿಮೆಯಾಗಿ ನಿಲ್ಲುತ್ತದೆ. ಇವರ ಸಮಾಜಮುಖೀ ಧೋರಣೆಯಿಂದಾಗಿ ಈಗ ಮಂಡ್ಯ ಜಿಲ್ಲೆ ಒಂದು ಪ್ರಬಲ ರಾಜಕೀಯ ಕ್ಷೇತ್ರವಾಗಿ ರೂಪುಗೊಂಡಿದೆ ಎಂಬುದಕ್ಕೆ ಶಿವಪುರದ ಸ್ವತಂತ್ರ ಸಂಗ್ರಾಮದ ಹೋರಾಟಗಾರರ ಸ್ಮಾರಕ ಸೌಧವೇ ಸಾಕ್ಷಿಯಾಗಿದೆ. ಹಳ್ಳಿಹಳ್ಳಿಗಳಲ್ಲೂ ರಾಜಕೀಯ ಪ್ರಜ್ಞೆ ಜಾಗೃತವಾಗಿರುವುದರಿಂದ ಈ ಜಿಲ್ಲೆಯಿಂದ ವೀರಣ್ಣ ಗೌಡ, ಎಸ್. ಎಂ. ಕೃಷ್ಣ, ಮಾದೇ ಗೌಡರಂಥ ರಾಜನೀತಿಜ್ಞರೇ ಹೊಮ್ಮಿದ್ದಾರೆ.

ಈ ನಮ್ಮ ಮಂಡ್ಯ ಜಿಲ್ಲೆಯ ಕವಿ ಕೆ.ಎಸ್. ನರಸಿಂಹ ಸ್ವಾಮಿಗಳು, 'ನಿಮ್ಮ ಜೊತೆಗೆ ನಾನು ಬೆಳೆಯುತ್ತ ಬಂದವನು, ಬೇಲಿ ಹಿಗ್ಗುವುದನ್ನು ನೀವು ನೋಡುತ್ತಿಲ್ಲ' ಎಂದು ಒಂದು ಪದ್ಯದಲ್ಲಿ ಹೇಳಿರುವ ಮಾತು ನಮಗೆಲ್ಲ ಅನ್ವಯವಾಗಬೇಕು.'ಬೇಲಿ ಹಿಗ್ಗುವುದು' ಎಂಥ ಸುಂದರ ಪ್ರತಿಮೆ! ಹಾಗೆ ಸಾಗುವ ಪರಿಕ್ರಮದಲ್ಲಿ ನಮ್ಮ ಮೈ ಮನಸ್ಸುಗಳ ವಲಯಗಳನ್ನು ವಿಸ್ತರಿಸಿಕೊಳ್ಳುತ್ತ "ಸರ್ವೋದಯ"ದ ತತ್ವಗಳಿಗೆ ಬದ್ಧರಾಗಿರಬೇಕೆಂಬುದೇ ನನ್ನ ಈ ಮಾತಿನ ಆಶಯ. ಭೂಕಬಳಿಕೆ,ಜಮೀನು ಒತ್ತುವರಿ, ಕೆರೆ ಪ್ರದೇಶಗಳ ಅತಿಕ್ರಮಣ, ಅಕ್ರಮ ಗಣಿಗಾರಿಕೆ, ಅಧಿಕಾರದ ದಾಹ ಇವಿಷ್ಟೇ ರಂಗಗಳಲ್ಲಿ ಬೇಲಿ ಹಿಗ್ಗಿಸುವುದಕ್ಕಿಂತ, ಸಾಹಿತ್ಯ ರಚನೆ, ಕೃಷಿ ಕಲಾದರ್ಶನ, ವ್ಯವಹಾರ, ರಾಜನೀತಿ ತಜ್ಞತೆ ಹಾಗೂ ಸರ್ವೋದಯದ ತತ್ವಗಳನ್ನುಅಳವಡಿಸಿಕೊಳ್ಳುವಿಕೆ ಹಾಗೂ ಕೃಷಿರಂಗದ ಬೇಲಿಯನ್ನು ಹಿಗ್ಗಿಸುವುದು ನಾಡಿನ ಕ್ಷೇಮಕ್ಕೆ ಎಷ್ಟು ಮುಖ್ಯ ಎಂಬುದು ವಿಚಾರವಂತರಾದ ನಿಮ್ಮ ಮನಸ್ಸಿಗೆ ನಾಟಿದರೆ ಉತ್ತಮ ಎಂದು ನಾನು ಹೇಳುತ್ತೇನೆ.

ಒಂದು 'ಮೊಬೈಲ್' ಯಂತ್ರದಲ್ಲಿ ಎಷ್ಟೊಂದು ವಿಷಯಗಳನ್ನು ಅಡಗಿಸಿಟ್ಟಿದ್ದಾರೆ, ನೋಡಿ ಹಾಗೆಯೇ ನೀವು ಒಂದು ಸಂಕ್ಷಿಪ್ತ ಮೊಬೈಲ್ ಆಗಬೇಕು.

ನೂರು ಮರ ನೂರು ಸ್ವರ
ಒಂದೊಂದು ಅತಿ ಮಧುರ

ಎಂಬ ಬೇಂದ್ರೆಯವರ ವಾಣಿಯಲ್ಲಿ ಈಗ ಸಾವಿರ ಮರ ಎಂದು ತಿದ್ದಬಹುದಾದಷ್ಟು ವಾಣಿಗಳು ಈಚೆಗೆ ಕೇಳಿಬರುತ್ತಿವೆ. ಕವಿ, ಕಥೆಗಾರ, ರಚನಾಕಾರರೊಂದಿಗೆ ಜೀವ ಸಂವಾದ ಬೆಳೆಸಿಕೊಳ್ಳಿ. ನಿಮ್ಮ ವಿಶಿಷ್ಟ ಧ್ವನಿ, ದಾರಿ, ರಚನೆಯ ಪ್ರಕಾರ ಯಾವುದೆಂಬುದನ್ನು ಗುರುತಿಸಿಕೊಳ್ಳಿ. ಮುಖ್ಯವಾಗಿ ಅಂತರಂಗದ ಜಿಜ್ಞಾಸೆ ಇರಬೇಕು. ಒಳನೋವು ನಿಮ್ಮನ್ನು ಚಿಂತನೆಗೆ ಹಚ್ಚುತ್ತದೆ ಎಂಬುದನ್ನು ಮರೆಯಬೇಡಿ. 'ಒಳಗುಸಿರು ಕಟ್ಟಿ ಕುಡಿವ ಅಬ್ಬಿಗಳನ್ನು ಎಬ್ಬಿಸೋ ಮೈಮುಟ್ಟಿ ಅಟ್ಟು ಹೊರಗೆ' ಎಂಬ ಅಡಿಗರ ಮಾತನ್ನು ನೆನಪಿಸಿಕೊಳ್ಳಿ. ಸುಮ್ಮನೆ ಬರೆಯಲು ಹೊರಟರೆ ಏನು ಪ್ರಯೋಜನ? ದೊಡ್ಡದನ್ನು ಬರೆಯಬೇಕು ನಿಜ. ಆದರೆ ಸಾಧನೆ? ಇದನ್ನೇ ಬೇಂದ್ರೆಯವರು 'ರತ್ನ ಬೇಕು ಆದರೆ ಪ್ರಯತ್ನ ಬೇಡವೇ?' ಎಂದು ವಿನೋದಮಯವಾಗಿ ಹೇಳಿದ್ದಾರೆ. ಅಡಿಗರು ಈ ಎಲ್ಲ ಭಾವನೆಗಳಿಗೆ ಕಳಸವಿಡುವಂತೆ "ಅಗೆವಾಗ್ಗೆ ಮೊದಲು ಕೋಶಾವಸ್ಥೆ ಮಣ್ಣು" ಎಂದು ಬರೆದರು. ಅಂದರೆ ಕವಿ ಸಾಹಸಿ, ಉದ್ಯಮಿ, ಗೃಹಸ್ಥ ಎಲ್ಲರೂ. ಹೀಗೆ ಅಗೆದು ಶೋಧಿಸುವ ಕಾರ್ಯ ಮಾಡಬೇಕು. ಮೊದಲು ಕೋಶಾವಸ್ಥೆ ಮಣ್ಣು ನಿಜ. ಆದರೆ ಕೆಳಗೆ, ಮತ್ತೂ ಕೆಳಗೆ ಗುದ್ದಲಿ ಹಾರೆಯಿಂದ ತೋಡಿದರೆ ಮಿರು ಮಿರುಗುವ ಬಂಗಾರದ ಗೆರೆಗಳು ಕಾಣುತ್ತವೆ.

ನಾನೀಗ ಕನ್ನಡದ ಬಗೆಗೆ ಒಂದು ದುರಂತ ಸುದ್ದಿಯನ್ನು ವಿಧಿಯಿಲ್ಲದೇ ಹೇಳಬೇಕಾಗಿದೆ. ಇದು ಒಂದು ಸಾರ್ವಜನಿಕ ಸುದ್ದಿಮೂಲದಿಂದ ತಿಳಿದು ಬಂದಿರುವ ಸಂಗತಿ. ಜಗತ್ತಿನಲ್ಲಿ ಈಗ ಉಳಿದಿರುವುದು ಕೇವಲ ೫೦೦೦ ಭಾಷೆಗಳು. ಇನ್ನು ೨೫ ವರ್ಷಗಳಲ್ಲಿ ಈ ಭಾಷೆಗಳಲ್ಲಿ ಸುಮಾರು ೨೫೦೦ಭಾಷೆಗಳು ಕಣ್ಮರೆಯಾಗುತ್ತವೆ ಎಂದು ಭಾಷಾ ಶಾಸ್ತ್ರಜ್ಞರು ಸಂಕಟಪಟ್ಟಿದ್ದಾರೆ. ಎಲ್ಲ ಭಾಷೆಗಳಿಗೂ ಬದುಕುವ ಹಕ್ಕು ಇರಬೇಕಲ್ಲವೆ? ಆದರೆ ಇದರಲ್ಲಿ ಅರ್ಧದಷ್ಟು ಭಾಷೆಗಳು ಕಣ್ಮರೆಯಾಗುತ್ತವೆಂಬ ಹೇಳಿಕೆಯ ಜೊತೆಗೆ ಭಾರತದ ಮರಾಠಿ, ತೆಲುಗು ಮತ್ತು ಕನ್ನಡ ಭಾಷೆಗಳೂ ಈ ಕಣ್ಮರೆಯ ಪಟ್ಟಿಯಲ್ಲಿ ಸೇರಿರುವುದು ನಮಗೆಲ್ಲ ಮರೆಯಲಾಗದ ಯಾತನೆಯ ಸಂಗತಿಯಾಗಿದೆ. ಐದು ಕೋಟಿಯಷ್ಟು ಜನ ಮಾತನಾಡುವ ಈ ಮಹತ್ವದ ಐತಿಹಾಸಿಕ ಭಾಷೆ ಕಣ್ಮರೆಯಾದರೆ, ಕನ್ನಡತಾಯಿಯ ಶಾಪ ನಮಗೆಲ್ಲ ತಟ್ಟುತ್ತದೆ ಎಂಬುದನ್ನು ಮರೆಯಬಾರದು. ನಮ್ಮ ಸರಕಾರಗಳ ಉಡಾಫೆಯ ಧೋರಣೆ, ಜನರ ನಿಷ್ಕಾಳಜಿ ಮತ್ತು ಕನ್ನಡ ಭಾಷಿಗರ ಸಂಕಲ್ಪಶಕ್ತಿಯ ಕೊರತೆಗಳು ಈ ದುರಂತದ ಲಾಲಿಹಾಡಿಗೆ ಕಾರಣ ಎಂದರೆ ತಪ್ಪಲ್ಲ.

ಗೆಳೆಯರೇ, ಯವುದೇ ಒಂದು ಭಾಷೆ ಉಳಿಯುವುದು ಅಳಿಯುವುದು ಜನರಿಂದ. ಈಗ ಎಪ್ಪತ್ತೈದು ವರ್ಷಗಳ ಹಿಂದೆಯೇ ಹೈದರಾಬಾದಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಎ.ಆರ್. ಕೃಷ್ಣ ಶಾಸ್ತ್ರಿಗಳು ಕನ್ನಡದ ಸ್ಥಿತಿಗತಿಗಳನ್ನು ಕಂಡು

ಕೊರಗಿದ್ದರು. ಕನ್ನಡ ನಾಡಿನಲ್ಲೇ ಕನ್ನಡಕ್ಕೆ ಮಣೆಯಿಲ್ಲದ್ದನ್ನು ಕುರಿತು "ಈ ಭಾಷೆಯನ್ನು ಬಂಗಾಳಕೊಲ್ಲಿಗೋ, ಅರಬ್ಬೀ ಸಮುದ್ರಕ್ಕೋ ನೀವೇ ಎಸೆದು ಬಿಡಿ" ಎಂದು ಚುಚ್ಚಿ ನುಡಿದರು. ಈ ದುರಂತದ ಸುದ್ದಿ ನಿಮ್ಮೆಲ್ಲರ ಮನ-ಮನೆಗಳಲ್ಲಿ ಆಘಾತವನ್ನು ತರಲಿ. ಈ ಭಾಷೆಯನ್ನು ಉಳಿಸುವುದಕ್ಕಾಗಿ ನಾವೆಲ್ಲ ನಮ್ಮ ಸೋಮಾರಿತನ, ನಿಷ್ಕಾಳಜಿ, ಉದಾಸೀನ ಮನೋಧರ್ಮವನ್ನು ಬಿಟ್ಟುಕೊಟ್ಟು ಅಳಿದುಳಿದ ಶಕ್ತಿಯನ್ನು ಒಗ್ಗೂಡಿಸಿಕೊಂಡು ಪ್ರಾಮಾಣಿಕವಾಗಿ ಪ್ರಯತ್ನ ಪಡೋಣ. ಕನ್ನಡವನ್ನು ಕೇವಲ ಮನೆ ಭಾಷೆಯನ್ನಾಗಿ ಇರಿಸದೆ ನಾಡ ಭಾಷೆಯನ್ನಾಗಿಸೋಣ.

ಕುವೆಂಪು ನಮಗೆ ಹೇಳುತ್ತಿದ್ದ ಒಂದು ಚಾರೋಕ್ತಿ ಯುವ ಬರಹಗಾರರಿಗೆಲ್ಲ ಮೇಲ್ಪಂಕ್ತಿಯಾಗಲಿ, ಅವರು ವಿದ್ಯಾರ್ಥಿಗಳನ್ನು, ವಿಚಾರ ವಾದಿಗಳನ್ನು, ಸಮಾನ್ಯರನ್ನು ಕುರಿತು ಹೇಳುವಾಗ 'ತುಂಬುವ ಮೂಟೆಗಳಾಗಬೇಡಿ, ಬೆಳೆಯುವ ಪೈರುಗಳಾಗಿ'ತುಂಬುವ ಮೂಟೆಗಳು ಎಂಥ ಸುಂದರ ಪ್ರತಿಮೆಯಾಗಿದೆ ಅಂದರೆ, ತುಂಬಿಟ್ಟ ಧಾನ್ಯ ಚಿಗುರುವುದಿಲ್ಲ, ಇದ್ದ ಕಡೆಯೇ ಇರುತ್ತದೆ, ಆದರೆ ಬೆಳೆಯುವ ಪೈರುಗಳು? ಒಂದು ಕಾಳೆರಚಿದರೆ, ಹತ್ತಾಗಿ, ನೂರಾಗಿ, ಸಾವಿರವಾಗಿ ವೃದ್ಧಿಹೊಂದುತ್ತವೆ.

– ಸಂಗ್ರಹ – ಬೋರಾಪುರ ಜಯರಾಮ್

ಸಂತಾಪ

ಶಕುಂತಲಾ ಕುರ್ತಕೋಟಿ

ಗಾಂಧೀ ವಿಚಾರ ಕ್ಷೇತ್ರ ಮತ್ತು ಖಾದಿ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ ಶಕುಂತಲಾ ಕುರ್ತಕೋಟಿಯವರು ಏಪ್ರಿಲ್ ೧೮ರಂದು ತಮ್ಮ ಇಳಿವಯಸ್ಸಿನಲ್ಲಿ ನಿಧನರಾದರು. ಸಮಾಜವಾದಿ ಹೋರಾಟಗಾರ ಶಂಕರ ಕುರ್ತಕೋಟಿಯವರ ಬಾಳಸಂಗಾತಿಯಾಗಿ ಶಕುಂತಲಾರವರು ತಮ್ಮ ಜೀವನದ ಕೊನೆಯವರೆಗೂ ಸಾಮಾಜಿಕ ಹಿತಕ್ಕಾಗಿ ಹೋರಾಡಿದರು.

ಶ್ರೀನಿವಾಸ ಹಾವನೂರು

ಕನ್ನಡದ ಖ್ಯಾತ ವಿದ್ವಾಂಸ ಮತ್ತು ಸಂಶೋಧಕ ಡಾ. ಶ್ರೀನಿವಾಸ ಹಾವನೂರು ತಮ್ಮ ೮೩ನೇ ವಯಸ್ಸಿನಲ್ಲಿ ಏಪ್ರಿಲ್ ೩೮ರಂದು ನಿಧನರಾದರು.

ಚೆರ್ಕಾಡಿ ರಾಮಚಂದ್ರ ರಾಯರು

ಕರ್ನಾಟಕದ ಫುಕುವೋಕಾ ಎಂದೇ ಪ್ರಸಿದ್ಧರಾಗಿದ್ದ ಮತ್ತು ನಿಸರ್ಗ ಸಹಜ ಕೃಷಿ ಮಾಡಿ ಯುವಕರಿಗೆ ಆದರ್ಶಪ್ರಾಯರಾಗಿದ್ದ ಚೇರ್ಕಾಡಿ ರಾಮಚಂದ್ರರಾಯರು ನಿಧನರಾದರು.

ಈ ಮೂರೂ ಹಿರಿಯ ಚೇತನಗಳಿಗೆ ಜನಪದ ವಿಚಾರದ ಅಂತಿಮ ನಮನ.

ಜನಪದ ವ್ಯಕ್ತಿ

ಅಬ್ದುಲ್ ಕರೀಂ

ಅಬ್ದುಲ್ ಕರೀಂ ಎಂದರೆ ಅರಣ್ಯದ ನಿರ್ಮಾಪಕ! ಪ್ರಕೃತಿದತ್ತವಾದ ಅರಣ್ಯವನ್ನು ವಿವೇಚನಾರಹಿತವಾಗಿ ನಾಶಮಾಡುತ್ತಿರುವ ಮನುಷ್ಯಜೀವಿಗಳಲ್ಲಿ ಅಪವಾದಾತ್ಮಕವಾಗಿರುವವರು ಅಬ್ದುಲ್ ಕರೀಂ. ಇವರು ಕಾಸರಗೋಡು ಬಳಿ ಪುಲಿಯಕುಳಂ ಎಂಬ ಹಳ್ಳಿಯಲ್ಲಿ ಮಾನವ ನಿರ್ಮಿತ ಅರಣ್ಯ ಬೆಳೆಸಿ ಅಸಾಧಾರಣವಾದ ಕೆಲಸ ಮಾಡಿದ್ದಾರೆ. "ಪರರ ಹಿತಕ್ಕಾಗಿ ಜೀವನ ನಡೆಸುವುದೇ ಸಾರ್ಥಕವಾದ ಬದುಕು" ಎಂಬ ಆಲ್ಬರ್ಟ್ ಐನ್‌ಸ್ಟೀನ್‌ರ ಮಾತನ್ನು ಕಾಯಾ ವಾಚಾ ಮನಸಾ ನಡೆದು ತೋರಿಸಿರುವ ವ್ಯಕ್ತಿ ಅಬ್ದುಲ್ ಕರೀಂ, ತಮ್ಮ ಈ ಕೃತಿಯಿಂದ "ಕೇರಳದ ಅರಣ್ಯ ನಿರ್ಮಾಪಕ"ನೆಂದೇ ಪ್ರಸಿದ್ಧಿಯಾಗಿದ್ದಾರೆ.

ವಿಶ್ವದ ತಾಪಮಾನ ಹೆಚ್ಚುತ್ತಿರುವ ಈ ಸಂಕಟಮಯ ಸಮಯದಲ್ಲಿ ಎಲ್ಲರೂ ಹತಾಶರಾಗಿ ಮಾತನಾಡುತ್ತಾರೆ. ತಾಪಮಾನದ ಹೆಚ್ಚಳಕ್ಕೆ ಕಾರಣವಾಗಿರುವ ಅರಣ್ಯ ನಾಶ ತಡೆದು ಪುನಃ ಅರಣ್ಯವನ್ನು ನಿರ್ಮಿಸಬೇಕೆಂಬ ಕೆಲಸವನ್ನು ಮಾಡಲು ಎಲ್ಲರೂ ಹಿಂಜರಿಯುತ್ತಿರುವಾಗ ಅಬ್ದುಲ್ ಕರೀಂ ಒಬ್ಬಂಟಿಗರಾಗಿ ತಮ್ಮ ೩೨ ಎಕರೆ ಬೆಂಗಾಡು ಭೂಮಿಯನ್ನು ಇಂದು ವಿಸ್ತಾರವಾದ ಹಸಿರು ತುಂಬಿದ ಅರಣ್ಯವನ್ನಾಗಿ ಪರಿವರ್ತಿಸಿದ್ದಾರೆ. ಮಣ್ಣಿನ ಗುಣಮಟ್ಟವನ್ನು ಹೆಚ್ಚಿಸುವುದರ ಜೊತೆಗೆ ಭೂಮಿಯ ಒಳಗಿನ ಜಲ ಮಟ್ಟ ಮೇಲೆ ಬರುವಂತೆ ಮಾಡಿದ್ದಾರೆ.

ಅವರ ಈ ೩೨ ಎಕರೆ ಅರಣ್ಯವು " ಒಂದು ಪರಿಸರಾತ್ಮಕ ಮೋಡಿ"ಯೆಂದು ಮಾನ್ಯತೆ ಪಡೆದಿದೆ. ಇದೆಲ್ಲವನ್ನೂ ಅವರು ತಮ್ಮ ಸ್ವಂತ ಹಣ ವ್ಯಯಿಸಿ ಮಾಡಿದ್ದಾರೆಯೇ ಹೊರತು ಸರ್ಕಾರದ ಧನ ಸಹಾಯದಿಂದಲ್ಲ.

ನಗರ ಜೀವನದಿಂದ ಬೇಸತ್ತ ಕರೀಂರವರು ೧೯೭೭ರಲ್ಲಿ ಐದು ಎಕರೆ ಭೂಮಿ ಖರೀದಿಸಿದರು. ಅಲ್ಲಿ ಸಸಿಗಳನ್ನು ನೆಡಲು ಪ್ರಾರಂಭಿಸಿದರು. ಹೀಗೆ ಮಾಡಲು ತೊಡಗಿದಾಗ ಸ್ಥಳೀಯ ಜನರು ಅವರನ್ನು ನೋಡಿ ನಕ್ಕರು. ಆದರೆ ಅವರು ನಿರಾಶೆಗೊಳ್ಳಲಿಲ್ಲ. ಮೂರು ವರ್ಷಗಳ ಕಾಲ ತಾನು ನೆಟ್ಟ ಸಸಿಗಳಿಗೆ ಬೇಸಿಗೆಯಲ್ಲಿ ದೂರದಿಂದ ನೀರು ತಂದು ಪೋಷಣೆ ಮಾಡಿದರು. ಆ ಸಸಿಗಳೆಲ್ಲವೂ ನಿಂತು ಕಿಲಕಿಲನೆ ನಗುತ್ತಿರುವುದನ್ನು ಕಂಡು ಹೆಚ್ಚಿನ ಹುಮ್ಮಸ್ಸಿನಿಂದ ಇನ್ನೂ ೨೭ ಎಕರೆ ಭೂಮಿ ಖರೀದಿಸಿದರು. ಈ ಹೊಸ ನಿರುಪಯುಕ್ತ ಭೂಮಿಯಲ್ಲೂ ಕೂಡ ಕರೀಂ ಸಸಿಗಳನ್ನು ನೆಡಲು ಪ್ರಾರಂಭಿಸಿದರು. ಹಕ್ಕಿಗಳು ಬರಲಾರಂಭಿಸಿದವು. ಜೊತೆಗೆ ಎಲ್ಲಾ ಪ್ರಕಾರದ ಬೀಜಗಳನ್ನು ಹರಡಲಾರಂಭಿಸಿದವು. ನಿಧಾನವಾಗಿ ಔಷಧೀಯ ಸಸ್ಯಗಳ ಜೊತೆಗೆ ಕಳೆಯೂ ಬೆಳೆಯಲಾರಂಭಿಸಿತು. ಕಾಡಿನ ವಿಸ್ತೀರ್ಣ ಬೆಳೆದಂತೆಲ್ಲ ಸುತ್ತಮುತ್ತಲಿನ ಹತ್ತು ಕಿಲೋಮೀಟರ್ ಪ್ರದೇಶದಲ್ಲಿಯ ಭೂಜಲ ಏರಲಾರಂಭಿಸಿತು. ಒಂದುಕಾಲಕ್ಕೆ ಬೆಂಗಾಡಾಗಿದ್ದ ಭೂಮಿ ಈಗ ಜಲಜಂತು(ಸ್ಪಾಂಜ್) ಆಗಿದೆ. "ನಾನು ಎಂದೂ ಕಳೆ ಕಿತ್ತು ಹಾಕಲಿಲ್ಲ, ಮರದ ಒಂದು ರೆಂಬೆಯನ್ನೂ ಕಡಿಯಲಿಲ್ಲ, ಎಂದೂ ಮರದ ಜಾತಿಯನ್ನು ಆಯ್ಕೆ ಮಾಡಲಿಲ್ಲ ಮತ್ತು ಎಂದೂ ರಾಸಾಯನಿಕ ಗೊಬ್ಬರ ಉಪಯೋಗಿಸಲಿಲ್ಲ. ನಗರ ಜೀವನದ ಗದ್ದಲದಿಂದ ದೂರದಲ್ಲಿ ಸುತ್ತಲೂ ಶಾಂತಿಯುತ, ಹಚ್ಚ ಹಸಿರಾಗಿರುವ ಈ ಅರಣ್ಯವೇ ನಾನು ಪಡೆದ ಬಹುಮಾನವಾಗಿದೆ." ಎಂದು ಅವರು ಹೇಳಿದ್ದಾರೆ. ಕರೀಂ ೧೯೮೬ರಿಂದ ತಮ್ಮ ಅರಣ್ಯದಲ್ಲಿ ವಾಸವಾಗಿದ್ದಾರೆ. ಎಲ್ಲಿಯೂ ಒಂದೇ ಒಂದು ಚೂರು ಪ್ಲಾಸ್ಟಿಕ್ ಆಗಲಿ, ಕಾಗದವಾಗಲಿ ಕಂಡುಬರುವುದಿಲ್ಲ. ಹೊಂಡಗಳನ್ನು ತೋಡಿ ಮಣ್ಣನ್ನು ಮತ್ತು ನೀರನ್ನು ಉಳಿಸಿಕೊಂಡಿದ್ದಾರೆ. ಈಗ ಕರೀಂರವರ ಕಾಡಿನಲ್ಲಿ ೪೦೦ ಪ್ರಕಾರದ ಮರಗಳಿವೆ. ೩೦೦ ಪ್ರಕಾರದ ಔಷಧೀಯ ಸಸ್ಯಗಳಿವೆ. ಕೇರಳ ಸರ್ಕಾರವು ೬ನೇ ತರಗತಿ ಪಠ್ಯಕ್ರಮದಲ್ಲಿ ಕರೀಂರವರ ಅರಣ್ಯವನ್ನು "ಸ್ವಾಭಾವಿಕ ಮಾನವ ನಿರ್ಮಿತ ಅರಣ್ಯ" ಎಂಬ ಹೆಸರಿನಲ್ಲಿ ವಿಷಯ ಸೇರಿಸಿದ್ದಾರೆ. ಇದರಿಂದಾಗಿ ಪ್ರತಿ ವರ್ಷ ಸುಮಾರು ೧೨೦೦೦ ವಿದ್ಯಾರ್ಥಿಗಳು ಈ ಕಾಡಿಗೆ ಭೇಟಿ ಕೊಡುತ್ತಾರೆ. ಅಬ್ದುಲ್ ಕರೀಂರವರ ಈ ಸಾಹಸಕ್ಕಾಗಿ ಅಪಾರ ಮೆಚ್ಚುಗೆ ಪಡೆದಿದ್ದಾರೆ.

– ಸೈನಾ ಎ.ಜೆ; (ಅನು–ಸುಕೌ)

ಮಹಾತ್ಮರ ಪ್ರತಿಮೆ;
ಗುದ್ದಲಿ ಪೂಜೆ ಸೃಷ್ಟಿಸಿದ ಅವಾಂತರ

(ಆಂಗ್ಲ ಮೂಲ : ಕೆ.ಜಿ.ಮಲ್ಯ : ಕನ್ನಡಕ್ಕೆ : ಲ.ನರಸಿಂಹಯ್ಯ)

(ಕಳೆದ ಸಂಚಿಕೆಯಿಂದ ಮುಂದುವರಿದದ್ದು...)

ಭೂಮಿಪೂಜಾ ಕಾರ್ಯಕ್ರಮಕ್ಕೆ, ಮುಖ್ಯಮಂತ್ರಿಯವರು ಮತ್ತು ಸಂಬಂಧಪಟ್ಟ ಮಂತ್ರಿಯವರೂ ಹಾಜರಾಗಲು ಸಾಧ್ಯವಾಗದೇ ಹೋದರೂ ಅದರ ಕೊರತೆ ಸಾರ್ವಜನಿಕರಿಗೆ ಕಂಡುಬರಲಿಲ್ಲ.

ಆ ದಿನವೆಲ್ಲ ಪುರಸಭಾಧ್ಯಕ್ಷರು ಒಂದಲ್ಲ ಒಂದು ಕೆಲಸದಲ್ಲಿ ಬಿಡುವಿಲ್ಲದೆ ತೊಡಗಿಸಿಕೊಂಡಿದ್ದರು. ಆದರೂ ಆ ಪಿಕಾಶಿಯ ತುದಿಯಿಂದ ಕೇಳಿಬಂದ ಆ ಠಣ್ ಶಬ್ದ ಮಾತ್ರ ಅವರ ಕಿವಿಯಲ್ಲಿ ಪ್ರತಿಧ್ವನಿಸುತ್ತಲೇ ಇತ್ತು. ಅದೇ ದಿನ ಸಾಯಂಕಾಲ, ದಿನದ ಕಾರ್ಯಕ್ರಮ ಕುರಿತಂತೆ ಸಮೀಕ್ಷೆ ಮಾಡುವುದಕ್ಕಾಗಿ ಪುರಸಭೆ ಸೇರಿತ್ತು. ಆಗ, ಭೂಮಿಪೂಜೆ ನೆರವೇರಿದ ಅದೇ ಮೈದಾನದಲ್ಲಿ ಮಾರನೆಯ ದಿನ ಮತ್ತೆ ಸಭೆ ಸೇರಬೇಕೆಂದು ಅಧ್ಯಕ್ಷರು ಕೋರಿದರು.

"ಸಭೆ ಸೇರುವುದರ ಉದ್ದೇಶವನ್ನು ತಿಳಿಯಬಹುದೇ ಸ್ವಾಮಿ?" ಹಿಂಬೆಂಚಿನ ಸದಸ್ಯರು ಕುತೂಹಲದಿಂದ ಕೇಳಿದರು.

"ಖಂಡಿತ ತಿಳಿಯಬಹುದು! ಈವೊತ್ತು ಬೆಳಗ್ಗೆ ನೆರವೇರಿದ ಭೂಮಿಪೂಜಾ ಕಾರ್ಯಕ್ರಮದ ಅಂಗವಾಗಿ ಭೂಮಿಯನ್ನು ಮೂರನೇ ಬಾರಿಗೆ ಅಗೆದಾಗ, ಪಿಕಾಶಿಯ ತುದಿಗೆ ಯಾವುದೋ ಲೋಹಾಂಶವು ತಾಕಿ ಠಣ್ ಎಂಬ ಶಬ್ದ ಕೇಳಿ ಬಂದಿತೆಂಬುದು ನಿಮಗೆಲ್ಲರಿಗೂ ತಿಳಿದಿದೆ. ಭೂಮಿಯಡಿಯಲ್ಲಿ ಏನೋ ಇರುವಂತೆ ಕಂಡುಬರುತ್ತಿದೆ, ಪ್ರಾಯಶಃ ಅದು ನಿಧಿಯ ಕೊಪ್ಪರಿಗೆ ಇದ್ದರೂ ಇರಬಹುದು. ಆದ್ದರಿಂದ ನಾಳೆ ಎಲ್ಲರ ಸಮ್ಮುಖದಲ್ಲಿ ಭೂಮಿಯನ್ನು ಶೋಧಿಸಿ ನೋಡಬೇಕಾಗಿದೆ, ಅದಕ್ಕಾಗಿಯೇ ನಾಳೆಯ ದಿನದ ಸಭೆ....."

"ಸರಿ ಆಗಬಹುದು!" ಎಂದು ಒಪ್ಪಿಕೊಂಡ ಸಭಾಸದರು ತಕ್ಷಣವೇ ಈಗ ಆ ಜಾಗದ ಕಾವಲಿನ ವ್ಯವಸ್ಥೆಗೆ ಏನು ಏರ್ಪಾಡಾಗಿದೆ ಅಧ್ಯಕ್ಷರೇ" ಎಂದು ಕೇಳಿದರು. ಆ ಜವಾಬ್ದಾರಿಯನ್ನು ಈಗಾಗಲೇ ನಮ್ಮ ಇಂಜಿನಿಯರ್‌ಗೆ ವಹಿಸಲಾಗಿದೆ. ಇಡೀ ರಾತ್ರಿ ಕಟ್ಟೆಚ್ಚರದಿಂದ ಕಾಯುವಂತೆಯೂ ಸೂಚಿಸಲಾಗಿದೆ. ಶ್ರದ್ಧಾ ಮನೋಭಾವದ ತಮ್ಮ ಸಿಬ್ಬಂದಿ ವರ್ಗದೊಂದಿಗೆ ಅವರು ಆ ಕರ್ತವ್ಯವನ್ನು ನಿರ್ವಹಿಸುವುದರಿಂದ ಯಾವುದೇರೀತಿಯ ಆತಂಕಕ್ಕೆ ಕಾರಣವಿಲ್ಲ. ಶೋಧನಾಕಾರ್ಯ ನಾಳೆಯೇ ನಮ್ಮೆಲ್ಲರ ಸಮ್ಮುಖದಲ್ಲಿ ನಡೆಯಲಿದೆ. ನಮ್ಮ ಈ ಪಟ್ಟಣಕ್ಕೆ ಭೂತಾಯಿಯ ಕೃಪಾಶೀರ್ವಾದದಿಂದ ಏನಾದರೂ ದೊರಕೀತೇನೋ ನೋಡೋಣ!" ಎಂದು ಸಭೆಗೆ ತಿಳಿಸಿ ಆ ದಿನದ ಸಭೆಯನ್ನು ಅಲ್ಲಿಗೆ ಮುಗಿಸಿದರು.

ಮಾರನೆಯದಿನ ಪುರಸಭೆಯ ಎಲ್ಲ ಸದಸ್ಯರೂ, ಅದೇ ಶಾಮಿಯಾನದಡಿಯಲ್ಲಿ ಸಮಾವೇಶಗೊಂಡರು., ವಿಶೇಷವೆಂಬಂತೆ ಪುರಸಭೆಯ ಹಿರೀ ಸದಸ್ಯರೂ ಬಂದು ಕುಳಿತಿದ್ದರು. ಅವರು ಕುಳಿತಿದ್ದ ಸ್ಥಳಕ್ಕೇ ಹೋದ ಅಧ್ಯಕ್ಷರು, ಹಿಂದಿನ ದಿನದ್ದನ್ನು ಏನೂ ತೋರಿಸಿಕೊಳ್ಳದೆ "ಈವೊತ್ತು ಹೇಗಿದ್ದೀರಿ ಸ್ವಾಮಿ?" ಎಂದು ಪ್ರಶ್ನಿಸಿದರು.

"ಚೆನ್ನಾಗಿದ್ದೇನೆ, ನಮಸ್ಕಾರ" ಎತ್ತಲೋ ನೋಡುತ್ತ ಪ್ರತಿಕ್ರಿಯಿಸಿದರು.

"ನಿಮ್ಮ ತಲೆನೋವು ಹೇಗಿದೆ?" ಮರೆಯದೆ ಕೇಳಿದ ಅಧ್ಯಕ್ಷರು "ವಿಪರೀತವಾಗಿದ್ದ ತಲೆನೋವಿನಿಂದಾಗಿ ನಿನ್ನೆಯ ಕಾರ್ಯಕ್ರಮಕ್ಕೆ ಹಾಜರಾಗಲು ಸಾಧ್ಯವಾಗುತ್ತಿಲ್ಲವೆಂದು ನೀವು ಹೇಳಿ ಕಳಿಸಿದ್ದೀರಿ" ಎಂದರು.

"........" ಮಾತನಾಡಲು ಮನಸ್ಸಿಲ್ಲವಾದ್ದರಿಂದ ಅವರ ಮೌನವೇ ಉತ್ತರವಾಗಿತ್ತು. ಇದನ್ನು ಗಮನಿಸಿದ ಅಧ್ಯಕ್ಷರು " ಗಾಂಧೀ ಮೈದಾನದ ಗರ್ಭದಲ್ಲಿ ನಮ್ಮ ಪಾಲಿಗೆ ಏನು ಲಭ್ಯವಾಗುವುದೋ ನೋಡೋಣ" ಎಂದು ವಿಷಯಾಂತರ ಮಾಡಿದರು. ಆದರೂ ಪ್ರತಿಕ್ರಿಯೆ ಕಂಡುಬರಲಿಲ್ಲ. ತನ್ನ ಆಗಮನ ಮತ್ತು ಆದೇಶಗಳಿಗಾಗಿ ಕಾಯುತ್ತಿದ್ದ ಇಂಜಿನಿಯರ್ ಕಡೆಗೆ ಹೋಗಿ ಶೋಧನಾ ಕಾರ್ಯವನ್ನು ಪ್ರಾರಂಭಿಸುವಂತೆ ಸನ್ನೆ ಮಾಡಿ, ತಾವು ಶಾಮಿಯಾನದಡಿ ಕುಳಿತಿರುವುದಾಗಿಯೂ ತಿಳಿಸಿದರು. ಆ ಕೂಡಲೇ ಇಪ್ಪತ್ತು ಮಂದಿಯ ಒಂದು ತಂಡ ಪಿಕಾಶಿ, ಸನಿಕೆ ಮುಂತಾದವುಗಳನ್ನು ಹಿಡಿದು ಭೂಶೋಧನಾ ಕಾರ್ಯಕ್ಕೆ ಕೈ ಹಾಕಿತು. ಶಾಸ್ತ್ರಕ್ಕೆ ಅಧ್ಯಕ್ಷರು ಅಗೆದು ಆರಂಭ ಮಾಡಿದ್ದ ಆ ಜಾಗವನ್ನು ಬಹಳ ಜೋಪಾನವಾಗಿ ಕಾಪಾಡಿಕೊಂಡು ಸುತ್ತಲೂ ಬಾವಿಯನ್ನು ತೋಡಿದರು.

ಮಧ್ಯಾಹ್ನದ ವೇಳೆಗೆ, "ಬನ್ನಿ, ದಯವಿಟ್ಟು ಎಲ್ಲರೂ ಬೇಗ ಬನ್ನಿರಿ! ಅದೇನೋ ಅಸಾಧಾರಣವಾದದ್ದು ಕಂಡುಬಂದ್ಯೆತೆ!" ಎಂದು ಇಂಜಿನಿಯರ್ ಶಾಮಿಯಾನದಡಿ ಕುಳಿತಿದ್ದವರನ್ನು ಕುರಿತು ಕೂಗಿಕೊಂಡರು. ಅಧ್ಯಕ್ಷರೂ ಸೇರಿದಂತೆ ಎಲ್ಲರೂ ಅಲ್ಲಿಗೆ ಧಾವಿಸಿದರು. ಸುಮಾರು ಎಂಟು ಅಡಿ ಆಳದಷ್ಟು ಅಗೆಯಲಾಗಿದ್ದ ಗುಂಡಿಯಲ್ಲಿ ಗೋಡೆಗೆ ಆನಿಸಿದಂತೆ ಆಳು ಎತ್ತರದ ಒಂದು ಪ್ರತಿಮೆ ಕಂಡು ಬಂತು.

"ಈ ಪ್ರತಿಮೆ ಮಾತ್ರವೆ? ನಿಧಿಯೇನೂ ಇಲ್ಲವೆ?" ಅಧ್ಯಕ್ಷರು ಕೇಳಿದರು.

'ಸರ್, ಮೊದಲು ಇದನ್ನು ಮೇಲಕ್ಕೆ ಎತ್ತಿಕೊಂಡು ಅಚ್ಚುಕಟ್ಟುಮಾಡಿ, ಕೇವಲ ಪ್ರತಿಮೇನೋ, ಪ್ರತಿಮೆ ರೂಪದಲ್ಲಿರೋ ನಿಧೀನೋ ಎಂಬುದನ್ನು ನೋಡೋಣ' ಇಂಜಿನಿಯರ್ ಮುಗುಳ್ನಗುತ್ತ ಉತ್ತರಿಸಿದರು.

"ಇನ್ನೂ ಅಗೀಬೇಕೇನ್ಸಾರ್?" ಸಿಬ್ಬಂದಿ ವರ್ಗ ಕೇಳಿತು.

"ಸಧ್ಯಕ್ಕೆ ಸಾಕೂಂತ ಕಾಣುತ್ತೆ, ಆದ್ರೂ ಖಾತ್ರಿ ಮಾಡಿಕೊಳ್ಳೋದಕ್ಕೆ ಕೆಳಗಡೆ ಕಲ್ಲಿದೆಯೋ, ಮೆತ್ತಗಿರೋ ಮಣ್ಣಿದೆಯೋ ಅಂತ ಸ್ವಲ್ಪ ನೋಡಿಬಿಡಿ" ಎಂದು ಇಂಜಿನಿಯರ್ ಸಿಬ್ಬಂದಿ ವರ್ಗಕ್ಕೆ ಸೂಚಿಸಿದರು.

ಮತ್ತಷ್ಟು ಭೂಮಿಯನ್ನು ತೋಡಲೆತ್ನಿಸಿದ ಸಿಬ್ಬಂದಿ "ಸರ್, ಕೆಳಗಡೆ ಗಟ್ಟಿಕಲ್ಲು ಮಾತ್ರ ತಾಕ್ತಾ ಐತೆ, ಠಣ್ ಶಬ್ದವೇನೂ ಬರ್ತಾ ಇಲ್ಲ" ಎಂದು ಹೇಳಿತು.

"ಹಾಗಾದ್ರೆ ಈಗ ಆ ಕೆಲಸ ನಿಲ್ಲಿಸಿ, ಪ್ರತಿಮೆಯನ್ನು ಮೇಲಕ್ಕೆ ಎತ್ತುವ ಕೆಲಸ

ಮಾಡಿ, ಅದಕ್ಕೂ ಮೊದಲು ಪ್ರತಿಮೆ ಕಲ್ಲಿನದ್ದೋ, ಲೋಹದ್ದೋ ನೋಡಿ ಹೇಳಿ!"

ಪ್ರತಿಮೆಯ ಬೇರ ಬೇರೆ ಭಾಗಗಳನ್ನು ಪಿಕಾಶ ಕಾವಿನಿಂದ ಮೆಲ್ಲಗೆ ಹೊಡೆದು ನೋಡಿದ ಕೆಲಸದವನೊಬ್ಬ "ಸರ್, ಇದು ಕಲ್ಲಿನ್ದಂತೂ ಅಲ್ಲ, ಕಂಚಿನದ್ದೇ ಇರಬೇಕು ಅನ್ನಿಸ್ತದೆ" ಎಂದ.

"ಕಂಚಿನ್ದೇ? ಹಾಗಾದ್ರೆ ಯಾರ್ದಿರಬಹುದು – ಮಾನವನ್ದೋ, ದೇವನ್ದೋ, ದೇವತೆಯದೋ?" ಪ್ರತಿಯೊಬ್ಬರೂ ಆಶ್ಚರ್ಯಚಕಿತರಾಗಿ ಕೇಳಿಕೊಂಡರು.

ಪ್ರತಿಮೆ ಸುಮಾರು ತೂಕವಾಗಿರುವಂತೆ ಕಂಡುಬಂದಿತು. ಆದ್ದರಿಂದ ಸಿಬ್ಬಂದಿ ವರ್ಗದವರು ಭದ್ರವಾದ ಹಗ್ಗಗಳನ್ನು ಬಳಸಿ ಅದನ್ನು ಮೇಲಕ್ಕೆ ಎತ್ತಿದರು. ಪ್ರತಿಮೆಯ ಮುಖವನ್ನು ಮುಸುಕಿದ್ದ ಧೂಳನ್ನು, ಸ್ವಯಂ ಇಂಜಿನಿಯರ್ ತಮ್ಮ ಕರವಸ್ತ್ರದಿಂದ ಒರೆಸಿದ್ದಾದ ಮೇಲೆ ನೆಟ್ಟಗೆ ನಿಲ್ಲಿಸುವಂತೆ ಸೂಚಿಸಿದರು. ಸಿಬ್ಬಂದಿ ವರ್ಗ ಹಾಗೆ ಮಾಡಿದಾಗ ಪ್ರತಿಮೆ ನಿಂತಭಂಗಿಯಲ್ಲಿ ಭವ್ಯವಾಗಿ ಕಾಣಿಸತೊಡಗಿತು. ಅಧ್ಯಕ್ಷರು ಆ ಮೂರ್ತಿಯನ್ನು ಅಡಿಯಿಂದ ಮುಡಿಯವರೆಗೆ ದಿಟ್ಟಿಸಿದರು. ಅದೊಂದು ವೃದ್ಧನ ಪ್ರತಿಮೆ, ಬೊಕ್ಕ ತಲೆ, ನೀಳವಾದ ದೇಹ, ಕೃಶವಾದ ಕೈಕಾಲು, ಬಲಗೈಯಲ್ಲೊಂದು ಊರುಗೋಲು, ಸೊಂಟದಿಂದ ಮಂಡಿಯವರೆಗೆ ಒಂದು ಪಂಚೆ, ಸೊಂಟದ ಎಡಭಾಗದಲ್ಲಿ ನೇತಾಡುವಂತಿದ್ದ ಒಂದು ಗಡಿಯಾರ, ಎದೆ ಮತ್ತು ಭುಜಗಳನ್ನು ಮುಚ್ಚುವಂತಿದ್ದ ಒಂದು ಶಾಲು, ಕಣ್ಣಿಗೆ ಕನ್ನಡಕ, ಮುಖದ ಮೇಲೆ ಮೋಹಕ ಮುಗುಳ್ನಗೆ – ಕಂಡು ಬಂದವು. ಇವುಗಳೆಲ್ಲವನ್ನೂ ಗಮನಿಸಿದ್ದಾದ ಮೇಲೆ ಅಧ್ಯಕ್ಷರು ಅಲ್ಲಿ ಸೇರಿದ್ದವರನ್ನು ಉದ್ದೇಶಿಸಿ– " ಇದು ಯಾರ ಪ್ರತಿಮೆ ಎಂಬುದನ್ನ ಯಾರಾದ್ರೂ ಹೇಳ್ತೀರಾ?" ಎಂದು ಎಲ್ಲರಿಗೂ ಕೇಳಿಸುವಂತೆ ಕೇಳಿದರು.

ಪ್ರತಿಮೆಯನ್ನು ಗುರುತಿಸುವ ತಿಳುವಳಿಕೆ ಯಾರೊಬ್ಬರಿಗೂ ಇದ್ದಂತೆ ಕಂಡುಬರಲಿಲ್ಲ.

ಇಂಜಿನಿಯರ್ ಮಾತ್ರ ಬಹಳ ಸೂಕ್ಷ್ಮವಾಗಿ ಪ್ರತಿಮೆಯನ್ನು ಪರಿಶೀಲಿಸತೊಡಗಿದ್ದರು. ಪ್ರತಿಮೆಗೆ ಆಧಾರವಾಗಿದ್ದ ಪಾದ ಪೀಠ ಸ್ವಲ್ಪ ಮುಕ್ಕಾಗಿರುವುದು ಕಂಡುಬಂದಿತು. ಹಾಗೆಯೇ ದೃಷ್ಟಿಸುತ್ತಿರುವಾಗ ಪಾದಪೀಠದ ಮೇಲೆ ಏನೋ ಕೆತ್ತಿರುವುದೂ, ಅದು ಧೂಳಿನಿಂದ ಮುಚ್ಚಿಹೋಗಿರುವುದೂ ಕಣ್ಣಿಗೆ ಬಿತ್ತು.

ಒದ್ದೆ ಬಟ್ಟೆಯನ್ನು ತರಿಸಿ ಧೂಳನ್ನು ಒರೆಸಿದ ಮೇಲೆ, ಆ ಕೆತ್ತನೆ ಸ್ಪಷ್ಟವಾಗಿ ಕಂಡಿತು. "ಸರ್, ಇದು ಓದಬಹುದಾದ ಭಾಷೆಯಲ್ಲಿದೆ, ಓದಲು ಹೇಳಿದರೆ ಓದ್ತೇನೆ" ಎಂದು ಖುಷಿಯಿಂದ ಕೂಗಿಕೊಂಡರು ಇಂಜಿನಿಯರ್.

"ಆಗಬಹುದು, ದಯವಿಟ್ಟು ಓದಿ!" ಅಧ್ಯಕ್ಷರು ಒಪ್ಪಿಗೆ ನೀಡಿದರು.

"ಮಹಾತ್ಮ ಗಾಂಧಿ" ಎಂದು ಓದುತ್ತ ".........ಪಿತ" ಎಂದು ತಡವರಿಸಿದರು.

"ಆ್ಞ, ಅಲ್ಲಿ ಏನಿದೆ? ಯಾರ ಪಿತ?" ಹಿಂಬಂಚಿನ ಸದಸ್ಯರು ಕೇಳಿದರು.

"ಒಂದು ಮೂಲೆ ಮುಕ್ಕಾಗಿದೆ, ಆದ್ರಿಂದ ಅದನ್ನು ಓದಲಾಗ್ತಿಲ್ಲ" ಇಂಜಿನಿಯರ್ ಸ್ಪಷ್ಟಪಡಿಸಿದರು.

"ಯಾರ ಪಿತ ಇರಬಹುದು? ಯಾವ ಮಗ, ಅಥವಾ ಯಾವ ಮಗಳ ಅಥವಾ ಯಾವ ಮಕ್ಕಳ ಪಿತ ಇವರಿರಬಹುದು?" ಅಧ್ಯಕ್ಷರು ಕುತೂಹಲದಿಂದ ಕೇಳಿದರು.

"ಇವೆಲ್ಲಾ ನಮ್ಮ ತಿಳುವಳಿಕೆಗೂ ಮೀರಿದವು" ಎಂದು ಅಭಿಪ್ರಾಯಪಟ್ಟ ಹಿರೀ ಸದಸ್ಯರು " ಕೆತ್ತನೆಯಲ್ಲಿರೋದನ್ನ ಇಂಜಿನಿಯರ್ ಓದಲಿ" ಎಂದು ಸಲಹೆ ಮಾಡಿದರು.

ಇಂಜಿನಿಯರ್ ಪ್ರತಿಮೆಯ ಮುಂದೆ ಕುಳಿತು ಸ್ವಲ್ಪ ಹೊತ್ತು ತದೇಕ ಮನಸ್ಕರಾಗಿ ಕೆತ್ತನೆಯ ಅಂಶಗಳನ್ನು ಗಮನಿಸಿದ್ದಾದ ಮೇಲೆ, ಅಧ್ಯಕ್ಷರನ್ನು ಕುರಿತು "ಸರ್, ಕೆತ್ತನೆಯಲ್ಲರುವ ಸುಮಾರು ಅಂಶಗಳನ್ನು ಓದಬಹುದು ಆದರೆ ಕೆಲವಂಶಗಳನ್ನು ಗ್ರಹಿಸಲಾಗುತ್ತಿಲ್ಲ" ಎಂದು ಹೇಳುತ್ತ ಓದತೊಡಗಿದರು.

ಮಹಾತ್ಮ ಗಾಂಧೀ......................ಪಿತ

ಅನಕ್ಷರತೆ, ಬಡತನ ಮತ್ತು ರೋಗ ರುಜಿನಾದಿಗಳ ವಿರುದ್ಧದ ಯುದ್ಧವನ್ನು ನಾವು ಜಯಿಸಬೇಕು.

ಅದಕ್ಕೂ ಮೊದಲು ನಾವು ರಾಜಕೀಯವಾಗಿ ಸ್ವಾತಂತ್ರ್ಯವನ್ನು ಸಂಪಾದಿಸಬೇಕು.

ಸತ್ಯ, ಅಹಿಂಸೆ ಮತ್ತು ಪ್ರೀತಿ ಈ ಮಾರ್ಗತ್ರಯಗಳ ಮೂಲಕವೇ ನಮ್ಮ ಗುರಿ ಸಾಧನೆಯಾಗಬೇಕು.

- ಎಂದಿದೆ ಸರ್ ಎಂದರು ಇಂಜಿನಿಯರ್.

ಮಹಾನ್ ಸಂದೇಶದಂತೆ ಧ್ವನಿಸಿದ ಮೂರಂಶಗಳನ್ನು ಆಲಿಸಿದ ಪುರಸಭಾ ಸದಸ್ಯರು ಮತ್ತು ಅಧ್ಯಕ್ಷರು ಮತ್ತೆ ಮತ್ತೆ ಅವುಗಳನ್ನೇ ಮೆಲುಕು ಹಾಕಿದರು. ಆದರೆ ಅವುಗಳ ಹಿನ್ನೆಲೆ ಏನೆಂಬುದು ತಿಳಿಯದ ಕಾರಣ ಸ್ವಲ್ಪ ಹೊತ್ತು ಮೂಕರಾಗಿ ನಿಂತುಬಿಟ್ಟರು. ಸಮಯ ವ್ಯರ್ಥವಾಗಬಾರದೆಂದು ಆಲೋಚಿಸಿದ ಅಧ್ಯಕ್ಷರು - "ಸದಸ್ಯ ಮಿತ್ರರೇ, ನಿಮ್ಮ ನೆನಪನ್ನು ಮುಚ್ಚಿರಬಹುದಾದ ಧೂಳನ್ನು ಝಾಡಿಸಿ, ಸತ್ಯ, ಅಹಿಂಸೆ ಮತ್ತು ಪ್ರೀತಿ ಈ ಅಂಶತ್ರಯಗಳನ್ನು ಪ್ರತಿಪಾದಿಸಿದವರು ಯಾರು ಎಂದು ಯಾರಾದರೂ ಹೇಳಬಲ್ಲಿರಾ? ಈ ವಿಷಯದಲ್ಲಿ ನನಗಿರುವ ಸಮಸ್ಯೆಯನ್ನು ಪ್ರಮಾಣಿಕವಾಗಿ ನಿಮಗೆ ತಿಳಿಸಲೇ ಬೇಕಾಗಿದೆ. ನನಗೆ ಈಗಷ್ಟೇ ಮೂವತ್ತು ವರ್ಷ, ನಿಮ್ಮಲ್ಲಿ ಅರವತ್ತು ವಸಂತಗಳನ್ನು ಕಂಡವರೂ ಇದ್ದೀರಿ. ಅಂತಹವರು- ಈ ಮಹಾತ್ಮ ಗಾಂಧಿ ಯಾರು? ಅವರ ಸಾಧನೆಗಳು ಏನು? ಎಂಬುದನ್ನು ತಿಳಿದಿರುತ್ತೀರಿ, ನನ್ನಂತಹವರಿಗೆ ತಿಳಿಸಲೂ ಸಮರ್ಥರಿರುತ್ತೀರಿ ಎಂಬುದು ನನ್ನ ನಂಬಿಕೆಯಾಗಿದೆ. ಇನ್ನು ಈ ವಿಷಯದಲ್ಲಿ ನನ್ನ ಅಭಿಪ್ರಾಯ ತಿಳಿಸುವುದಾದರೆ, ಅವರೊಬ್ಬ ಮಹಾತ್ಮರೇ ಇರಬೇಕು, ಹಾಗಲ್ಲದೇ ಹೋಗಿದ್ದಿದ್ದರೆ, ಆಳೆತ್ತರದ ಈ ಕಂಚಿನ ಪ್ರತಿಮೆಯನ್ನು ಮಾಡಿಸಿಡುತ್ತಿರಲಿಲ್ಲ! ಎಂದರು.

ಹಿರೀ ಸದಸ್ಯರು ಮುಂದೆ ಬಂದು ಗಂಭೀರವಾಗಿ " ಅಧ್ಯಕ್ಷ ಮಹಾಶಯರೇ, ನಿಮಗೆ ಬಿಡಿಸಿ ಹೇಳ್ತಾ ಇದ್ದೀನಿ ಕೇಳಿ: ನನ್ನ ಬಾಲ್ಯ ದಿನಗಳಿಂದಲೂ ಈ ಮೈದಾನಕ್ಕೆ ನಾನು ತಪ್ಪದೇ ಬರ್ತಾ ಇದ್ದೀನಿ. ಬಿಚ್ಚಿ ಹೇಳೋದಾದ್ರೆ ಇದೇ ಮೈದಾನದಲ್ಲಿ ಕ್ರಿಕೆಟ್

ಆಟಾನೂ ಆಡಿದ್ದೀವಿ. ಆದ್ರೆ ಯಾವುದೇ ಸಂದರ್ಭದಲ್ಲಿ ಈ ಪ್ರತಿಮೆಯನ್ನು ನೋಡುವ ಅಥವಾ ಬೇರೆಯವರು ಇದರ ಬಗ್ಗೆ ಮಾತಾಡಿದ್ದನ್ನ ಕೇಳೋ ಅವಕಾಶ ದೊರೀಲಿಲ್ಲ. ಇನ್ನು ಈ ಮಹಾತ್ಮ ಗಾಂಧಿ ಎಂಬುದನ್ನ ವಾಚ್ಯಾರ್ಥ ರೀತ್ಯ ತೆಗೆದುಕೊಂಡರೆ, "ಮಹಾತ್ಮ" ಎಂದರೆ "ಸಂತನ ಆತ್ಮ" ಎನ್ನಬಹುದು. ಸಮಾಜದ ಕಾರ್ಯಕರ್ತ ಅಥವಾ ಸಂತರಾಗಿ ಬಾಳಿರಬಹುದಾದ ಶ್ರೀ ಗಾಂಧಿಯವರ ಪ್ರತಿಮೆ ಇದಾಗಿದೆ. ಇನ್ನು ಅವರು ಬೋಧಿಸಿದ್ದರೆನ್ನಲಾದ ಸತ್ಯ, ಅಹಿಂಸೆ ಮತ್ತು ಪ್ರೀತಿಗಳನ್ನು ಗಮನಿಸಿದರೆ, ಅವರೊಬ್ಬ ಮುನಿ ಅಥವಾ ಸಂನ್ಯಾಸಿ ಇದ್ದಿರಬಹುದು ಎನ್ನಿಸುತ್ತದೆ. ಅವರ ಹಿನ್ನೆಲೆ ಏನೇ ಇರಲಿ, ಈ ಪ್ರತಿಮೆ ಮಾತ್ರ ತುಂಬಾ ಸೊಗಸಾಗಿದೆ. ಆದರೆ ಇದು ಭೂಮಿಯಲ್ಲಿ ಹೇಗೆ ಹೂತು ಹೋಯಿತು ಎಂಬುದು ಮಾತ್ರ ತಿಳಿಯುತ್ತಿಲ್ಲ. "ಮಹಾತ್ಮ ಗಾಂಧಿ" ಎಂಬ ಮಹನೀಯನ ಹೆಸರಿಗೂ, "ಗಾಂಧೀ ಮೈದಾನ" ಎಂಬ ಈ ಸ್ಥಳದ ಹೆಸರಿಗೂ ಏನೋ ಸಂಬಂಧವಿರುವಂತೆ ಕಂಡುಬರುತ್ತದೆ. ಶತಮಾನಗಳ ಹಿಂದೆ ಈ ಪ್ರತಿಮೆಯನ್ನು ಇಲ್ಲಿ ಪ್ರತಿಷ್ಠಾಪಿಸಿರಬೇಕು, ಹಾಗೆ ಮಾಡಿದ್ದರಿಂದಲೇ ಈ ಮೈದಾನಕ್ಕೆ ಈ ಹೆಸರೂ ಬಂದಿರಬೇಕು. ಅದು ಏನೇ ಇರಲಿ, ಅಂತೂ ಸಂತ ಸದೃಶರಾದ ಈ ವ್ಯಕ್ತಿಯ ಪ್ರತಿಮೆ ನಮಗೆ ದೊರಕಿದೆ ಎಂಬುದಕ್ಕಿಂತ ನಾವು ಇದನ್ನು ಕಂಡುಕೊಂಡಿದ್ದೇವೆ ಎಂಬುದು ಸಂತೋಷದ ಸಂಗತಿ....."ಎಂದು ಅಭಿಪ್ರಾಯಪಟ್ಟರು.

"ಹಾಗಾದರೆ ಈ ಪ್ರತಿಮೆಯನ್ನು ಇಲ್ಲಿಯೇ ಮರು ಪ್ರತಿಷ್ಠಾಪನೆ ಮಾಡಿ ಈ ಮೈದಾನದ ಹೆಸರು ಈಗಿರುವಂತೆಯೇ "ಮಹಾತ್ಮ ಗಾಂಧೀ ಮೈದಾನ"ವೆಂದು ಮುಂದುವರಿಸಲು ಮರು ಧೃಢೀಕರಣ ಮಾಡೋಣವೆ?" ಅಧ್ಯಕ್ಷರು ಮುಗ್ಧರಾಗಿ ಕೇಳಿದರು.

ಹಿರೀ ಸದಸ್ಯರು ತಕ್ಷಣವೇ –"ಅಧ್ಯಕ್ಷರೇ, ಈ ಮೈದಾನಕ್ಕೆ ನಮ್ಮ ತಂದೆಯ ಹೆಸರನ್ನಿರಿಸಬೇಕೆಂದು ನಾನು ಈಗಾಗಲೇ ಪ್ರಸ್ತಾವನೆ ಸಲ್ಲಿಸಿರುವುದು ನಿಮಗೂ ತಿಳಿದಿದೆ. ಈ ಮಹಾತ್ಮ ಗಾಂಧಿಯೂ ತಂದೆಯೇ. ಆದರೆ ಯಾರ ತಂದೆ ಎಂಬುದು ಪಾದಪೀಠದಿಂದ ತಿಳಿಯುತ್ತಿಲ್ಲ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಈ ಮಹಾತ್ಮ ಗಾಂಧಿ ಎನ್ನುವವರು ಈ ಸ್ಥಳಕ್ಕೆ ಹಾಗೆಯೇ, ಇಲ್ಲಿನ ಪ್ರತಿಯೊಬ್ಬರಿಗೂ ಅಪರಿಚಿತರು, ಅಂದಾಗ ನಮ್ಮ ಪಟ್ಟಣ ವ್ಯಾಪ್ತಿಗೆ ಸೇರಿದ ಈ ಮೈದಾನಕ್ಕೆ ಹೊರಗಿನ ಒಬ್ಬ ವ್ಯಕ್ತಿಯ ಹೆಸರಿಡುವುದಾದರೂ ಏಕೆ? ಸದರಿ ಮೈದಾನಕ್ಕೆ, ದರಿದ್ರರ ಮತ್ತು ದಲಿತರ ಅಸೀಮ ಬಂಧುವಾಗಿದ್ದ, ನಮ್ಮ ತಂದೆಯ ಹೆಸರಿಡುವುದಾಗಬೇಕು!" ಎಂದು ತಮ್ಮ ಅಭಿಪ್ರಾಯವನ್ನು ಸಭೆಗೆ ಮನವರಿಕೆ ಮಾಡಲು ಪ್ರಯತ್ನಿಸಿದರು.

"ಹಾಗಾದರೆ ಈ ಪ್ರತಿಮೆಯನ್ನು ಏನು ಮಾಡೋಣ? ಮತ್ತೆ ಹೂತುಬಿಟ್ಟು ವೃದ್ಧ ಸಂತನನ್ನು ಮರೆತುಬಿಡೋಣವೆ?" ಹಿಂಬೆಂಚಿನ ಸದಸ್ಯ ಸಿಟ್ಟಿನಿಂದ ಪ್ರಶ್ನಿಸಿದ.

"ನಾನು ಹಾಗಂತ ಹೇಳಿಲ್ಲ, ಹೇಳುವುದೂ ಇಲ್ಲ. ಈ ಪ್ರತಿಮೆ ಹೇಗೂ ಲೋಹದ್ದಾದ್ದರಿಂದ ಗುಜರಿಗೆ ಹಾಕಿದರೂ ಭಾರಿ ಮೊತ್ತದ ಹಣ ಬರುತ್ತದೆ, ಆ ಹಣದಿಂದ ದಿಕ್ಕಿಲ್ಲದ ಮಕ್ಕಳಿಗೆ ಒಂದು ಅನಾಥಾಲಯವನ್ನೋ, ವೃದ್ಧರಿಗೆ ಅಥವಾ

ರೋಗಿಗಳಿಗೆ ಚಿಕಿತ್ಸಾಲಯವನ್ನೋ ಕಟ್ಟಿಸಬಹುದೂಂತ......." ಹಿರೀ ಸದಸ್ಯರು ಚತುರರಾಗಿ ಮಾತನಾಡಿದರು.

"ನಿಮ್ಮ ಈ ಸಲಹೆಯಿಂದ ನನಗೆ ಬಹಳ ಸಂತೋಷವಾಯಿತು. ಯಾಕೆ ಅಂತಂದ್ರೆ ಈ ಪ್ರತಿಮೆಯನ್ನು ಕರಗಿಸಿ, ನಿಮ್ಮ ಪರಮ ಪೂಜ್ಯ ತಂದೆಯವರ ಪ್ರತಿಮೆಯನ್ನು ಎರಕಹೊಯ್ಯುವಂತೆ ನೀವು ಸಲಹೆ ನೀಡ್ತೀರಿ ಅಂತ ನಾನು ಭಾವಿಸಿದ್ದೆ" ಹಿಂಬಂಚಿನ ಸದಸ್ಯರು ಬಹಳ ತೀಕ್ಷ್ಣವಾಗಿ ಕುಟುಕಿದರು.

"ಅಧ್ಯಕ್ಷರೇ, ಇದು ಅನಪೇಕ್ಷಣೀಯ ಹಾಗೂ ಅಸೌಜನ್ಯದ ಟೀಕೆ. ಇದನ್ನು ನಾನು ಪ್ರತಿಭಟಿಸುತ್ತೇನೆ!" ಹಿರಿಯ ಸದಸ್ಯರು ಸಿಟ್ಟಿನಿಂದ ಅಬ್ಬರಿಸಿದರು. ಮಧ್ಯೆ ಪ್ರವೇಶಿಸಿದ ಅಧ್ಯಕ್ಷರು ಸುಮ್ಮನಿರಿಸುತ್ತ "ಕೇಳಿ, ಇದೇನೂ ಅಧಿಕೃತ ಸಭೆಯಲ್ಲ. ಸ್ನೇಹಿತರಾಗಿ, ಸಹೋದ್ಯೋಗಿಗಳಾಗಿ ಇಲ್ಲಿ ಸಮಾವೇಶಗೊಂಡಿದ್ದೇವೆ. ಹೊಸದಾದುದನ್ನು ಅರ್ಥಮಾಡಿಕೊಳ್ಳಬೇಕಾದರೆ, ವಾದ, ವಿವಾದ, ಸಂಘರ್ಷ ಅನಿವಾರ್ಯ. ಘರ್ಷಣೆಯಿಲ್ಲದೆ ಶಾಖ ಉತ್ಪತ್ತಿಯಾಗದು, ಶಾಖ ಉತ್ಪತ್ತಿಯಾಗದೇ ಬೆಳಕು ಉಂಟಾಗದು. ಇದು ಭೌತವಿಜ್ಞಾನ ಸಾರುತ್ತಿರುವ ನಿಯಮ" ಎಂದು ಸಮಾಧಾನ ಹೇಳಲೆತ್ನಿಸಿದರು.

ಸಹನೆಯನ್ನು ಮತ್ತಷ್ಟು ಕಳೆದುಕೊಂಡ ಹಿರೀ ಸದಸ್ಯರು" ಅಧ್ಯಕ್ಷ ಮಹಾಶಯರೇ, ಭೌತ ವಿಜ್ಞಾನವನ್ನು ತಿಳಿಯೋದಕ್ಕೆ ನಾನಿಲ್ಲಿಗೆ ಬಂದಿಲ್ಲ, ಈ ಮೈದಾನಕ್ಕೆ ನನ್ನ ಪೂಜ್ಯ ತಂದೆಯವರ ಹೆಸರನ್ನಿಡಬೇಕೆಂದು ನಾನು ಸಲ್ಲಿಸಿದ್ದ ಪ್ರಸ್ತಾವನೆ ಏನಾಯ್ತು? ಅದೀಗ ಯಾವ ಹಂತದಲ್ಲಿದೆ ಅನ್ನೋದನ್ನ ಖಚಿತವಾಗಿ ತಿಳಿಯಬೇಕೂಂತ ನಾನಿಲ್ಲಿಗೆ ಬಂದಿದ್ದೇನೆ!" ಎಂದು ಗುಡುಗಿದರು.

ಅಧ್ಯಕ್ಷರು ಮೌನವಾಗಿದ್ದರು. ಆದರೆ ಹಿಂಬೆಂಚಿನ ಸದಸ್ಯರು ಮಾತ್ರ ಸೆಟೆದು ನಿಂತು " ರೀ, ಈ ಮೈದಾನಕ್ಕೆ ಮರು ನಾಮಕರಣ ಮಾಡಬೇಕು, ನಿಮ್ಮ ತಂದೆಯವರ ಹೆಸರನ್ನೇ ಇಡಬೇಕು ಅನ್ನೋ ವಿಚಾರದಲ್ಲಿ ಅಧ್ಯಕ್ಷರನ್ನು ಯಾಕೆ ಪೀಡಿಸ್ತಾ ಇದ್ದೀರಿ? ನಿಮ್ಮಪ್ಪನ ಸಾಧನೆ ಏನು? ಕೊಡುಗೆಗಳೇನು?ಎಂಬುದನ್ನು ಈ ಸಭೆಯ ಗಮನಕ್ಕೆ ತನ್ನಿ!" ಎಂದು ಝುಂಕಿಸಿದರು.

"ಅವರೊಬ್ಬ ಹೆಸರಾಂತ ವ್ಯಕ್ತಿ. ಸಮಾಜ ಕಾರ್ಯಕರ್ತರಾಗಿ......" ಹಿರೀ ಸದಸ್ಯ ಹೇಳಲಾರಂಭಿಸಿದ್ದರು. ತಕ್ಷಣವೇ ಹಿಂಬೆಂಚಿನ ಸದಸ್ಯರು – "ಹಂಗೆ ನೋಡೋದಾದರೆ ನಮ್ಮ ತಂದೆಯವರೂ ದೊಡ್ಡ ಸಮಾಜ ಕಾರ್ಯಕರ್ತರಾಗಿದ್ದರು ಅಂತ್ಲೇ ಹೇಳಬೇಕಾಗುತ್ತದೆ. ಆದರೆ ಅವರ ಹೆಸರನ್ನು ಯಾವುದಾದರೂ ಬೀದಿಗೋ, ಸ್ಥಳಕ್ಕೋ ಇಡಿ ಅಂತ ಒತ್ತಾಯ ಮಾಡೋ ಮೂರ್ಖ ನಾನಲ್ಲ. ಸಮಾಜ ವಿಜ್ಞಾನದ ರೀತ್ಯ, ಪ್ರತಿ ಮನುಷ್ಯನೂ ಒಂದು ಸಮಾಜ ಜೀವಿಯೇ, ಆದ್ದರಿಂದ ಪ್ರತಿ ಮನುಷ್ಯನೂ ಒಬ್ಬ ಸಮಾಜ ಕಾರ್ಯಕರ್ತನೆಂದೇ ಹೇಳಬೇಕಾಗುತ್ತದೆ" ಎಂದು ತಣ್ಣೀರನ್ನೆರಚಿದರು.

"ಅಧ್ಯಕ್ಷರೇ, ನಮ್ಮ ತಂದೆಯವರಿಗೂ, ನನಗೂ ಇದು ಅವಮಾನವಲ್ಲದೇ ಮತ್ತೇನೂ ಅಲ್ಲ! ಈ ಮನುಷ್ಯ ಹೇಗೆ ನೋಡಿದರೂ ಚಿಲ್ಲರೆ ಮನುಷ್ಯ, ಇಂಥೋನು ಅದು ಹೇಗೆ ನಮ್ಮನ್ನೆಲ್ಲ ಸಮಾಜ ಜೀವಿಗಳು, ಪ್ರಾಣಿಗಳು ಅಂತ ಹೆಸರಿಸುತ್ತಾನೋ

ಗೊತ್ತಿಲ್ಲ!" ಎಂದು ಹಿರೀ ಸದಸ್ಯ ಚುಚ್ಚಿ ಮಾತನಾಡಿದರು.

"ಪ್ರಾಣಿ ಅಂದ್ರೆ ಬಹಳ ಬೆಲೆ ಕೊಟ್ಟಂಗೆ ಆಗ್ತದೆ- ಮೃಗ, ಸ್ವಾರ್ಥಿ, ಕ್ರೂರಿ ಅಂದ್ರೆ ಒಸಿ ಸರಿ ಅಂತ ಕಾಣ್ತದೆ!" ಹಿಂಬೆಂಚಿನ ಸದಸ್ಯರು ಮಾತಿನ ಪೆಟ್ಟು ಕೊಟ್ಟರು.

"ಹೌದ್ಹೌದು! ನಾನು ಮಾತ್ರ ಮೃಗ, ಕ್ರೂರಿ, ಸ್ವಾರ್ಥಿ! ನೀವೆಲ್ಲರೂ ದಯಾಮಯರು, ದೇವದೂತರು! ನೀವನ್ನೋದು ನಿಮಗೇ ಇರಲಿ- ಇಷ್ಟಂತೂ ನಿಜ, ನಿನ್ನೆ ಬೆಳಿಗ್ಗೆ ಮುಖ್ಯಮಂತ್ರಿ ಅವರಿಂದ ದೂರವಾಣಿ ಕರೆ ಬಂದಾಗ, ಈ ಮೈದಾನದ ಹೆಸರನ್ನು ನಮ್ಮ ತಂದೆ ಹೆಸರಿಗೆ ಬದಲಾಯಿಸಬೇಕು ಅಂತ ಮನವಿ ಮಾಡಿಕೊಂಡೆ. ಅವರು ಮರುಮಾತಿಲ್ಲದೆ ಒಪ್ಪಿಕೊಂಡವ್ರೆ, ಒಂದೆರೆಡು ದಿನಗಳಲ್ಲಿ ಅವರಿಂದ ನಿಮಗೆ ಅಂದರೆ ಪುರಸಭಾಧ್ಯಕ್ಷರಿಗೆ ಕಾಗದ ಗುದ್ದಿಕೊಂಡು ಬರುತ್ತದೆ. ನೀವೆಲ್ಲ ಸೇರಿ ನನಗೆ ಮತ್ತು ಸತ್ತು ಸ್ವರ್ಗದಲ್ಲರೋ ನಮ್ಮಪ್ಪನಿಗೆ ಇಷ್ಟೊಂದು ಅವಮಾನ ಮಾಡಿದ್ದರಿಂದ ನಾನು ಪ್ರತಿಭಟಿಸುತ್ತೇನೆ ಅಷ್ಟೇ ಅಲ್ಲ ಇನ್ನು ಒಂದೇ ಒಂದು ಕ್ಷಣ ಈ ಸಭೆಯಲ್ಲಿ ನಿಲ್ಲುವುದಿಲ್ಲ!" ಎಂದು ಕೂಗಾಡುತ್ತ ರಭಸದಿಂದ ಹೊರಟು ಹೋದರು. ಅವರ ಆ ನಡೆ, ನುಡಿ, ನಟನೆ ಮತ್ತು ವರ್ತನೆಗಳಿಂದ ಪ್ರತಿಯೊಬ್ಬರೂ ಬೆರಗಾದರು, ದಿಗ್ಭ್ರಾಂತರಾದರು, ಅವರೊಬ್ಬ "ಲುಚ್ಚ" ಎಂದೂ ಮನವರಿಕೆ ಮಾಡಿಕೊಂಡರು.

ಇಷ್ಟೆಲ್ಲಾ ನಡೆಯುತ್ತಿರುವಾಗ, ಇಂಜಿನಿಯರ್ ಮತ್ತು ಅವರ ಸಿಬ್ಬಂದಿ ಗರ ಬಡಿದವರಂತೆ ನಿಂತುಬಿಟ್ಟರು. ಅಧ್ಯಕ್ಷರಂತೂ ಚಿಂತ್ರಾಂತರಾಗಿ ತಲೆತಗ್ಗಿಸಿ ಕುಳಿತುಬಿಟ್ಟರು. ಉದ್ವೇಗದಿಂದ ಕೂಡಿದ ಆ ಕ್ಷಣಗಳು ನಿಧಾನವಾಗಿ ಹತೋಟಿಗೆ ಬಂದವು.

ಸೂರ್ಯದೇವ ನೆತ್ತಿಯ ಮೇಲಿದ್ದ. ಆದರೂ ತಂಗಾಳಿ ಆಹ್ಲಾದಕರವಾಗಿ ಬೀಸುತ್ತಿತ್ತು. ಹತ್ತಿರದಲ್ಲಿದ್ದ ಮರಗಳಲ್ಲಿ ಪಕ್ಷಿಗಳು ಹಾಯಾಗಿ ಚಿಲಿಪಿಲಿಗುಟ್ಟುತ್ತಿದ್ದವು. ಹೀಗೆ ವಾತಾವರಣ ಚೇತೋಹಾರಿಯಾಗಿದ್ದ ಕಾರಣ, ಅಧ್ಯಕ್ಷರಿಗೆ ಹುಮ್ಮಸ್ಸು ಬಂದಂತಾಗಿ ಸಕಾರಾತ್ಮಕವಾದ ಕೆಲಸವನ್ನೇನಾದರೂ ಮಾಡಬೇಕೆನ್ನಿಸಿತು. ಅಷ್ಟು ದೂರದಲ್ಲಿ ನಿಂತಿದ್ದ ಇಂಜಿನಿಯರ್‌ರನ್ನು ಹತ್ತಿರಕ್ಕೆ ಕರೆದರು. ಅವರು ಬಂದು ಕೈಕಟ್ಟಿ ನಿಂತರು. ಅಧ್ಯಕ್ಷರು ಅವರಿಗೆ ಏನು ಆದೇಶಿಸುತ್ತಾರೆಂದು ಎಲ್ಲ ಸದಸ್ಯರೂ ನೋಡತೊಡಗಿದರು.

"ನೋಡಿ, ಈ ಪ್ರತಿಮೆಯನ್ನು ಪುರಸಭಾ ಕಾರ್ಯಾಲಯಕ್ಕೆ ಸಾಗಿಸಬೇಕು, ಸಾರ್ವಜನಿಕರ ದರ್ಶನಕ್ಕೆ ಅನುಕೂಲವಾಗುವಂತೆ ಇದನ್ನು ಇರಿಸಬೇಕು, ದರ್ಶನಕ್ಕೆ ಬಂದವರು ಯಾರಾದರೂ ಈ ಸಂತನನ್ನು ಗುರುತಿಸುತ್ತಾರೆಯೆ, ಅವರ ಮಕ್ಕಳನ್ನು ಮೊದಲ್ಗೊಂಡು ಇವರ ಪರಂಪರೆಯನ್ನು ತಿಳಿಸುವರೆ ಎಂಬುದನ್ನು ಗಮನಿಸಬೇಕು, ಮುಖ್ಯವಾಗಿ ಇವರು ಯಾರ "ಪಿತ" ಎಂಬುದನ್ನು ತಿಳಿಯುವುದಾಗಬೇಕು" ಎಂದು ಸೂಚಿಸಿದರು.

"ಆಗ್ಲಿ ಸರ್, ಇನ್ನು ಈ ಗುಂಡಿಯನ್ನು ಏನು ಮಾಡೋಣ ಸರ್?" ಇಂಜಿನಿಯರ್ ವಿನಯಪೂರ್ವಕವಾಗಿ ಕೇಳಿದರು.

"ಅದನ್ನು ಮುಚ್ಚಿಸಿಬಿಡಿ" ಅಧ್ಯಕ್ಷರು ತಕ್ಷಣ ಹೇಳಿದರು.

"ಆಗಲಿ ಸರ್, ಆಮೇಲೆ ಕಟ್ಟಡದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸೋ ವಿಚಾರದಲ್ಲಿ ತಾವು....." ಇಂಜಿನಿಯರ್ ಅಧ್ಯಕ್ಷರ ಅಭಿಪ್ರಾಯ ಕೋರಿದರು.

"ನಿರ್ಮಾಣ ಕಾರ್ಯ ಪ್ರಾರಂಭಿಸುವುದು ಬೇಡ. ಅದಕ್ಕೆ ಮೊದಲು ಬೇಲಿ ಹಾಕುವುದಾಗಬೇಕು, ಆಮೇಲೆ ಇಡೀ ಮೈದಾನವನ್ನು ಸಮಗಟ್ಟುವುದಾಗಬೇಕು. ಇವೆರಡೂ ಆದಮೇಲೆ ಮುಂದಿನ ಕೆಲಸದ ಬಗ್ಗೆ ನೋಡೋಣ. ಮೈದಾನಕ್ಕೆ ಮರುನಾಮಕರಣ ಮಾಡಬೇಕು ಅನ್ನೋ ವಿಷಯ ತೀರ್ಮಾನವಾದ ಮೇಲೆ ಕಟ್ಟಡ ಕಟ್ಟೋದನ್ನು ಕೈಗೆತ್ತಿಕೊಂಡರಾಯಿತು!" ಅಧ್ಯಕ್ಷರು ಅಭಿಪ್ರಾಯ ಸೂಚಿಸಿದರು.

ಯಾವಾಗಲೂ ತನ್ನದೆ ಕೊನೆಯ ಮತಾಗಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದ ಹಿಂಬೆಂಚಿನ ಸದಸ್ಯರು ಮಧ್ಯೆ ಬಾಯಿ ಹಾಕಿ, "ಸ್ವಾಮಿ, ಅಧ್ಯಕ್ಷರೆ, ಆ ಮೂರ್ಖನ ತಂದೆಯ ಹೆಸರಿನಲ್ಲಿ ಈ ಮೈದಾನಕ್ಕೆ ಮರು ನಾಮಕರಣ ಮಾಡೋ ಹುಚ್ಚು ಸಾಹಸಕ್ಕೆ ಕೈ ಹಾಕೋದು ಖಂಡಿತ ಬೇಡ.ಈ ಸಂಬಮುದದಲ್ಲಿ ಬರುವ ಯಾವುದೇ ಒತ್ತಡಕ್ಕೆ, ಕೊನೆಗೆ ಅದು ಪ್ರಧಾನಿಯಿಂದ ಬಂದರೂ ಸರಿಯೆ, ನಾವು ಮಣಿಯುವುದು ಬೇಡ! ಒಂದು ವೇಳೆ ಹೆಸರನ್ನು ಬದಲಾಯಿಸುವುದೇ ಅದರೆ -ನಾನು ಅಮರಣಾಂತ ಉಪವಾಸ ಮಾಡ್ತೀನಿ- ಇದಂತೂ ನಿಜ!" ಎಂದು ಘೋಷಿಸಿದರು.

ಎಚ್ಚರಿಕೆ ಹಾಗೂ ಬೆದರಿಕೆಯ ಮತುಗಳನ್ನು ಕೇಳ್ತ ಕೇಳ್ತಾ ಅಧ್ಯಕ್ಷರ ಮುಖ ಕೆಂಪಾಯಿತು. ಏನನ್ನೂ ಮಾತಾಡದೆ ಕಾರಿನತ್ತ ನಡೆದರು, ಎಡ-ಬಲ ಇದ್ದ ಯಾರನ್ನೂ ದೃಷ್ಟಿಸದೆ ಮೌನವಾಗಿ ಕಾರಿನಲ್ಲಿ ಕುಳಿತು ಮನೆಗೆ ಹೋಗುವಂತೆ ಚಾಲಕನಿಗೆ ಸೂಚಿಸಿದರು. ಧೂಳಿನ ಮೋಡಗಳನ್ನು ಎಬ್ಬಿಸುತ್ತಾ ಕಾರು ವೇಗವಾಗಿ ಸಾಗಿತು.

(ಮುಂದುವರಿಯುವುದು...)

* * *

ಭಾರತದ ಭೌಗೋಳಿಕ ಸನ್ನಿವೇಶದಲ್ಲಿ ಹಿಮಾಲಯಕ್ಕಿರುವಂತೆ ಕರ್ನಾಟಕದ ಪರಿಸರ ಜಗತ್ತಿನಲ್ಲಿ ಸಹ್ಯಾದ್ರಿಗೆ ಅತ್ಯುನ್ನತ ಸ್ಥಾನವಿದೆ. ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಹಿಮಾಲಯ ನಲಗುತ್ತಿರುವಂತೆಯೇ ಕರ್ನಾಟಕದ ಸಹ್ಯಾದ್ರಿಯೂ ನಲುಗುತ್ತಿದೆ. ಸಹ್ಯಾದ್ರಿಗೆ ಇಂದು ಬಂದಿರುವ ಆಪತ್ತು ಅತ್ಯಂತ ಭಿಕರವಾಗಿದೆ.

-ಡಾ॥ ಕುಸುಮಾ ಸೊರಬ

ಭಾರತ-ಚೀನಾ ಮೈತ್ರಿ ಅಗತ್ಯ

- ಎಸ್.ಎಂ.ಕೃಷ್ಣ, ವಿದೇಶಾಂಗ ಮಂತ್ರಿ

ಭಾರತ ಚೀನಾನಡುವೆ ಉತ್ತಮ ಹಾಗೂ ಸದೃಢ ಬಾಂಧವ್ಯದಿಂದ ಇಡೀ ಜಗತ್ತಿನ ಮೇಲೆ ಪರಿಣಾಮವುಂಟಾಗಲಿದೆ. ಉಭಯ ದೇಶಗಳು ಪರಸ್ಪರ ಸಹಕಾರದಿಂದ ಇರುವುದಷ್ಟೇ ಮುಖ್ಯ ಅಲ್ಲ. ಹಾಗೆ ತೋರಿಸಿಕೊಳ್ಳುವುದೂ ಅಷ್ಟೇ ಮುಖ್ಯ.

ಎರಡೂ ದೇಶಗಳ ನಡುವೆ ಇರುವ ಅನೇಕ ವೈವಿಧ್ಯತೆಗಳ ನಡುವೆಯೂ ವೈರುಧ್ಯಗಳೂ ಇವೆ. ಆದರೆ ವೈರುಧ್ಯಗಳೇ ಜಾಸ್ತಿ ಬಿಂಬಿತವಾಗುತ್ತವೆ. ಹೀಗಾಗಿ ಎರಡೂ ದೇಶಗಳ ಸಂಬಂಧವನ್ನು ಕೆಲವೊಮ್ಮೆ ತಪ್ಪಾಗಿ ಭಾವಿಸಲಾಗುತ್ತದೆ. ಆದ್ದರಿಂದ ಭಾರತ-ಚೀನಾ ಮಧ್ಯೆ ಉತ್ತಮ ಸಂಬಂಧವನ್ನು ತೋರಿಸುವ ಅಗತ್ಯವಿದೆ.

ಭಾರತ ಚೀನಾ ಕೇವಲ ನೆರೆಹೊರೆಯ ದೇಶಗಳಷ್ಟೇ ಅಲ್ಲ. ವಿಶ್ವದಲ್ಲಿ ಹೊರಹೊಮ್ಮಿರುವ ಎರಡು ಪ್ರಬಲ ಆರ್ಥಿಕ ಶಕ್ತಿಗಳು. ಈ ಎರಡೂ ಶಕ್ತಿಗಳು ಒಂದಾದರೆ ಜಾಗತಿಕ ವ್ಯವಸ್ಥೆಯ ಮೇಲೆ ಸಕಾರಾತ್ಮಕ ಬದಲಾವಣೆಯನ್ನು ತರಬಹುದು.

ಭಾರತದಲ್ಲಿ ಮೂಲ ಸೌಕರ್ಯದ ಅಭಿವೃದ್ಧಿಗೆ ಸಂಬಂದಿಸಿದಂತೆ ವಿಶೇಷವಾಗಿ ಇಂಧನ, ರಸ್ತೆ, ರೈಲು, ಸೇತುವೆ, ಮೇಲ್ಸೇತುವೆ ಹಾಗೂ ದೂರ ಸಂಪರ್ಕ ಕ್ಷೇತ್ರಗಳಲ್ಲಿ ಭಾರೀ ಬೇಡಿಕೆಯಿದೆ. ಈ ಕ್ಷೇತ್ರಗಳಲ್ಲಿ ಚೀನಾ ಈಗಾಗಲೇ ಗಣನೀಯ ಪ್ರಗತಿ ಸಾಧಿಸಿದೆ. ಸ್ಥಳೀಯ ಬೇಡಿಕೆಗಳನ್ನು ಪೂರ್ಣಗೊಳಿಸಿಕೊಂಡಿದೆ. ಈ ನಿಟ್ಟಿನಲ್ಲಿ ಅದು ಭಾರತದ ಜೊತೆ ಕೈಜೋಡಿಸಲು ವಿಪುಲ ಅವಕಾಶಗಳಿವೆ. ಭಾರತ ಮತ್ತು ಚೀನಾದ ನಡುವೆ ನಿರಂತರ ಮಾತುಕತೆ ನಡೆಯುತ್ತಿರಬೇಕಾದ ಅಗತ್ಯವಿದೆ. ಎರಡೂ ದೇಶಗಳ ನಡುವೆ ವಿನಿಮಯ ಮಾಡಿಕೊಳ್ಳುವ ಅನೇಕ ಉತ್ತಮ ಸಂಗತಿಗಳಿವೆ.

ಎರಡೂ ದೇಶಗಳ ಮಧ್ಯೆ ಕೇವಲ ರಾಜತಾಂತ್ರಿಕ ಸಂಬಂಧವೊಂದೇ ಅಲ್ಲದೆ ಸಾಂಸ್ಕೃತಿಕ ಸಂಬಂಧವನ್ನೂ ಬೆಳೆಸಿಕೊಳ್ಳಬಹುದಾಗಿದೆ. ಅದರ ಪ್ರಯುಕ್ತ ಚೀನಾದಲ್ಲಿ "ಭಾರತ ಉತ್ಸವ"ವನ್ನು ಏರ್ಪಡಿಸಲಾಗಿದೆ. ಭಾರತದ ಸಾಂಸ್ಕೃತಿಕ ತಂಡಗಳು ಚೀನಾದ ೩೩ ನಗರಗಳಲ್ಲಿ ಕಲಾ ಪ್ರದರ್ಶನ ನೀಡಲಿವೆ. ಇದೇ ವರ್ಷ ಚೀನಾ ಭಾರತದಲ್ಲಿ ತನ್ನ ಸಾಂಸ್ಕೃತಿಕ ಉತ್ಸವವನ್ನೂ ಏರ್ಪಡಿಸಲಿದೆ.

ಲೂಯಾಂಗ್‌ನ ವೈಟ್ ಹೌಸ್‌ನ ಸಂಕೀರ್ಣದ ಪ್ರದೇಶದಲ್ಲಿ ಭಾರತದ ದೇವಾಲಯವೊಂದು ನಿರ್ಮಾಣದ ಕೊನೆಯ ಹಂತದಲ್ಲಿದೆ. ಭಾರತದ ಧಾರ್ಮಿಕ ನಂಬಿಕೆಗೆ ಚೀನಾ ಸಹಕರಿಸುವುದು.

ಭಾರತದಲ್ಲಿ ಕಾಲಕಾಲಕ್ಕೆ ಸಂಭವಿಸುತ್ತಿರುವ ಭಯೋತ್ಪಾದಕ ಕೃತ್ಯಗಳು ಕೇವಲ ಭಾರತವೊಂದನ್ನೇ ಬಾಧಿಸುತ್ತಿರುವ ಸಮಸ್ಯೆಯಲ್ಲ. ಅದೊಂದು ಜಾಗತಿಕ ಪಿಡುಗಾಗಿದೆ. ಇದನ್ನು ಮಟ್ಟಹಾಕಲು ವಿಶ್ವಸಂಸ್ಥೆಯು ಸಮಗ್ರ ಶಾಸನವೊಂದನ್ನು ರೂಪಿಸಬೇಕಾದ ಅಗತ್ಯವಿದೆ. ಇದಕ್ಕೆ ಚೀನಾ ಸೇರಿದಂತೆ ಎಲ್ಲ ದೇಶಗಳೂ ಸಹಕರಿಸಬೇಕಾಗಿದೆ.

(ಚೀನಾ ಇನ್‌ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಸ್ಟಡೀಸ್‌ನಲ್ಲಿ "ಇಪ್ಪತ್ತೊಂದನೆ ಶತಮಾನದ ವಿಶ್ವದಲ್ಲಿ ಭಾರತ-ಚೀನಾ" ಎಂಬ ವಿಷಯದ ಕುರಿತು ನೀಡಿದ ಉಪನ್ಯಾಸದ ಸಾರಾಂಶ)

ಕೃಷಿ ಉದ್ಯಮಕ್ಕೆ ಸಂಸ್ಥಾರೂಪ ಆಪತ್ಕಾರಿ

– ಕೆ.ಪಿ.ಪ್ರಭಾಕರನ್ ನಾಯರ್

ಸಂಸತ್ತಿನಲ್ಲಿ ಬೆಲೆ ಏರಿಕೆಯ ಕೋಲಾಹಲ ಮತ್ತು ಹೋಳಿ ಹಬ್ಬದ ಸಂಭ್ರಮದ ನಡುವೆ ಕೇಂದ್ರ ಸರ್ಕಾರ ಎರಡು ಕೆಲಸಗಳನ್ನು ಸದ್ದಿಲ್ಲದೆ ಮಾಡಿತು. ಅವುಗಳ ಭಯಂಕರ ಪರಿಣಾಮದ ಬಗ್ಗೆ ಇನ್ನೂ ಬಹಳ ಜನರಿಗೆ ಗೊತ್ತಾಗಿಲ್ಲ.

ಭಾರತ ಮತ್ತು ಅಮೇರಿಕಾದ ನಡುವೆ ಕೃಷಿ ಸಹಕಾರ ಮತ್ತು ಆಹಾರ ರಕ್ಷಣೆ ಎಂಬ ತಿಳುವಳಿಕೆಯ ಒಪ್ಪಂದವನ್ನು ತನ್ನ ಸಂಸತ್ತಿಗೆ ತಿಳಿಸದೆ, ಕೇಂದ್ರ ಮಂತ್ರಿ ಮಂಡಲ ಅಂಗೀಕಾರ ಮಾಡಿತು. ಇದರಿಂದ ಅಮೇರಿಕಾದ ಮೊನಸಾಂಟೋ ಮತ್ತು ಕಾರ್ಗಿಲ್ ಮುಂತಾದ ಬೃಹತ್ ಕಂಪನಿಗಳಿಗೆ ಮುಕ್ತ ಪ್ರವೇಶ ದೊರೆತು ಭಾರತದ ಕೃಷಿ ಉತ್ಪನ್ನ ಮತ್ತು ಮಾರಾಟದ ಬಗ್ಗೆ ವ್ಯಾಪಕ ಹಿಡಿತಕ್ಕೆ ಅವಕಾಶವಾಗುತ್ತದೆ. ಇದರಿಂದ ಕೃಷಿಯಲ್ಲಿ ಭಾರತದ ಸಾರ್ವಭೌಮತ್ವ ತಪ್ಪಿ ಹೋಗುತ್ತದೆ.

ಎರಡನೇ ಅಪಾಯಕಾರಿ ಕೆಲಸ ಎಂದರೆ, ಸದ್ಯದಲ್ಲೇ ಬಯೋ ಟೆಕ್ನಾಲಜಿ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಾ ಎಂಬ ಮಸೂದೆ ಸಂಸತ್ತಿನ ಮುಂದೆ ಬರಲಿದೆ. ಬಿ.ಟಿ.ಬದನೆಯ ಬಗ್ಗೆ ಹತ್ತು ರಾಜ್ಯಗಳಿಂದ ಬಂದ ತೀವ್ರ ವಿರೋಧದ ಹಿನ್ನೆಲೆಯಲ್ಲಿ ಸರಕಾರ ಈ ಮಸೂದೆಗೆ ಅತಿ ಶೀಘ್ರದಲ್ಲಿ ಅಂಗೀಕಾರ ಪಡೆಯಲು ತುದಿಗಾಲಿನಲ್ಲಿ ನಿಂತಿದೆ. ಒಂದುವೇಳೆ ಈ ಮಸೂದೆ ಅಂಗೀಕೃತವಾದರೆ, ಆಹಾರ ಉತ್ಪಾದನೆಯ ಬಗ್ಗೆ ಭಾರತಕ್ಕೆ ಇರುವ ಆಯ್ಕೆ ಮತ್ತು ಸ್ವಾತಂತ್ರ್ಯ ಕಳೆದು ಹೋಗುತ್ತದೆ. ಎಲ್ಲಾ ತರಹದ ಬದಲಿಸಿದ ಬೆಳೆಗಳು ಮತ್ತು ಜೀವಿಗಳು, ಡಿ.ಎನ್.ಎ. ಲಸಿಕೆಗಳು, ಸಿಮ್ ಸೆಲ್‌ಗಳ ಉತ್ಪನ್ನಗಳು, ಜೀನ್ ಬದಲಿಸಿದ ಬದನೆ ಮುಂತಾದ ಉತ್ಪನ್ನಗಳಿಗೆ ಭಾರತದಲ್ಲಿ ತಯಾರಿಸಲು ಸ್ವಚ್ಛಂದ ಅವಕಾಶವಾಗುತ್ತದೆ. ಇವುಗಳ ಸುರಕ್ಷತೆ ಬಗ್ಗೆ ಯಾರಾದರೂ ವೈಜ್ಞಾನಿಕ ಆಧಾರವಿಲ್ಲದೇ ಪ್ರಶ್ನೆಮಾಡಿದರೆ, ಅವರಿಗೆ ಜೈಲು ಶಿಕ್ಷೆಯಾಗಬಹುದು! ಹಾಗೆ ತಳಿ ಬದಲಿಸಿದ ಬೆಳೆಗಳ ಸಂಶೋಧನೆ ಒಪ್ಪಿಗೆ ವಿಧಾನಗಳು ಮಾಹಿತಿ ಹಕ್ಕು ಕಾಯಿದೆಗೆ ಒಳಪಡುವುದಿಲ್ಲ. ಈ ಖಾತೆಗೆ ಸಂಬಂಧಿಸಿದ ಅವರದೇ ಆದ ಆಪರೇಟ್ ಟ್ರಿಬ್ಯೂನಲ್ ಇದೆ. ಬೇರೆ ನ್ಯಾಯಾಲಯಗಳಲ್ಲಿ ಅಪೀಲು ಮಾಡಲು ಅವಕಾಶವಿಲ್ಲ.

ಕಾರ್ಟ್‌ಚೀನಾ ಅಂತಾರಾಷ್ಟ್ರೀಯ ಒಪ್ಪಂದದ ಪ್ರಕಾರ ಮಸೂದೆ ತರುವ ಮೊದಲು ವ್ಯಾಪಕವಾಗಿ ಜನ ಸಮೂಹದಲ್ಲಿ ವಿಚಾರ ವಿನಿಮಯ ಮಾಡಬೇಕೆಂದು ಇದೆ. ಇಂತಹ ವ್ಯಾಪಕ ವಿನಿಮಯ ಆದ ಹಾಗೆ ಕಾಣುವುದಿಲ್ಲ. ಬಿ.ಟಿ. ಹತ್ತಿಯ ಹೆಚ್ಚಿನ ಇಳುವರಿ ಬಗ್ಗೆ ಅಬ್ಬರದ ಪ್ರಚಾರವಿದ್ದರೂ ವಿದರ್ಭ ಪ್ರದೇಶದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಹತ್ತಿ ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮುಂದಾಗುವ ಬೃಹತ್ ದುಷ್ಪರಿಣಾಮಗಳನ್ನು ಊಹಿಸಲೂ ಸಾಧ್ಯವಿಲ್ಲ. ಒಟ್ಟಿನಲ್ಲಿ ಬಡ ರೈತನಿಗೆ ದೊಡ್ಡ ಆಘಾತ ಕಾದಿದೆ. ಅಮೇರಿಕಾದ ಬೃಹತ್ ಕಂಪನಿಗಳು ಮತ್ತು ಭೂ ಮಾಫಿಯಾಗಳು ರಣ ಹದ್ದಿನಂತೆ ಹಳ್ಳಿಗಳ ಮೇಲೆ ಎರಗಿ ಇಡೀ ಕೃಷಿ ಉದ್ಯಮಗಳನ್ನು ತಮ್ಮ ಹತೋಟಿಯಲ್ಲಿ ತೆಗೆದುಕೊಂಡು ರೈತರನ್ನು ಹೊರತಳ್ಳುತ್ತಾರೆ. ವಿಧಿಯಿಲ್ಲದೆ ಅವರು ಆಮಿಷಕ್ಕೆ ಬಲಿಯಾಗಿ ದೊಡ್ಡ ಪ್ರಮಾಣದಲ್ಲಿ ಹಳ್ಳಿಗಳಿಂದ ಪಟ್ಟಣಗಳಿಗೆ ಜೀವನೋಪಾಯಕ್ಕೆ ವಲಸೆ ಹೋಗುತ್ತಾರೆ. ಇದರಿಂದ ಪಟ್ಟಣಗಳಲ್ಲಿರುವ ಅವ್ಯವಸ್ಥೆ ಮತ್ತಷ್ಟು ಹದಗೆಡುತ್ತದೆ. ಇವುಗಳ ಬಗ್ಗೆ ದೇಶದ ನೇತಾರರು ಮತ್ತು ಉಚ್ಚ ಅಧಿಕಾರಿಗಳು ಚಿಂತಿತರಾದಂತೆ ಕಾಣುವುದಿಲ್ಲ. ಇಂತಹ ದುಃಸ್ಥಿತಿಯಿಂದ ಹೊರಬರಲು ಹಳ್ಳಿಗಳಲ್ಲಿ ಭಾರತ ಜೀವಂತವಾಗಿರುತ್ತದೆ ಎಂಬ ವಿಚಾರ ಬೇಗನೆ ರಾಜಕಾರಣಿಗಳು ಅನುಷ್ಠಾನಗೊಳಿಸುವುದೇ ಇರುವ ಒಂದೇ ದಾರಿ.

(ಖ್ಯಾತ ಕೃಷಿ ವಿಜ್ಞಾನಿ ಕೆ.ಪಿ. ಪ್ರಭಾಕರನ್ ನಾಯರರ ಲೇಖನದ ಸಂಗ್ರಹಾನುವಾದ)

ಕನ್ನಡಕ್ಕೆ :– ಕೆ.ಆರ್.ಮೋಹನ್ ಮೈಸೂರು

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಸಿದ್ಧವನಹಳ್ಳಿ ಕೃಷ್ಣಶರ್ಮ ಕನ್ನಡದ ವಿಶಿಷ್ಟ ಶೈಲಿಯ ಬರಹಗಾರರು. ಗಾಂಧೀ ವಿಚಾರಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದವರು. ಪತ್ರಿಕೋದ್ಯಮದಲ್ಲಿ ಸಿದ್ಧಹಸ್ತರು. ಅನುವಾದ ಕಾರ್ಯದಲ್ಲಿ ಪಳಗಿದವರು. ಮೂಲಕೃತಿಗಿಂತ ಕನ್ನಡ ಅವತರಣಿಕೆಯಲ್ಲಿ ಹೆಚ್ಚಿನ ಶಕ್ತಿ ತರುವಂಥವರು. ಗಾಂಧೀಜಿಯವರು ಪ್ರಕಟಿಸುತ್ತಿದ್ದ ಹರಿಜನ ಪತ್ರಿಕೆಯಂತೆ ಕನ್ನಡದಲ್ಲಿಯೂ ಹರಿಜನ ಪತ್ರಿಕೆಯನ್ನು ಪ್ರಕಟಿಸಿದ ಸಾಹಸಿ. ಚುರುಕು ಮುಟ್ಟಿಸುವ ಭಾಷಣಕಾರರು, ಸಂಘಟನಾ ಚತುರರು, ಸರಳಜೀವಿಗಳು, ಸದಾ ಖಾದಿಧಾರಿ. ಇವರು ಒಬ್ಬ ವ್ಯಕ್ತಿಯಾಗಿದ್ದಿರದೇ ಒಂದು ಶಕ್ತಿಯಾಗಿದ್ದರು. ಇತ್ತೀಚೆಗೆ ಕೃಷ್ಣಶರ್ಮರ ಜನ್ಮ ಶತಮಾನೋತ್ಸವ ಆಚರಿಸಲಾಯಿತು. ಜನ್ಮ ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ ಸಂಗ್ರಹವಾದ ಹಣದಲ್ಲಿ ಖರ್ಚು ಕಳೆದು ಉಳಿದ ಹಣವನ್ನು ಒಂದು ನಿಧಿಯನ್ನಾಗಿ ಮಾಡಿ ಅದರಿಂದ ಬರುವ ಆದಾಯವನ್ನು ಪ್ರತಿ ವರ್ಷ ಶರ್ಮರ ನೆನಪಿನಲ್ಲಿ ವಿಶೇಷ ರೀತಿಯಲ್ಲಿ ಸಮಾಜಸೇವೆ ಮಾಡಿದ ವ್ಯಕ್ತಿಗೋ ಅಥವಾ ಸಂಸ್ಥೆಗೋ ಹತ್ತು ಸಾವಿರ ರೂಪಾಯಿಗಳ ಗೌರವ ಧನ ನೀಡಿ ರಚನಾತ್ಮಕ ಕಾರ್ಯವನ್ನು ಪುರಸ್ಕರಿಸಲಾಗುತ್ತದೆ. ಈ ಒಂದು ಪರಂಪರೆಯಲ್ಲಿ ೨೦೧೦-೧೧ನೇ ಸಾಲಿಗೆ ಸಿದ್ಧವನಹಳ್ಳಿ ಕೃಷ್ಣಶರ್ಮ ಸ್ಮಾರಕ ಪ್ರತಿಷ್ಠಾನದ ಗೌರವ ಪುರಸ್ಕಾರ ಜನಪದ ಸೇವಾ ಟ್ರಸ್ಟ್‌ಗೆ ಸಂದಿದೆ. ಈ ಪುರಸ್ಕಾರವನ್ನು ಪಡೆದ ಟ್ರಸ್ಟ್ ಧನ್ಯತೆಯನ್ನು ಅನುಭವಿಸಿದೆ. ಜನಪದ ಸೇವಾ ಟ್ರಸ್ಟ್ ತನ್ನ ಅರ್ಧ ಶತಮಾನೋತ್ಸವದ ಹೊಸ್ತಿಲಲ್ಲಿರುವಾಗ ಸಿದ್ಧವನಹಳ್ಳಿ ಕೃಷ್ಣಶರ್ಮ ದತ್ತಿ ಪ್ರಶಸ್ತಿ ದೊರೆತದ್ದು ಹೆಚ್ಚಿನ ಸಂತೋಷಕ್ಕೆ ಮತ್ತು ಟ್ರಸ್ಟಿನ ಭಾವೀ ಕಾರ್ಯಕ್ರಮಗಳಿಗೆ ಪ್ರೇರಣೆಯನ್ನು ಕೊಟ್ಟಿದೆ. ಕೃಷ್ಣಶರ್ಮರಂಥ ಸಾತ್ವಿಕ ವ್ಯಕ್ತಿಯ ಆಶೀರ್ವಾದ ಬಲವನ್ನು ಟ್ರಸ್ಟ್ ಪಡೆದಂತಾಗಿದೆ. ಈ ಪುರಸ್ಕಾರವನ್ನು ನೀಡಿದ ಕೃಷ್ಣಶರ್ಮ ಸ್ಮಾರಕ ದತ್ತಿಗೆ ಜನಪದ ಸೇವಾ ಟ್ರಸ್ಟ್ ಆಭಾರಿಯಾಗಿದೆ.

ಇತ್ತೀಚೆಗೆ ಇಟಲಿ ದೇಶದ ತಿಝೂರಾನಾ ರಿಪೇಪಿ ಎಂಬ ಮಹಿಳೆ ಟ್ರಸ್ಟಿಗೆ ಭೇಟಿ ಕೊಟ್ಟರು. ಈಗ ಅವರು ತ್ರಿವೇಣಿ ಎಂದು ಭಾರತೀಯ ಹೆಸರನ್ನಿಟ್ಟುಕೊಂಡಿದ್ದಾರೆ. ಭಾರತೀಯ ಹೆಸರಿನೊಂದಿಗೆ ಅವರು ಬಹಳಷ್ಟು ಭಾರತೀಯರೇ ಆಗಿದ್ದಾರೆ. ಕನ್ನಡ ಭಾಷೆಯನ್ನು ಕಲಿತಿದ್ದಾರೆ. ಯಾವ ತೊಡಕೂ ಇಲ್ಲದೆ ಮಾತನಾಡುತ್ತಾರೆ. ಶುದ್ಧವಾದ ಗ್ರಾಂಥಿಕ ಭಾಷೆಯದು. ಅಷ್ಟೇ ಅಲ್ಲದೆ ಅವರು ಮಾಸ್ತಿಯವರ ಕನ್ನಡದ ಸಣ್ಣ ಕಥೆಗಳನ್ನು ಮತ್ತು ಚಿತ್ತಾಲರ ಕಥೆಗಳನ್ನು ಇಟಾಲಿಯನ್ ಭಾಷೆಗೆ ಭಾಷಾಂತರಿಸಿದ್ದಾರೆ. ಕನ್ನಡ ಭಾಷೆಯಲ್ಲಿ ಡಿಪ್ಲೊಮಾ ಪಡೆದಿದ್ದಾರೆ. ಗಾಂಧೀಜಿಯವರ ವಿಚಾರದಲ್ಲಿ

ಆಸಕ್ತಿಯುಳ್ಳವರಾಗಿದ್ದಾರೆ ಮತ್ತು ಖಾದಿ ಧರಿಸುತ್ತಾರೆ. ಇವರ ಸಹೋದರಿ ಬೆಳಗಾವಿ ಜಿಲ್ಲೆಯ ಹಳ್ಳಿಯೊಂದರಲ್ಲಿ ಮಹಿಳಾ ಸಬಲೀಕರಣದ ಕೆಲಸದಲ್ಲಿ ನಿರತರಾಗಿದ್ದಾರೆ. ರಿಪೇಪಿಯವರು ತಮ್ಮ ಸಹೋದರಿಗಾಗಿ ಜನಪದ ವಿಚಾರ ಪತ್ರಿಕೆಗೆ ಎರಡು ವರ್ಷದ ಅವಧಿಗೆ ಚಂದಾದಾರರಾದರು.

೨೦೧೦ ಏಪ್ರಿಲ್ ಮಾಹೆಯ ದಾನಿಗಳು

ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ ಮೆಮೋರಿಯಲ್ ಟ್ರಸ್ಟ್, ಬೆಂಗಳೂರು.

ಶ್ರೀ ಜಿ.ವಿ.ಸುಂದರ್, ಬೆಂಗಳೂರು.

ಪ್ರೊ॥ ಕೆ.ಟಿ.ಕೃಷ್ಣಅಯ್ಯಂಗಾರ್,

ಶ್ರೀ ಮುನಿರಾಜು, ಬೆಂಗಳೂರು.

ಶ್ರೀ ಎನ್.ಲಕ್ಷ್ಮಿಕಾಂತ್, ಮೈಸೂರು.

ಶ್ರೀಮತಿ ಸುಶೀಲಾ ಸೊಸಲೇಗೌಡ, ಮೈಸೂರು.

ಶ್ರೀ ಎ.ಕೃಷ್ಣರಾವ್, ಮೈಸೂರು.

ಶ್ರೀ ಎ.ಮುರಾರಿರಾವ್, ಉಡುಪಿ, ಇವರಿಗೆ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೭೮

- ಸುರೇಂದ್ರ ಕೌಲಗಿ



ಮೇಲುಕೋಟೆಯ ಪ್ರಮುಖ ಬೀದಿಗಳಲ್ಲಿ ಕಲ್ಯಾಣಿ ಬೀದಿಯೂ ಒಂದು. ಈ ಬೀದಿಗೆ ಪ್ರಾಮುಖ್ಯತೆ ಬರಲು ಹಲವಾರು ಕಾರಣಗಳಿವೆ. ಮೊದಲನೆಯದಾಗಿ ಕಲ್ಯಾಣಿ ಎಂದು ಕರೆಸಿಕೊಳ್ಳುವ ಪವಿತ್ರ ಪುಷ್ಕರಣಿಗೆ ಹೋಗುವ ದಾರಿ ಇದಾಗಿದೆ. ಅಲ್ಲದೆ ಇದೇ ಮಾರ್ಗದಿಂದ ಯೋಗಾನರಸಿಂಹಸ್ವಾಮಿ ಬೆಟ್ಟಕ್ಕೂ ಹೋಗಬಹುದಾಗಿದೆ. ಮೇಲುಕೋಟೆಯ ಪೂರ್ವಭಾಗದ ಪ್ರದೇಶವಾದ ಹೆಚ್ಚು ಜನಸಂಖ್ಯೆ ಇರುವ ಕೊಟ್ಟಣಗೇರಿ, ಮಗ್ಗದ ಕೇರಿ ಮತ್ತು ಇತರ ವೃತ್ತಿಯ ಜನರು ಬಸ್‌ನಿಲ್ದಾಣಕ್ಕೆ ಹೋಗುವುದು ಈ ಕಲ್ಯಾಣಿ ಮಾರ್ಗದಿಂದಲೇ. ವೈರಮುಡಿ ಉತ್ಸವವೊಂದನ್ನು ಬಿಟ್ಟರೆ, ಇನ್ನೆರಡು ಉತ್ಸವಗಳಾದ ಕೃಷ್ಣರಾಜಮುಡಿ ಮತ್ತು ರಾಜಮುಡಿ ಉತ್ಸವದ ದೇವರು ಬಿಜಮಾಡಿಸುವುದು ಸಹ ಕಲ್ಯಾಣಿ ಬೀದಿಯಲ್ಲಿಯೇ. ಆದ್ದರಿಂದ ಕಲ್ಯಾಣಿ ಬೀದಿಯಲ್ಲಿ ವಾಸಮಾಡುವವರು ಭಾಗ್ಯಶಾಲಿಗಳೆಂದೇ ಭಾವಿಸುತ್ತಾರೆ. ಈಗ್ಗೆ ೫೦ವರ್ಷಗಳ ಹಿಂದೆ ಕಲ್ಯಾಣಿ ಬೀದಿಯ ಇಕ್ಕೆಲಗಳಲ್ಲಿ ಅನೇಕ ಮನೆಗಳಿದ್ದವು. ಆ ಮನೆಗಳಲ್ಲಿ ಸಂಸಾರಗಳಿದ್ದವು. ಆಗ ಕಲ್ಯಾಣಿ ಬೀದಿಯಲ್ಲಿ ಇದ್ದವರೆಲ್ಲಾ ಮಧ್ಯಮವರ್ಗದವರಾಗಿದ್ದರು. ಆದರೆ ಕಾಲಕಳೆದಂತೆಲ್ಲ, ಕಲ್ಯಾಣಿ ಬೀದಿಯ ಸ್ವರೂಪ ಬಹಳಷ್ಟು ಬದಲಾಗಿದೆ. ಹಳೆಯ ನಾಡಹೆಂಚಿನ ಮನೆಗಳ ಸ್ಥಳದಲ್ಲಿ ಸಿಮೆಂಟ್ ಕಾಂಕ್ರೀಟ್ ಮನೆಗಳು ಬಂದಿವೆ. ಬಹಳಷ್ಟು ಕುಟುಂಬದವರು ತಮ್ಮ ತಮ್ಮ ಸಾಂಸಾರಿಕ ಕಾರಣಗಳಿಂದ ನಗರಗಳಿಗೆ ವಲಸೆ ಹೋಗಿದ್ದಾರೆ. ಈಗ ಇರುವ ಹಳೆಯ ಮನೆಗಳು ಶಿಥಿಲಗೊಳ್ಳುತ್ತಿವೆ. ಕಲ್ಯಾಣಿ ಬೀದಿಯಲ್ಲಿಯ ಜನಸಂಖ್ಯೆ ಕಡಿಮೆಯಾಗಿದೆ. ಬಹು ಹಿಂದೆ ಈ ಕಲ್ಯಾಣಿ ಬೀದಿ ಕಲ್ಲುಹಾಸುಗಳಿಂದ ನಿರ್ಮಿತವಾಗಿತ್ತು. ಆ ರಸ್ತೆಯನ್ನು ನೋಡಿದಾಗ ಮತ್ತು ಆ ರಸ್ತೆಯಲ್ಲಿ ನಡೆದಾಗ ಮೇಲುಕೋಟೆಯ ಪುರಾತತ್ವದ ಅನುಭವವಾಗುತ್ತಿತ್ತು. ಆ ಕಲ್ಲುಹಾಸುಗಳ ಸವೆತವೇ ಮೇಲುಕೋಟೆಯ ಪುರಾತನತನಕ್ಕೆ ಸಾಕ್ಷಿಯಂತಿತ್ತು. ಬೀದಿ ಸಮತಟ್ಟಾಗಿರದಿದ್ದುದರಿಂದ ವಾಹನಗಳ ಸಂಚಾರ ಇರಲೇ ಇಲ್ಲ. ಆದರೂ ಕೂಡ ಎತ್ತಿನಗಾಡಿಗಳು ಕಷ್ಟಪಟ್ಟು ಹೋಗುತ್ತಿದ್ದವು. ಹಿಂದೆ ಟ್ರಸ್ಟಿನ ಕರುಣಾಗೃಹಕ್ಕೆ ಭೇಟಿಕೊಡಲು ಬಂದಿದ್ದ ಜಪಾನ್ ದೇಶದ ರಾಯಭಾರಿಯ ಕಾರು ದೂರದಲ್ಲಿಯೇ ನಿಲ್ಲಬೇಕಾಯಿತು. ರಾಯಭಾರಿ ನಡೆದುಕೊಂಡೇ ಕರುಣಾಗೃಹಕ್ಕೆ ಬಂದಿದ್ದರು. ಜನಪದ ಮುದ್ರಣಾಲಯ ಉದ್ಘಾಟಿಸಲು ಬಂದಿದ್ದ ಅಂದಿನ ರಾಜ್ಯಪಾಲ ಧರ್ಮವೀರ್ ನಡೆದುಕೊಂಡೇ ಬಂದಿದ್ದರು. ಮುಂದೆ ಮೇಲುಕೋಟೆಗೆ ಆಗಿನ ಮುಖ್ಯಮಂತ್ರಿ ಕೆ.ಹನುಮಂತಯ್ಯನವರು ವಿಧಾನಸೌಧ ಕಟ್ಟಿಸುವ ಸಂದರ್ಭದಲ್ಲಿ

ಶ್ರಮಜೀವಿಯಾಗಿ ಕೆಲಸಮಾಡುತ್ತಿದ್ದ ಓರ್ವ ಖೈದಿಯೊಬ್ಬ ಹನುಮಂತಯ್ಯನವರತ್ತ ಎಸೆದ ಪಾದರಕ್ಷೆ ಅವರ ತಲೆಗೆ ತಾಗಿತೆಂಬ ಕಾರಣಕ್ಕಾಗಿ ತಮ್ಮ ಮನಸ್ಸಿನ ಶಾಂತಿಗೋಸ್ಕರ ಮೇಲುಕೋಟೆಗೆ ಬಂದು ಎರಡು ಮೂರು ದಿನ ವಾಸವಾಗಿದ್ದರು. ಮುಖ್ಯಮಂತ್ರಿಯವರ ಈ ಭೇಟಿಯ ಸಂದರ್ಭ ಉಪಯೋಗಿಸಿಕೊಂಡು ಗ್ರಾಮಸ್ಥರು ಊರಿನ ಮುಖ್ಯ ಬೀದಿಗಳ ಸುಧಾರಣೆಗಾಗಿ ಕೋರಿದರು. ಗ್ರಾಮಸ್ಥರ ಕೋರಿಕೆಯನ್ನು ಮನ್ನಿಸಿ, ಮುಖ್ಯಮಂತ್ರಿಯವರು ಮೇಲುಕೋಟೆಯ ಮುಖ್ಯಬೀದಿ, ಕಲ್ಯಾಣಿ ಬೀದಿಗಳಿಗೆ ಡಾಂಬರು ಹಾಕಿಸಿದರು. ಈ ಡಾಂಬರು ಹಾಕಿದ್ದೇ ಆಯಿತು, ಅಂದಿನಿಂದ ಈ ರಸ್ತೆಗಳಲ್ಲಿ ವಾಹನಗಳ ಸಂಚಾರ ಪ್ರಾರಂಭವಾಯಿತು. ಈಗ ೫೦ ವರ್ಷಗಳ ನಂತರ ಈ ಎರಡೂ ಬೀದಿಗಳು ವಾಹನಗಳ ಓಡಾಟದಿಂದ ನಗರ ಜೀವನದ ವಾತಾವರಣ ನಿರ್ಮಿಸಿವೆ. ಬೀದಿಗಳಲ್ಲಿ ವಯಸ್ಸಾದವರು, ಶಾಲಾ ಮಕ್ಕಳು ಸುರಕ್ಷಿತವಾಗಿ ನಡೆದು ಹೋಗಲು ಆತಂಕ ಉಂಟಾಗುತ್ತದೆ. ಅಲ್ಲದೆ ಪ್ರಾಚೀನ ಮೇಲುಕೋಟೆಯೂ ಸಹ ಆಧುನಿಕಗೊಳ್ಳುತ್ತಿದೆ ಎಂಬುದಕ್ಕೆ ಗುರುತಾಗಿದೆ.

೫೦ ವರ್ಷಗಳ ಹಿಂದೆ ಜನಪದ ನಿಲಯದ ಅಕ್ಕಪಕ್ಕ ಹಿಂದೆಮುಂದೆ ಸಂಸಾರದ ಮನೆಗಳಿದ್ದವು. ಗ್ರಾಮಜೀವನದ ಮಧುರ ಅನುಭವವಾಗುತ್ತಿತ್ತು. ಬದಲಾದ ಇಂದಿನ ಪರಿಸ್ಥಿತಿಯಲ್ಲಿ ಪಾಳುಬೀಳುತ್ತಿರುವ ಮನೆಗಳು, ಜನರ ವಲಸೆಯಿಂದ ಉಂಟಾಗುತ್ತಿರುವ ನಿರ್ಜನಪ್ರದೇಶ, ವಾಹನಗಳ ಕಿವಿಗಡಚಿಕ್ಕುವ ಗಲಾಟೆ ಮೇಲುಕೋಟೆಯನ್ನು ಗತಕಾಲಕ್ಕೆ ತಳ್ಳುತ್ತಿದೆ. ಮೇಲುಕೋಟೆಯ ಕವಿ ಪು.ತಿ.ನ ರವರು ತಮ್ಮ ಕವನಗಳಲ್ಲಿ ವರ್ಣಿಸಿದ ಯದುಗಿರಿಯ ವೈಭವ ನಂಬಲು ಅಸಾಧ್ಯವಾಗುತ್ತದೆ. ಆದರೆ ಜನಪದ ನಿಲಯದ ಪೂರ್ವ ಭಾಗದಲ್ಲಿ ವಾಸವಾಗಿರುವ ತಮ್ಮಣಗೌಡರ ಸಂಸಾರ ಹಳೆಯ ಮೇಲುಕೋಟೆಯನ್ನು ನೆನಪಿಗೆ ತಂದು ಕೊಡುತ್ತದೆ. ಕೇವಲ ಹೆಣ್ಣುಮಕ್ಕಳನ್ನು ಹೊಂದಿರುವ ತಮ್ಮಣ್ಣಗೌಡರು ಇಂದಿಗೂ ಆಧುನಿಕ ಗಾಳಿಗೆ ಬದಲಾಗದೆ, ೫೦ ವರ್ಷಗಳ ಹಿಂದೆ ಯಾವ ರೀತಿಯ ಗ್ರಾಮಜೀವನ ನಡೆಸುತ್ತಿದ್ದರೋ ಅದೇ ಗ್ರಾಮಜೀವನವನ್ನು ಇಂದಿಗೂ ನಡೆಸುತ್ತಿದ್ದಾರೆ. ಅದೇ ನಾಡಹೆಂಚಿನ ಮನೆ ಇದೆ. ಪ್ರತಿವರ್ಷ ತಾವೇ ಸ್ವತಃ ತಮ್ಮ ಇಳಿವಯಸ್ಸಿನಲ್ಲಿಯೂ ಮನೆಯ ಮೇಲೆ ಹತ್ತಿ ಹೆಂಚುಗಳನ್ನು ಸರಿಮಾಡುತ್ತಾರೆ. ಖುಷ್ಕಿ ಭೂಮಿಯ ವ್ಯವಸಾಯ ಅವರದು. ಹೆಂಡತಿ ಮತ್ತು ಹೆಣ್ಣುಮಕ್ಕಳನ್ನೆ ಕಟ್ಟಿಕೊಂಡು ವ್ಯವಸಾಯದ ಕೆಲಸ ನಿರ್ವಹಿಸುತ್ತಾ ಬಂದಿದ್ದಾರೆ. ಹೆಣ್ಣು ಮಕ್ಕಳೆಲ್ಲರ ಮದುವೆ ಮಾಡಿದ್ದಾರೆ. ತುಂಬಿದ ಸಂಸಾರವಾಗಿದ್ದರೂ, ಒಣಭೂಮಿಯ ಬೇಸಾಯ ಅವಲಂಬಿಸಿದ್ದರೂ ಯಾವುದೇ ಸಾಲಸೋಲವಿಲ್ಲದ ನೆಮ್ಮದಿಯ ಮತ್ತು ಗೌರವದ ಶ್ರಮ ಆಧಾರಿತ ಜೀವನ ನಡೆಸುತ್ತಿದ್ದಾರೆ. ತಮ್ಮಣ್ಣಗೌಡರಂಥ ಒಕ್ಕಲಿಗರ ಸಂಖ್ಯೆ ಕಡಿಮೆಯಾಗುತ್ತಿದೆ. ಬದಲಾವಣೆಯ ಚಕ್ರ ವೇಗವಾಗಿ ತಿರುಗುತ್ತಿರುವಾಗಲೂ ತಮ್ಮಣ್ಣಗೌಡರಂಥ ಮಣ್ಣಿನಮಗ ಜನಪದ ನಿಲಯದ ಹತ್ತಿರದಲ್ಲಿರುವುದು ಮತ್ತು ಅವರ ದಿನನಿತ್ಯದ ಓಡಾಟ ಜನಪದ ನಿಲಯದ ಮೂಲ ಭಾವನೆಗೆ ಬಲವನ್ನು ತಂದು ಕೊಡುತ್ತಿರುವುದೇ ಸಂತಸದ ವಿಷಯವಾಗಿದೆ.

* * *

ಸರ್ವೋದಯ ಆಂದೋಲನದ ಮುನ್ನಡೆ

ಸ್ವಾತಂತ್ರ್ಯಪೂರ್ವದಲ್ಲಿ, ಸ್ವಾತಂತ್ರ್ಯನಂತರ ಮುಂಬಯಿ ಮಹಾ ನಗರವು ಗಾಂಧೀ ವಿಚಾರದ ಕೇಂದ್ರವಾಗಿ ಮುನ್ನಡೆದುಕೊಂಡು ಬಂದಿದೆ. ತುಳಸೀದಾಸ್ ಸೋಮಯ ಎಂಬುವರ ನೇತೃತ್ವದಲ್ಲಿ ಸರ್ವೋದಯ ಕೆಲಸ ತುಂಬ ಸಂಘಟಿತವಾಗಿ ಬೆಳೆದಿದೆ. ಮುಂಬಯಿ ಮಹಾನಗರದ ಅನೇಕ ಉಪನಗರಗಳ ರೈಲ್ವೇ ನಿಲ್ದಾಣಗಳಲ್ಲಿ ಸರ್ವೋದಯ ಮಾರಾಟದ ಮಳಿಗೆಗಳಿವೆ. ಈ ಮಳಿಗೆಗಳ ಮೂಲಕ ಶಾಲಾ ಕಾಲೇಜುಗಳಲ್ಲಿ ಏರ್ಪಡಿಸಲಾಗುವ ವಿವಿಧ ಬಗೆಯ ಕಾರ್ಯಕ್ರಮಗಳ ಮೂಲಕ ಪ್ರತಿ ವರ್ಷ ಲಕ್ಷಾಂತರ ರೂಪಾಯಿ ಸರ್ವೋದಯ ಸಾಹಿತ್ಯ ಮಾರಾಟವಾಗುತ್ತದೆ. ಸರ್ವೋದಯ ಆಂದೋಲನದ ಕೆಲಸದಲ್ಲಿ ಮುಂಬಯಿ ಮಹಾನಗರದಲ್ಲಿರುವ ಎಲ್ಲ ಭಾಷಿಗರ ಪ್ರತಿನಿಧಿಯಾಗಿ ಓರ್ವರನ್ನು ಮುಂಬಯಿ ಸರ್ವೋದಯ ಮಂಡಲಕ್ಕೆ ಸಲಹಾಕಾರರನ್ನಾಗಿ ನಿಯೋಜಿಸಿಕೊಳ್ಳಲಾಗುತ್ತದೆ. ಕನ್ನಡ ಭಾಷಿಗರ ಪರವಾಗಿ ಕರ್ನಾಟಕದ ಡಾ॥ ಹೆಚ್.ಎಸ್.ಸುರೇಶ್‌ರವರನ್ನು ಸಲಹಾಕಾರರನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಕರ್ನಾಟಕ ಸರ್ವೋದಯ ಮಂಡಲ ಪ್ರಾರಂಭಿಸಿರುವ ಯುವ ವಿಭಾಗಕ್ಕೆ ಡಾ॥ ಸುರೇಶ್‌ರವರನ್ನು ಸಂಯೋಜಕರಾಗಿ ಗೊತ್ತುಮಾಡಿದೆ.

ಇತ್ತೀಚೆಗೆ ಮುಂಬಯಿಯಲ್ಲಿ ಸರ್ವೋದಯ ಕಾರ್ಯಕರ್ತರ ಒಂದು ದಿನದ ಸ್ನೇಹ ಮಿಲನ ಏರ್ಪಡಿಸಿತ್ತು. ಈ ಸ್ನೇಹ ಮಿಲನದಲ್ಲಿ ಸುಮಾರು ೨೦೦ ಸರ್ವೋದಯ ಕಾರ್ಯಕರ್ತರು ಭಾಗವಹಿಸಿದ್ದರು.

ಸಿತಾರ್-ಎ-ಇಮ್ತಿಯಾಸ್

ನಿರ್ಮಲಾ ದೇಶಪಾಂಡೆ ಸರ್ವೋದಯ ಆಂದೋಲನದಲ್ಲಿ ದೊಡ್ಡ ಹೆಸರು. ಬ್ರಹ್ಮಚಾರಿಣಿಯಾಗಿದ್ದವರು. ವಿನೋಬಾರವರ ವಿಚಾರದಿಂದ ಪ್ರಭಾವಿತರಾಗಿ ತಮ್ಮ ಉನ್ನತ ವ್ಯಾಸಂಗ ಮೊಟಕುಗೊಳಿಸಿ ಹಲವಾರು ವರ್ಷಗಳ ಕಾಲ ವಿನೋಬಾರೊಂದಿಗೆ ಪಾದಯಾತ್ರೆಯಲ್ಲಿ ಭಾಗವಹಿಸಿದ್ದವರು. ಭಾರತ-ಪಾಕಿಸ್ತಾನದ ಮಧ್ಯೆ ಸಂಬಂಧ ಕದಡಿದ್ದ ಸಂದರ್ಭದಲ್ಲಿ ನಿರ್ಮಲಾ ದೇಶಪಾಂಡೆ ಜನತೆಯಿಂದ ಜನತೆಗೆ ಸಂಬಂಧ ಏರ್ಪಡಿಸುವುದಕ್ಕಾಗಿ ಭಾರತದಿಂದ ಮಹಿಳೆಯರ ತಂಡವನ್ನು ಪಾಕಿಸ್ತಾನಕ್ಕ ಕರದೊಯ್ದಿದ್ದರು. ಅಲ್ಲಿ ಜನಸಾಮಾನ್ಯರೊಡನೆ ಬೆರೆತು, ಭಾರತ ಮತ್ತು ಪಾಕಿಸ್ತಾನದ ನಡುವೆ ನಡೆಯುತ್ತಿರುವ ಶೀತಲ ಸಮರ ನಿಲ್ಲಿಸಿ ಶಾಂತಿಸ್ಥಾಪನೆಯ ಅಗತ್ಯ ತಿಳಿಸಿದರು. ಪಾಕಿಸ್ತಾನದ ಸಾಮಾನ್ಯ ಜನರು ಈ ಪ್ರಯತ್ನಕ್ಕೆ ತಮ್ಮ ಅಭೂತಪೂರ್ವವಾದ ಬೆಂಬಲ ಸೂಚಿಸಿದರು. ನಂತರ ಪಾಕಿಸ್ತಾನದಿಂದಲೂ ಒಂದು ಮಹಿಳಾ ತಂಡವು ಭಾರತಕ್ಕೆ ಆಗಮಿಸಿ ಇಲ್ಲಿಯ ಜನರೊಡನೆ ಸಂಪರ್ಕವೇರ್ಪಡಿಸಿಕೊಂಡಿತ್ತು. ನಿರ್ಮಲಾ ದೇಶಪಾಂಡೆಯವರನ್ನು ಭಾರತ ಸರ್ಕಾರ ರಾಜ್ಯ ಸಭಾ ಸದಸ್ಯರನ್ನಾಗಿ ಆಯ್ಕೆ ಮಾಡಿತು. ಅವರಿಗೆ ಪದ್ಮಶ್ರೀ ಪದವಿಯನ್ನು ನೀಡಿತ್ತು. ನಿರ್ಮಲಾ

ದೇಶಪಾಂಡೆಯವರು ಭಾರತ, ಪಾಕಿಸ್ತಾನದ ಮಧ್ಯೆ ಶಾಂತಿ, ಐಕ್ಯತೆ ಮತ್ತು ಸೌಹಾರ್ದ ಬಾಂಧವ್ಯಕ್ಕಾಗಿ ಮಾಡಿದ ಕೆಲಸ ಗುರುತಿಸಿ ಪಾಕಿಸ್ತಾನ ಸರ್ಕಾರವು ತನ್ನ ಅತ್ಯಂತ ಉನ್ನತ ನಾಗರಿಕ ಪ್ರಶಸ್ತಿಯಾದ ಸಿತಾರ್-ಎ-ಇಮ್ತಿಯಾಸ್ ಎಂಬುದನ್ನು ನಿರ್ಮಲಾ ದೇಶಪಾಂಡೆಯವರಿಗೆ ಮರಣೋತ್ತರವಾಗಿ ಪ್ರದಾನ ಮಾಡಲಾಗುವುದೆಂದು ಕಳೆದ ಆಗಸ್ಟ್ ೧೪ರಂದು ಅಧ್ಯಕ್ಷ ಆಸಿಫ್ ಅಲಿ ಜರ್ದಾರಿಯವರು ಘೋಷಿಸಿದರು. ಈ ಪ್ರಶಸ್ತಿಯನ್ನು ಪಾಕಿಸ್ತಾನದ ಸ್ವತಂತ್ರ ದಿನದಂದು ಅಂದರೆ ೨೦೧೦ ಮಾರ್ಚ್ ೨೩ರಂದು ನಿರ್ಮಲಾ ದೇಶಪಾಂಡೆಯವರಿಗೆ ಕೊಡಲಾಯಿತು.

ಲವಣಂರವರಿಗೆ ಜಮ್ನಾಲಾಲ್ ಬಜಾಜ್ ಪ್ರಶಸ್ತಿ

ದಕ್ಷಿಣ ಭಾರತದ ಹಿರಿಯ ಸರ್ವೋದಯ ಕಾರ್ಯ ಕರ್ತರಾದ ಲವಣಂರವರಿಗೆ ೨೦೦೯ನೇ ಸಾಲಿನ ರಚನಾತ್ಮಕ ಕಾರ್ಯಕ್ಕಾಗಿ ಪ್ರತಿಷ್ಠಿತ ಜಮ್ನಾಲಾಲ್ ಬಜಾಜ್ ಪ್ರಶಸ್ತಿ ಕೊಟ್ಟು ಗೌರವಿಸಲಾಯಿತು. ಲವಣಂರವರು ನಾಸ್ತಿಕ ಪ್ರೊಫೆಸರ್ ಗೋ. ರಾಮಚಂದ್ರ ರಾವ್‌ರವರ ಸುಪುತ್ರರು. ಇವರು ಗೋರಾ ಎಂದೇ ಪ್ರಸಿದ್ಧರಾದವರು. ಅವರು ನಾಸ್ತಿಕರಾಗಿದ್ದರೂ ಆಸ್ತಿಕರಾಗಿದ್ದ ಗಾಂಧೀಜಿಯವರ ಪ್ರೀತಿಗೆ ಪರಮ ಆಪ್ತರಾಗಿದ್ದವರು. ಗೋರಾರವರು ವಿಜಯವಾಡದಲ್ಲಿ ನಾಸ್ತಿಕ ಕೇಂದ್ರವನ್ನು ಸ್ಥಾಪಿಸಿದರು. ಇಂದಿಗೂ ಆ ಕೇಂದ್ರವು ತನ್ನದೇ ಆದ ರೀತಿಯಲ್ಲಿ ಕೆಲಸ ಮಾಡಿಕೊಂಡು ಬರುತ್ತಿದೆ. ಆ ಕೇಂದ್ರವನ್ನು ಲವಣಂರವರು ನಡೆಸಿಕೊಂಡು ಬರುತ್ತಿದ್ದಾರೆ. ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಸೇವಾ ಕಾರ್ಯವನ್ನು ಪ್ರಾರಭಿಸಿದರು. ಗಾಂಧೀಜಿ, ವಿನೋಬಾ, ಜೆ.ಪಿ.ಯವರ ಸಂಪರ್ಕಕ್ಕೆ ಬಂದರು. ಎರಕುಲ ಎಂಬ ಅಪರಾಧೀ ಬುಡಕಟ್ಟು ಜನಾಂಗವನ್ನು ಸುಧಾರಿಸುವುದರಲ್ಲಿ ಹಾಗೂ ಜೋಗಿನಿಗಳನ್ನು ಸಮಾಜದ ಮುಖ್ಯ ಪ್ರವಾಹಕ್ಕೆ ತರುವುದರಲ್ಲಿ ಲವಣಂ ಅದ್ವಿತೀಯ ಕೆಲಸ ಮಾಡಿದ್ದಾರೆ. ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹಿಸುವುದಲ್ಲದೇ ನಕ್ಸಲೀಯರನ್ನು ಮತ್ತು ಇತರ ತೀವ್ರಗಾಮಿಗಳನ್ನುಅಹಿಂಸಾ ಮಾರ್ಗಕ್ಕೆ ತರುವುದರಲ್ಲಿ ಲವಣಂರವರ ಪಾತ್ರ ಹಿರಿದಾಗಿದೆ. ೧೯೩೦ರಲ್ಲಿ ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹ ಪ್ರಾರಂಭಿಸಿದ ವೇಳೆಯಲ್ಲಿ ಇವರು ಹುಟ್ಟಿದ್ದರಿಂದ ಗೋರಾರವರು ತಮ್ಮ ಮಗನಿಗೆ ಲವಣಂ ಎಂದು ನಾಮಕರಣ ಮಾಡಿದರು.

ಸರ್ವೋದಯ ಸಿದ್ಧಾಂತದ ಗಮ್ಯ

"ನೀವೇಕೆ ಹೊರಗೆ ಉಳಿದಿರಿ."? ರಾಷ್ಟ್ರ ಸಂಚಾಲನದ ಹೊಣೆಯನ್ನೇಕೆ ಹೊರಲಿಲ್ಲ? ಎಂದು ವಿನೋಬಾರವರನ್ನು ಪ್ರಶ್ನಿಸಲಾಯಿತು. ಅದಕ್ಕೆ ಅವರ ಉತ್ತರ "ರಾಜ್ಯ ಸತ್ತೆಯ ಸಹಾಯದಿಂದ ನನ್ನ ಕೆಲಸ ಪೂರ್ಣವಾಗುವುದಿಲ್ಲ. ದೇಶವು ಯಾವ ಹಾದಿಯಲ್ಲಿ ನಡೆಯಬೇಕೆಂಬುದು ರಾಷ್ಟ್ರಕ್ಕೆ ತೋರಿಸುವುದು, ಆ ಹಾದಿಯನ್ನು ಸರಿಪಡಿಸುವುದು ನನ್ನ ಕೆಲಸ ಎಂದು ಹೇಳಿ ಒಂದು ಸುಂದರವಾದ ಉಪಮಾನ ಕೊಟ್ಟರು. ಎತ್ತಿನಗಾಡಿಗೆ ಎರಡು ಎತ್ತು ಹೂಡಿರುತ್ತಾರೆ. ನಾನು ಮೂರನೆಯ ಎತ್ತಾಗಿ ನನ್ನ ಹೆಗಲು ಹಚ್ಚಿದ್ದರೆ ಗಾಡಿಗೆ ಹೆಚ್ಚಿನ ಸೌಕರ್ಯವಾದಿತೆ? ಗಾಡಿ ಹೋಗುವ ದಾರಿಯನ್ನು ಸರಿಮಾಡುವುದು ಅದಕ್ಕಿಂತ ಉತ್ತಮಕೆಲಸ.

ಖಾದಿ ವಿಚಾರ

ಮುಂಬಯಿಯಲ್ಲಿರುವ ಶ್ರೀ ಅನಿರುದ್ಧ ಬಾಪು ಸೇವಾ ಸಂಸ್ಥೆಯಲ್ಲಿ ಅಂಬರ್ ಚರಖಾದ ಕ್ರಾಂತಿಯಾಗುತ್ತಿದೆ. ಅನಿರದ್ಧ ಬಾಪುರವರಿಗೆ ಸಾವಿರಾರುಜನ ಅನುಯಾಯಿಗಳಿದ್ದಾರೆ. ಅವರೆಲ್ಲರೂ ಸೇರಿದಾಗ ಅನಿರುದ್ಧರವರು ಅವರೆಲ್ಲರಿಗೆ ಚರಖಾದ ಕಾರ್ಯಕ್ರಮದ ಬಗ್ಗೆ ವಿವರವಾಗಿ ತಿಳಿಸಿದರು ಮತ್ತು ತಮ್ಮ ೧೩ ಅಂಶದ ಕಾರ್ಯಕ್ರಮವನ್ನು ಪ್ರಕಟಿಸಿದರು. ಅದರಲ್ಲಿ ಮೊದಲನೆಯ ಅಂಶವೇ ಚರಖಾದಾಗಿತ್ತು. ಅವರ ಅನುಯಾಯಿಗಳು ಬೇರೆ ಕಡೆಗೆ ಇರುವ ಅಂಬರ್ ಚರಖಾದ ಕೇಂದ್ರಗಳನ್ನು ನೋಡಿದರು. ಚರಖಾದಿಂದ ದಾರ ತೆಗೆಯುವುದು ಮತ್ತು ಅದನ್ನು ಸರಿಮಾಡುವ ಶಿಕ್ಷಣ ಪಡೆದರು. ನೇಯ್ಗೆ ಕೇಂದ್ರವನ್ನು ನೋಡಿದರು. ಅನಿರುದ್ಧ ಉಪಾಸನಾ ಫೌಂಡೇಷನ್ ಮತ್ತು ಕೆಲ ಬೇರೆ ಸಂಸ್ಥೆಗಳು ಸೇರಿ ೨೦೦೮ರ ಮೇ ತಿಂಗಳಿನಲ್ಲಿ ಮುಂಬಯಿ ಉಪನಗರ ಬಾಂದ್ರಾದಲ್ಲಿ ಚರಖಾ ಶಿಬಿರವನ್ನು ಸಂಘಟಿಸಿದವು. ಅದರಲ್ಲಿ ಬೆಳಿಗ್ಗೆ ೧೧ಗಂಟೆಯಿಂದ ರಾತ್ರಿ ೯ ಗಂಟೆಯವರೆಗೆ ಸರದಿಯಂತೆ ಸುಮಾರು ೧೨೦೦ ಜನರು ಭಾಗವಹಿಸಿದ್ದರು. ಈ ಶಿಬಿರದಲ್ಲಿ ದಿನಾಲೂ ೧೩೦೦ ಲಡಿ ದಾರದ ಉತ್ಪಾದನೆಯಾಯಿತು. ಶಿಬಿರದ ಅವಧಿಯಲ್ಲಿ ಒಟ್ಟು ೨೦,೦೦೦ ಲಡಿ ದಾರದ ಉತ್ಪಾದನೆಯಾಯಿತು. ಮುಂಬಯಿ, ಠಾಣೆ, ಪುಣೆ, ನಾಸಿಕ್, ಔರಂಗಾಬಾದ್, ಧುಳೇ ಮತ್ತು ಕೊಲ್ಹಾಪುರ್ ಜಿಲ್ಲೆಗಳಲ್ಲಿ ಫೌಂಡೇಷನ್ ಮೂಲಕ ನಾಲ್ಕು ಸಾವಿರಕ್ಕೂ ಮೀರಿ ಚರಖಾಗಳನ್ನು ಹಂಚಲಾಯಿತು. ಕೆಲವು ಜನರಿಗೆ ಚರಖಾದ ದುರಸ್ತಿ ಮತ್ತು ಅದನ್ನು ಸುಸ್ಥಿತಿಯಲ್ಲಿ ಇಡುವ ಪ್ರಶಿಕ್ಷಣ ಕೊಡಲಾಯಿತು. ಸ್ವಯಂಸೇವಕರ ಈ ಚರಖಾಗಳು ವರ್ಷವಿಡೀ ನಡೆಯುತ್ತವೆ. ಅಲ್ಲಲ್ಲಿ ನೂಲುವ ಶಿಬಿರಗಳನ್ನು ಆಯೋಜಿಸಲಾಗುತ್ತದೆ. ಈವರೆಗೆ ಈ ಎಲ್ಲ ಜನರು ಸೇರಿ ೩೦,೮೧೩ಕಿಲೋ ಹಂಜಿಯಿಂದ ೪೦ನೇ ನಂಬರಿನ ೧೪,೭೨,೪೨೦ಲಡಿ ದಾರವನ್ನು ತಯಾರಿಸಿದ್ದಾರೆ. ಈ ದಾರದಿಂದ ೧,೯೮,೨೦೫ ಮೀಟರ್ ಬಟ್ಟೆಯನ್ನು ನೇಯಲಾಯಿತು. ಈ ಬಟ್ಟೆಯಿಂದ ಸಮವಸ್ತ್ರವನ್ನು ತಯಾರಿಸಿ ಅಗತ್ಯವಿರುವ ವಿದ್ಯಾರ್ಥಿಗಳಿಗೆ ವಿತರಣೆ ಮಾಡಲಾಯಿತು. ಈ ಯೋಜನೆಯನ್ನು ನಡೆಸುವವರ ಹೇಳಿಕೆ ಏನೆಂದರೆ, ಒಂದು ವೇಳೆ ಬಟ್ಟೆಯನ್ನು ಖರೀದಿಸಿ ಅದರಿಂದ ಸಮವಸ್ತ್ರ ತಯಾರಿಸಿದ್ದೇ ಆಗಿದ್ದರೆ, ಇಂದಿನ ಲೆಕ್ಕದ ಪ್ರಕಾರ ಪ್ರತಿಶತ ಐದರಷ್ಟು ವಿದ್ಯಾರ್ಥಿಗಳಿಗೆ ಮಾತ್ರ ಸಮವಸ್ತ್ರ ಕೊಡಬಹುದಾಗಿತ್ತು.

ಬಾಡಿಗೆ ಇಲ್ಲದ ಸ್ಥಳದಲ್ಲಿ ಚರಖಾಗಳನ್ನು ನಡೆಸಲಾಗುತ್ತದೆ, ಉಚಿತವಾಗಿ ಹತ್ತಿಯನ್ನು ಪಡೆಯುವುದಕ್ಕಾಗಿ ಹಾಗೂ ಬಟ್ಟೆ ನೇಯ್ಗೆ ಮತ್ತು ಹೊಲಿಗೆಯ ಖರ್ಚಿಗಾಗಿ ಬೇಕಾಗುವ ಹಣದ ವ್ಯವಸ್ಥೆಯನ್ನು ಸಂಸ್ಥೆಯು ಹೆಚ್ಚುವರಿ ರದ್ದಿ ಪದಾರ್ಥಗಳನ್ನು ಮಾರಿ ಕೊಡುತ್ತದೆ. ಈ ಯೋಜನೆಯ ಮೂಲಕ ಸಮಾಜದಲ್ಲಿ ಶ್ರಮದ ಪ್ರತಿಷ್ಠೆ ಬೆಳೆಯುವುದೆಂದು ಆಶಿಸಲಾಗಿದೆ. ನವಂಬರ್೨೦೧೯ರವರೆಗೆ

ಮೂರು ಲಕ್ಷದ ನಾಲ್ಕು ಸಾವಿರ ವಿದ್ಯಾರ್ಥಿಗಳಲ್ಲಿ ಅರವತ್ತೆಂಟು ಸಾವಿರದ ನಲ್ವತ್ತು ವಿದ್ಯಾರ್ಥಿಗಳಿಗೆ ಸಮವಸ್ತ್ರ ಹಂಚಲಾಗಿದೆ. ಫೌಂಡೇಷನ್ ಮೂಲಕ ಬಡವರು ವಾಸಿಸುವ ವಸತಿಗಳಲ್ಲಿ 'ಅನ್ನಪೂರ್ಣ ಚರಖಾ ಯೋಜನೆ' ಎಂಬ ಇನ್ನೊಂದು ಕ್ರಮವನ್ನು ಕಾರ್ಯಗತಗೊಳಿಸಲಾಗುತ್ತಿದೆ. ಮತ್ತು ಎಲ್ಲಿ ಅನ್ನಪೂರ್ಣ ಮಹಾಪ್ರಸಾದಂ ಸಂಸ್ಥೆಗೆ ಧಾನ್ಯ ಬರುತ್ತಿದೆಯೋ ಅಲ್ಲಿ ಶ್ರಮ ಮಾಡುವ ಇಚ್ಛೆಯುಳ್ಳವರಿಗೆ ಚರಖಾಗಳ ಹೊಂದಾಣಿಕೆ ಮಾಡಿ ಒಂದು ಲಡಿ ದಾರ ತೆಗೆಯುವವರಿಗೆ ಕಾಲು ಕಿಲೋ ಧಾನ್ಯ ಮತ್ತು ನೂರೈವತ್ತು ಗ್ರಾಂ ಬೇಳೆಯನ್ನು ಕೊಡಲಾಗುತ್ತದೆ. ಈ ಯೋಜನೆಯ ಲಾಭ ಪಡೆಯುವ ಬಡಜನರು ಎಷ್ಟೊಂದು ಸಂತಸವುಳ್ಳವರಾಗಿದ್ದಾರೆ ಎಂದರೆ, ತಮ್ಮ ಅಗತ್ಯಕ್ಕೆ ಅನುಸಾರವಾಗಿ ಧಾನ್ಯ ದೊರೆತ ಮೇಲೆ ಅವರು ಹೆಚ್ಚುವರಿ ಧಾನ್ಯವನ್ನು ಯೋಜನೆಗೆ ದಾನ ಮಾಡುತ್ತಾರೆ. ಇವರಲ್ಲಿ ಕೆಲವರು ಚರಖಾವನ್ನು ಸುಸ್ಥಿತಿಯಲ್ಲಿ ಇಡುವುದನ್ನೂ ಕಲಿತಿದ್ದಾರೆ. ಈ ಯೋಜನೆಯ ಅಂಗವಾಗಿ ಇದುವರೆಗೂ ೨೬ ಕೇಂದ್ರಗಳಲ್ಲಿ ೭೭ಸಾವಿರಕ್ಕೂ ಹೆಚ್ಚು ದಾರದ ಲಡಿಗಳು ತಯಾರಾಗಿವೆ. ೪೦ ಸಾವಿರ ಕಿಲೋ ಅಕ್ಕಿ ಮತ್ತು ೮೦ ಸಾವಿರ ಕಿಲೋ ಬೇಳೆಯನ್ನು ವಿತರಣೆ ಮಾಡಲಾಗಿದೆ.

– (ಶಾಂತಿ ಸೇವಕದಿಂದ)

****

ಖಾದಿ ಬಟ್ಟೆಯ ಉತ್ಕೃಷ್ಟತೆ

ಇಂಗ್ಲಿಷರು ಭಾರತದಲ್ಲಿಯ ಬಟ್ಟೆಯ ಕಲೆಯ ಬಗ್ಗೆ ಹೇಳಿದ ವಿಶೇಷತೆಯ ಉದಾಹರಣೆಯನ್ನು ನೋಡಿ :–

೧೭ನೇ ಶತಮಾನದ ಮಧ್ಯಭಾಗದದಲ್ಲಿ ಆಗಮಿಸಿದ್ದ ಪ್ರಾನ್ಸ್ ವ್ಯಾಪಾರಿ ಟ್ರೈವರಿನಿ ಬಟ್ಟೆಯ ವರ್ಣನೆ ಮಾಡುತ್ತಾ ಹೀಗೆ ಬರೆದಿದ್ದಾನೆ, "ಬಟ್ಟೆ ಎಷ್ಟೊಂದು ಸುಂದರ ಮತ್ತು ಹಗುರಾಗಿರುತ್ತದೆ ಎಂದರೆ ಕೈಯಲ್ಲಿ ಇಟ್ಟು ನೋಡಿದರೆ ಅದರ ಸ್ಪರ್ಶ ಜ್ಞಾನವೇ ಆಗುವುದಿಲ್ಲ. ನಾಜುಕಾದ ನೇಯ್ಗೆ ಕಷ್ಟದಿಂದ ಕಂಡು ಬರುತ್ತದೆ. ಈ ಬಟ್ಟೆಯನ್ನು ಧರಿಸಿದವರ ಶರೀರ ಬಹಳ ಸ್ಪಷ್ಟವಾಗಿ ಕಾಣುತ್ತದೆ. ಅಂದರೆ ಅವನು ನಗ್ನವಾಗಿದ್ದಾನೇನೋ ಅನಿಸುತ್ತದೆ. ಜಹಾಂಗೀರ್‌ನ ಕಾಲದಲ್ಲಿ ೧೫ ಗಜ ಉದ್ದ ೧ ಗಜ ಅಗಲದ ಥಾಕಾದ ಮಲ್ಮಲಿನ್ ತೂಕ ಕೇವಲ ನೂರು ಗ್ರಾಂ ಇರುತ್ತಿತ್ತು.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀಮತಿ ಚಂಪೂಬಾಯಿ – ಸೆಟ್ಲೂರು
ಶ್ರೀ ಹೆಚ್.ಎಸ್.ದೊರೆಸ್ವಾಮಿ – ಬೆಂಗಳೂರು
ಶ್ರೀ ಬಿ.ಕೆ. ಸೀತಾರಾಂ – ಮೈಸೂರು
ಶ್ರೀ ಆದಿನಾರಾಯಣಶೆಟ್ಟಿ – ಮೈಸೂರು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಭೀಮ್‌ಸಿಂಗ್‌ಗೌಸಿ, – ತುಮಕೂರು
ಶ್ರೀಮತಿ ಸರಸ್ವತಿ ಮುನೆನ್ನಿ – ಬೆಳಗಾಂ
ಶ್ರೀ ಎಚ್.ಕೆ. ರಂಗಾಚಾರ್ – ಚನ್ನಪಟ್ಟಣ
ಶ್ರೀ ಕೆ.ಎಸ್.ರಾವ್ – ಗುರುಗಾವ್

ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂ ಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆರೆದ–ಅಂಚೆ

MND / 470 / 2009-2011
. no. KAR / KAN / 2000 / 3820



ಶ್ರೀಮತಿ/ ಶ್ರೀ..............................

[illegible]
[illegible]
[illegible]
[illegible]
[illegible]

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote,
Dist- Mandya – 571431 Phone: 08236-316 +4 e-mail : janapada@yahoo.com web : janapada.net
Printed at Sanketh, Mudrana, Melkote.